ವಿಷಯಾನುಕ್ರಮಣಿಕೆ

ಅಧ್ಯಾತ್ಮಗ್ರಂಥಾವಳಿ

# ಭಗವಚ್ಚರಣಸ್ತೋತ್ರಮ್

( ಅರ್ಥವಿವರಣೆಗಳೊಡನೆ )

(ಶ್ರೀಬ್ರಹ್ಮಾನಂದಸ್ವಾಮಿಗಳವರು ಅನುಗ್ರಹಿಸಿರುವ
ಸಾಧನಪ್ರಧಾನವಾದ ಪ್ರಕರಣ)

ವಿವರಣಕರ್ತರು :
ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಕ್ರಮಾಂಕ ೫೧

ಅಧ್ಯಾತ್ಮಪ್ರಕಾಶಕಾರ್ಯಾಲಯ,
ಹೊಳೆನರಸೀಪುರ.
1989

ನಾಲ್ಕನೆಯ ಸಂಸ್ಕರಣ–1989

( ೧೦೦೦ ಪ್ರತಿಗಳು )

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು

All Rights Reserved

ಮುದ್ರಣಸ್ಥಾನ :

ಅಧ್ಯಾತ್ಮಪ್ರಕಾಶ ಮುದ್ರಣಾಲಯ,

ಹೊಳೆನರಸೀಪುರ.

# ಪೀಠಿಕೆ

ಈ ನಮ್ಮ ಭರತಖಂಡದಲ್ಲಿರುವ ಅಧ್ಯಾತ್ಮಶಾಸ್ತ್ರಗಳಲ್ಲಿ ಬೋಧೆಯು ಎರಡು ಪ್ರಕಾರವಾಗಿರುವದು. ಒಂದು ಭಾಗವು ಸಿದ್ಧಾಂತವನ್ನು ಬೋಧಿಸುವದು ; ಇನ್ನೊಂದು ಭಾಗವು ತತ್ತ್ವಾನುಭವಕ್ಕೆ ಮೊದಲನೆಯ ಮೆಟ್ಟಿಲಾಗಿ ಸಾಧನಗಳನ್ನು ಉಪದೇಶಿಸುವದು. ಹೀಗೆ ಇವೆರಡರ ವಿಷಯಭಾಗವು ಬೇರೆ ಬೇರೆಯಾದರೂ ಸಾಧನವನ್ನು ಅಭ್ಯಾಸಮಾಡುತ್ತಾ ತತ್ತ್ವಾನುಸಂಧಾನವನ್ನು ಮಾಡುವವರಿಗೆ ಮಾತ್ರವೇ ಸಿದ್ಧಾಂತವು ಸರಿಯಾಗಿ ತಿಳಿಯುವದೆಂಬ ಕಾರಣದಿಂದ ಸಾಧನಗಳನ್ನು ಸಿದ್ಧಾಂತದೊಡನೆ ಸೇರಿಸಿಯೇ ಶಾಸ್ತ್ರಗಳಲ್ಲಿ ವಿವರಿಸಿ ಹೇಳಿರುತ್ತದೆ.

ಈಗ ಪ್ರಕಾಶಕ್ಕೆ ತಂದಿರುವ ಈ ಪ್ರಕರಣವು ಇಂಥವುಗಳಲ್ಲಿ ಒಂದಾಗಿದೆ. ಇದಕ್ಕೆ ಗ್ರಂಥಕರ್ತರು "ಭಗವದಾಶ್ರಯಣಸ್ತವ" ಎಂದು ಹೆಸರಿಟ್ಟಿರುವರಾದರೂ ಪ್ರತಿಶ್ಲೋಕದ ಕೊನೆಯಲ್ಲಿರುವ 'ಶರಣಮ್' ಎಂಬ ಮಾತಿನಿಂದ "ಭಗವಚ್ಛರಣಸ್ತೋತ್ರ"ವೆಂಬ ಹೆಸರಿನಿಂದಲೇ ಇದು ಸ್ತೋತ್ರಸಾಹಿತ್ಯದಲ್ಲಿ ಪ್ರಸಿದ್ಧಿಗೆ ಬಂದಿರುತ್ತದೆ.

ವಿವರಣಕರ್ತರಾದ ಬ್ರಹ್ಮೀಭೂತ ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳು ಅಧ್ಯಾತ್ಮವಿದ್ಯೆಯ ಸಾಧನ-ಸಿದ್ಧಾಂತಗಳೆರಡನ್ನೂ ತಮ್ಮ ಸರಳವಾದ ಕನ್ನಡಭಾಷಾಶೈಲಿಯಲ್ಲಿ ಈ ಗ್ರಂಥದಲ್ಲಿ ನಿರೂಪಿಸಿರುತ್ತಾರೆ. ಸಿದ್ಧಾಂತ ಭಾಗವನ್ನೇ ಹೆಚ್ಚು ವಿವರವಾಗಿ ಬಯಸುವವರು ಶ್ರೀಶ್ರೀಗಳವರ ಇನ್ನೂ ಕೆಲವು ಬೇರೆಯ ಕೃತಿಗಳನ್ನು ಅಧ್ಯಯನಮಾಡಬೇಕು. ಈ ಗ್ರಂಥದ ತಿದ್ದಿದ ನಾಲ್ಕನೆಯ ಆವೃತ್ತಿಯನ್ನು ಈಗ ಹೊರತರಲಾಗಿದೆ. ಮಹಾಜನರು ಎಂದಿನಂತೆ ಈ ಗ್ರಂಥವನ್ನೂ ಬರಮಾಡಿಕೊಂಡು ಓದಿ ಪ್ರೋತ್ಸಾಹಿಸುವರಾಗಿ ನಂಬಿದೆ.

ಇತಿ–

ತಾ|| 1–4–1989 ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿ,

ಹೊಳೆನರಸೀಪುರ. ಅಧ್ಯಾತ್ಮಗ್ರಂಥಾವಳಿಯ ಸಂಪಾದಕ.

# ವಿಷಯಾನುಕ್ರಮಣಿಕೆ


| ಶ್ಲೋಕ | ಶ್ಲೋಕದ ವಿಷಯ |
|---|---|
| | ಪರಮೇಶ್ವರನ ಲಕ್ಷಣ |
| ೨. | ಜೀವನವು ದುಃಖಮಯ |
| ೩. | ದೇಹದ ನಶ್ವರತೆ, ಅಂತಃಕರಣದ ಸ್ವಭಾವ |
| ೪. | ಜೀವನದ ಅಸ್ಥಿರತೆ |
| ೫. | ಜೀವನದಲ್ಲಿ ಆಯವ್ಯಯಗಳು |
| ೬. | ಮೂರು ವಿಧವಾದ ತಪಸ್ಸು |
| ೭. | ತಪಸ್ಸುಗಳ ವಿವರ |
| ೮. | ಸತ್ತ್ವಗುಣದ ಪ್ರಾಮುಖ್ಯತೆ |
| ೯. | ಗೌಣಭಕ್ತಿ |
| ೧೦. | ಯಜ್ಞದಾನಾದಿಸಾಧನಗಳು |
| ೧೧. | ಸತ್ಸಂಗ |
| ೧೨. | ಸಮದೃಷ್ಟಿ |
| ೧೩. | ಶುಭವಾಸನೆಗಳು |
| ೧೪. | ಅಂತರ್ಮುಖತ್ವ |
| ೧೫. | ಬರಿಯ ಬಾಹ್ಯತ್ಯಾಗದ ವ್ಯರ್ಥತೆ |
| ೧೬. | ಇಹಪರಭೋಗಗಳ ವಿನಶ್ವರತ್ವ |
| ೧೭. | ಯೋಗಸಾಧನೆ |
| ೧೮. | ಗುರುಸೇವೆ |
| ೧೯. | ತೀರ್ಥಾದಿಗಳ ಸೇವೆ |
| ೨೦. | ಸಾಧನಸಂಪತ್ತಿಲ್ಲದ ವೇದಾಂತವಿಚಾರವು ವ್ಯರ್ಥ |
| ೨೧. | ನಾಮಸ್ಮರಣೆ |
| ೨೨. | ಗ್ರಂಥಪಠನಕ್ಕೆ ಫಲ |

|| ಓಂ ||

# ಭಗವಚ್ಛರಣಸ್ತೋತ್ರಮ್

—o—o—o—o—

ಶ್ರೀಮನ್ಮೌಕ್ತಿಕರಾಮೋದಾಸೀನರ ಶಿಷ್ಯರಾದ ಶ್ರೀಬ್ರಹ್ಮಾನಂದ ಸ್ವಾಮಿಗಳೆಂಬ ಯತಿವರೇಣ್ಯರು ಸಾಧನಗಳಿಲ್ಲದ ಜೀವರಿಗೆ ಪರಮಾರ್ಥ ತತ್ತ್ವವು ತಿಳಿಯಲಾರದೆಂದು ನಿಶ್ಚಯಿಸಿ, ತತ್ತ್ವಾನುಭವವನ್ನು ಪಡೆಯು ವಾತನು ಮೊದಲೇ ಮಾಡಿರಬೇಕಾದ ಸಾಧನಗಳನ್ನೆಲ್ಲ ತಿಳಿಸುವ ಒಂದು ಚಿಕ್ಕ ಪ್ರಕರಣವನ್ನು ರಚಿಸಿರುವರು. ಸಕಲಸಾಧನಗಳೂ ಸದ್ಗುರುಮೂರ್ತಿಯಾದ ಶ್ರೀಪರಮೇಶ್ವರನಿಂದಲೇ ಲಭಿಸುವವಾದ್ದರಿಂದ ಆ ಪರಮೇಶ್ವರನನ್ನು ಶರಣು ಹೊಗುವದೇ ಪರಮಾರ್ಥಕ್ಕೆ ಉತ್ತಮವಾದ ಸಾಧನವೆಂದು ಸೂಚಿಸುವ ಈ ಅಮೂಲ್ಯಗ್ರಂಥಕ್ಕೆ "ಭಗವದಾಶ್ರಯಣ" ಎಂದು ಹೆಸರಿಟ್ಟಿರುವರು. ಈ ಸ್ತೋತ್ರಗ್ರಂಥದ ಮಂಗಲಶ್ಲೋಕವು ಯಾವದೆಂದರೆ :–

## ೧. ಪರಮೇಶ್ವರನ ಲಕ್ಷಣ

**ಸಚ್ಚಿದಾನನ್ದರೂಪಾಯ ಭಕ್ತಾನುಗ್ರಹಕಾರಿಣೇ ।**
**ಮಾಯಾನಿರ್ಮಿತವಿಶ್ವಾಯ ಮಹೇಶಾಯ ನಮೋ ನಮಃ || ೧ ||**

### ಅರ್ಥ

ಸಚ್ಚಿದಾನಂದಸ್ವರೂಪನಾಗಿಯೂ ಭಕ್ತರಿಗೆ ಅನುಗ್ರಹವನ್ನು ಮಾಡುವವನಾಗಿಯೂ ಮಾಯೆಯಿಂದ ಪ್ರಪಂಚವನ್ನೆಲ್ಲ ನಿರ್ಮಿಸಿರು ವವನಾಗಿಯೂ ಇರುವ ಮಹೇಶ್ವರನಿಗೆ ನಮಸ್ಕಾರ, ನಮಸ್ಕಾರ !

### ವಿಚಾರ

ಈ ಶ್ಲೋಕದಲ್ಲಿ ಪರಮಾತ್ಮನ ಲಕ್ಷಣವನ್ನು ಹೇಳಿರುತ್ತದೆ. ಲಕ್ಷಣ ವೆಂದರೆ ವಸ್ತುವಿಂಥದ್ದೆಂದು ತೋರಿಸಿಕೊಡುವ ಗುರುತು. ಇಂಥ ಲಕ್ಷಣ

ವನ್ನು ತಿಳಿಸುವ ವಾಕ್ಯಕ್ಕೆ ಲಕ್ಷಣವಾಕ್ಯವೆಂದು ಹೆಸರು. ಲಕ್ಷಣವು ಸ್ವರೂಪ ಲಕ್ಷಣವೆಂದೂ, ತಟಸ್ಥಲಕ್ಷಣವೆಂದೂ, ವಿಶೇಷಲಕ್ಷಣವೆಂದೂ–ಮೂರು ಬಗೆ. ವಸ್ತುವಿನ ಸ್ವರೂಪವನ್ನೇ ತಿಳಿಸುವ ಲಕ್ಷಣವು ಸ್ವರೂಪಲಕ್ಷಣವೆನಿಸುವದು. ಉದಾಹರಣೆಗೆ: 'ಆ ಬಹುಪ್ರಕಾಶವುಳ್ಳವನೇ ಚಂದ್ರನು' ಎಂಬಲ್ಲಿ ಅತಿಶಯವಾದ ಬೆಳಕಿರುವದೆಂಬುದು ಚಂದ್ರನ ಸ್ವರೂಪವೇ ಆಗಿರುವದರಿಂದ ಸ್ವರೂಪಲಕ್ಷಣವು. ವಸ್ತುವಿನ ಸ್ವರೂಪಕ್ಕೆ ಸೇರದೆ ಇದ್ದರೂ ಅದನ್ನು ಗುರುತಿಸುವದಕ್ಕೆ ಸಹಾಯಕವಾಗಿರುವದು ತಟಸ್ಥಲಕ್ಷಣವೆನಿಸುವದು. ಹೇಗೆಂದರೆ "ಆ ಕೊಂಬೆಯ ಮೇಲೆ ಇರುವವನೇ ಚಂದ್ರನು" ಎಂಬಲ್ಲಿ ಕೊಂಬೆಯು ಚಂದ್ರನಿಗೆ ಸಂಬಂಧಪಟ್ಟಿರುವದಿಲ್ಲವಾದರೂ ಚಂದ್ರನನ್ನು ಗುರುತಿಸುವದಕ್ಕೆ ಸಹಾಯಕವಾಗಿರುವದರಿಂದ ತಟಸ್ಥಲಕ್ಷಣವು. ವಸ್ತುವಿಗೆ ಸೇರಿದ್ದಾಗಿ ಅದನ್ನು ಆ ಜಾತಿಯ ಬೇರೆ ವಸ್ತುಗಳಿಂದ ಬೇರ್ಪಡಿಸಿ ತಿಳಿಸುವ ಲಕ್ಷಣವು ವಿಶೇಷಲಕ್ಷಣವು. ಉದಾಹರಣೆಗೆ: "ಕೇಸರಾದಿಗಳಿಂದ ಕೂಡಿರುವ ಕ್ರೂರಮೃಗವೇ ಸಿಂಹವು" ಎಂಬಲ್ಲಿ ಕೇಸರಾದಿಗಳು ಸಿಂಹಕ್ಕೆ ಸೇರಿಕೊಂಡು ಮಿಕ್ಕ ಮೃಗಗಳಿಂದ ಅದನ್ನು ಬೇರ್ಪಡಿಸಿ ತಿಳಿಸುವದರಿಂದ ವಿಶೇಷಣರೂಪವಾದ ಲಕ್ಷಣವು. ಪರಮಾತ್ಮನಿಗೆ ಇರುವ ಮೊದಲನೆಯ ಎರಡು ಬಗೆಯ ಲಕ್ಷಣವನ್ನು ಈ ಶ್ಲೋಕದಲ್ಲಿ ಹೇಳಿರುತ್ತದೆ.

ಅದು ಹೇಗೆಂದರೆ, 'ಮಾಯೆಯಿಂದ ಪ್ರಪಂಚವನ್ನು ನಿರ್ಮಿಸಿರುವವನಾಗಿಯೂ' ಎಂಬುದು ತಟಸ್ಥಲಕ್ಷಣವನ್ನು ತಿಳಿಸುವ ವಾಕ್ಯವು. ಬೇರೆ ಬೇರೆಯ ಹೆಸರುಗಳು, ಬೇರೆಬೇರೆಯ ರೂಪಗಳು, ಬೇರೆಬೇರೆಯ ಕರ್ಮಗಳು –ಎಂಬ ಸ್ವರೂಪದಿಂದ ಪ್ರಪಂಚವು ನಮಗೆ ಕಾಣುತ್ತಿರುವದಷ್ಟೆ? ಇದರಲ್ಲಿ ಕರ್ಮವನ್ನು ಮಾಡುತ್ತಲೂ ಅದರ ಫಲವಾಗಿ ಸುಖದುಃಖಗಳನ್ನು ಅನುಭವಿಸುತ್ತಲೂ ಇರುವ ಅನೇಕ ಜೀವರು ಕಾಣುತ್ತಿರುವರು. ಇವರು ಮಾಡುವ ಕರ್ಮಗಳಿಗೆ ಇಂಥ ಕಾರಣವಿದ್ದರೆ ಇಂಥ ಸ್ಥಳದಲ್ಲಿ, ಇಂಥ ಕಾಲದಲ್ಲಿ, ಇಂಥ ಫಲವಾಗಬೇಕು– ಎಂಬ ಕಟ್ಟುನಿಟ್ಟಾದ ನಿಯಮವಿರುವದು. ಹೀಗೆ ಹರಡಿರುವ ಪ್ರಪಂಚವನ್ನು ನೋಡಿದರೆ ಇದು ಹೀಗೆ ಆಗಿರಬೇಕೆಂದು ಊಹಿಸಿ ತಿಳಿಯುವದುಕೂಡ ಮಹಾಪ್ರಜ್ಞಾಶಾಲಿಗಳಾದ ಶಿಲ್ಪಿಶ್ರೇಷ್ಠರಿಗೂ ಆಗುವಂತಿಲ್ಲವಾದ್ದರಿಂದ ಇಂಥ ವಿಚಿತ್ರವಾದ ಪ್ರಪಂಚವನ್ನು 'ಮಾಯೆಯಿಂದ',

ಕಣ್ಣುಕಟ್ಟಿನ ವಿದ್ಯೆಯವನು ಕ್ಷಣಮಾತ್ರದಲ್ಲಿ ಬೇಕಾದಷ್ಟು ವಸ್ತುಗಳನ್ನು ಸೃಷ್ಟಿಮಾಡುವಂತೆ, ನಿರ್ಮಾಣಮಾಡಿರಬೇಕಾದರೆ ಅಂಥ ಪರಮೇಶ್ವರನು ಎಂಥ ಸರ್ವಜ್ಞನಾಗಿರಬೇಕು ! ಎಂಥ ಸರ್ವಶಕ್ತನಾಗಿರಬೇಕು !– ಎಂದು ನಮಗೆಲ್ಲರಿಗೂ ಸಹಜವಾಗಿ ತೋರುತ್ತದೆ. ಈ ಪ್ರಪಂಚವು ಪರಮೇಶ್ವರನ ಮಾಯೆಯಿಂದ ನಿರ್ಮಿತವಾಗಿರುವದರಿಂದ ಅವನ ಸ್ವರೂಪಕ್ಕೆ ಸೇರಿದ್ದಲ್ಲ ; ಆದರೂ ಅವನನ್ನು ಅರಿತುಕೊಳ್ಳುವದಕ್ಕೆ ಅನುಕೂಲವಾಗಿರುವದರಿಂದ ಇದು 'ತಟಸ್ಥಲಕ್ಷಣವು'.

'ಸಚ್ಚಿದಾನಂದರೂಪನಾಗಿಯೂ' ಎಂಬುದು ಪರಮಾತ್ಮನ ಸ್ವರೂಪ ವನ್ನೇ ತಿಳಿಸುವದರಿಂದ ಸ್ವರೂಪಲಕ್ಷಣವಾಗಿರುವದು. ಹಿಂದಿನ ಕಾಲ, ಈಗಿನ ಕಾಲ, ಮುಂದಿನ ಕಾಲ– ಎಂಬ ಮೂರು ಕಾಲದಲ್ಲಿಯೂ ಯಾವ ವಿಕಾರವನ್ನೂ ಹೊಂದದೆ ಕಾಲಾತೀತವಾದ ತನ್ನ ರೂಪದಿಂದಲೇ ಇರುವದ ರಿಂದ ಪರಮಾತ್ಮನು ಸತ್ಯಸ್ವರೂಪನಾಗಿರುವನು. ಅನೇಕ ಬಗೆಯ ವಿದ್ಯಾ ಸ್ಥಾನಗಳಿಗೆ ಆಶ್ರಯವಾಗಿ ನಮಗೆ ಬೇಕಾದ ಧರ್ಮ, ಅರ್ಥ, ಕಾಮ, ಮೋಕ್ಷ –ಎಂಬ ನಾಲ್ಕು ಬಗೆಯ ಪುರುಷಾರ್ಥಗಳನ್ನೂ ಬೆಳಗಿಸುತ್ತಾ ಸರ್ವಜ್ಞನಂತೆ ಇರುವ ವೇದಕ್ಕೂ ಕಾರಣನಾಗಿರುವದರಿಂದಲೂ ನಮ್ಮಗಳೆಲ್ಲರಲ್ಲಿಯೂ ತೋರುವ ಅರಿವಿನ ತಿರುಳೇ ಆಗಿರುವದರಿಂದಲೂ ಆತನು ಜ್ಞಾನಸ್ವರೂಪ ನಾಗಿರುವನು. ಬ್ರಹ್ಮನವರೆಗಿರುವ ಸಕಲ ಜೀವರ ಆನಂದಗಳೂ ಆತನ ಸ್ವರೂಪದ ಒಂದು ಕಣವಾಗಿರುವದರಿಂದಲೂ ನಿಜವಾಗಿ ನಮ್ಮೆಲ್ಲರ ಆತ್ಮನೇ ಆಗಿರುವದರಿಂದ ಇನ್ನಿಲ್ಲವೆನ್ನುವಂಥ ಪ್ರೇಮಕ್ಕೆ ಆಸ್ಪದನಾಗಿರುವದರಿಂದಲೂ ಆತನು ಆನಂದಸ್ವರೂಪನಾಗಿರುವನು. ಈ 'ಸಚ್ಚಿದಾನಂದ'ಸ್ವರೂಪ ವೆಂಬುದು ಆತನನ್ನು ಇರುವಂತೆಯೇ ನೇರಾಗಿ ತಿಳಿಸುವದರಿಂದ ಇದು ಆತನ ಸ್ವರೂಪಲಕ್ಷಣವು.

ಇಂಥ ಪರಮಾತ್ಮನು ಪ್ರಪಂಚವನ್ನು ಏಕೆ ಸೃಷ್ಟಿಸಿದನು ? ಸೃಷ್ಟಿಯೇ ಇಲ್ಲದಿದ್ದರೆ ನಮಗೆ ಸಂಸಾರದ ಕೋಟಲೆಯೂ ಇರುತ್ತಿರಲಿಲ್ಲವಲ್ಲ ! ಆ ಬಂಧನವನ್ನು ಬಿಡಿಸಿಕೊಳ್ಳಲೆಂದು ಸಾಧನಗಳನ್ನು ಏರ್ಪಡಿಸುವ ಆವಶ್ಯಕತೆ ಯೂ ಬರುತ್ತಿರಲಿಲ್ಲವಲ್ಲ !– ಹೀಗೆಂದು ಕೆಲವರು ಆಕ್ಷೇಪಿಸುವರು. ಈ ಆಕ್ಷೇಪಕ್ಕೆ ಸಮಾಧಾನವು 'ಭಕ್ತರಿಗೆ ಅನುಗ್ರಹವನ್ನು ಮಾಡುವವನಾಗಿಯೂ'

ಎಂಬ ವಿಶೇಷಣದಲ್ಲಿ ಅಡಗಿರುವದು. ನಿತ್ಯತೃಪ್ತನಾದ ಪರಮೇಶ್ವರನು ತನ್ನ ಆನಂದದ ಬೆಲೆಯನ್ನು ಭಕ್ತರಿಗೆ ಚೆನ್ನಾಗಿ ತೋರಿಸಬೇಕೆಂದು ವಿಚಿತ್ರ ತರವಾದ ಈ ಪ್ರಪಂಚವನ್ನು ಸೃಷ್ಟಿಸಿರುವನು. ದೇಹಾದಿಗಳೇ ತಾನೆಂಬ ಅಭಿಮಾನದಿಂದ ಸಂಸಾರದಲ್ಲಿ ದುಃಖಪಟ್ಟು ಅವರು ಹಿಂತಿರುಗಿದರೆ ಅವರಿಗೆ ಆನಂದವು ಮತ್ತೆ ಬೇಗ ಸಿಕ್ಕುವಹಾಗೆ ಶಾಸ್ತ್ರಾಚಾರ್ಯರುಗಳ ಮೂಲಕ ವಾಗಿ ಸಾಧನಗಳನ್ನು ನಿರೂಪಿಸಿರುವನು ; ಆ ಸಾಧನಗಳನ್ನು ನಡೆಸುವ ಭಕ್ತರಿಗೆ ಅವರವರ ಹೃದಯದಲ್ಲಿಯೇ ಇದ್ದುಕೊಂಡು ಸಾಧನವು ಪಕ್ವವಾದ ಕೂಡಲೆ ಪ್ರಸನ್ನನಾಗಿ ಆನಂದಗೊಳಿಸುವನು. ಇದು ಸಚ್ಚಿದಾನಂದಸ್ವರೂಪ ನಾದ ಆ ಪರಮಾತ್ಮನಿಗೆ ಸ್ವಭಾವವಾಗಿರುತ್ತದೆ.

ಹೀಗೆ ತಾನು ಆನಂದಸ್ವರೂಪನಾಗಿಯೇ ಇದ್ದುಕೊಂಡು ತನ್ನ ಭಕ್ತರ ಅನುಗ್ರಹಕ್ಕಾಗಿ ಪ್ರಪಂಚವನ್ನು ನಿರ್ಮಿಸಿರುವ "ಪರಮೇಶ್ವರನಿಗೆ" ಎಂದರೆ ಎಲ್ಲರಿಗೂ ಆತ್ಮನಾಗಿ ಅಂತರ್ಯಾಮಿಸ್ವರೂಪದಿಂದ ಲೋಕವನ್ನೆಲ್ಲ ವ್ಯಾಪಿಸಿ ಕೊಂಡು ಎಲ್ಲವನ್ನೂ ಆಳುತ್ತಿರುವ ಭಗವಂತನಿಗೆ, ನಮಸ್ಕಾರವು– ಎಂಬುದು ಶ್ಲೋಕದ ತಾತ್ಪರ್ಯವು.

## ೨. ಜೀವನವು ದುಃಖಮಯ

ರೋಗಾ ಹರನ್ತಿ ಸತತಂ ಪ್ರಬಲಾಃ ಶರೀರಂ
ಕಾಮಾದಯೋಽಪ್ಯನುದಿನಂ ಪ್ರದಹನ್ತಿ ಚಿತ್ತಮ್ ।
ಮೃತ್ಯುಶ್ಚ ನೃತ್ಯತಿ ಸದಾ ಕಲಯನ್ ದಿನಾನಿ
ತಸ್ಮಾತ್ತ್ವಮದ್ಯ ಶರಣಂ ಮಮ ದೀನಬನ್ಧೋ ॥ ೨ ॥

### ಅರ್ಥ

ಬಹುಬಲವಾದ ರೋಗಗಳು ಶರೀರವನ್ನು ಯಾವಾಗಲೂ ಕ್ಷಯಿಸುತ್ತಿರುವವು ; ದಿನದಿನವೂ ಕಾಮಾದಿಗಳೂ ಮನಸ್ಸನ್ನು ಸುಡುತ್ತಿರುವವು ; ಮೃತ್ಯುದೇವತೆಯೂ ಯಾವಾಗಲೂ ದಿನಗಳನ್ನು

ಎಣಿಸುತ್ತಾ ಕುಣಿಯುತ್ತಿರುವದು. ಆದ್ದರಿಂದ ಎಲೈ ದೀನಬಂಧುವೆ, ಈಗ ನೀನೇ ನನಗೆ ಶರಣು.

## ವಿಚಾರ

ಕೆಲವರು ತಮ್ಮ ಮೈಯಲ್ಲಿ ಬಲವಿರುವದೆಂದೂ ಮನಸ್ಸಿನಲ್ಲಿ ಉಲ್ಲಾಸವಿರುವದೆಂದೂ ನಂಬಿ ತಾವು ಯಾವಾಗಲೂ ಹೀಗೆಯೇ ಇರುವೆವೆಂದು ಮೈಮರೆತಿರುತ್ತಾರೆ. ಆದ್ದರಿಂದ ದೇಹಾದಿಗಳು ನಾವು ನೆಚ್ಚಿರುವಷ್ಟು ಸ್ಥಿರವಲ್ಲವೆಂದೂ ಜಾಗ್ರತೆಯಾಗಿ ಪರಮಾತ್ಮನಿಗೆ ಶರಣುಹೊಗುವದೇ ಮೇಲೆಂದೂ ತೋರಿಸುವದಕ್ಕಾಗಿ ಇಲ್ಲಿ ದೇಹಾದಿಗಳ ದೋಷವನ್ನು ತಿಳಿಸುತಾರೆ.

**ಶರೀರವು** ಗಟ್ಟಿಯಾಗಿರುವದೆಂದು ನಂಬಿ ಭೋಗಿಸುವದಕ್ಕೆ ಬೇಕಾದ ಸಾಮಗ್ರಿಗಳನ್ನೇ ಹುಡುಕುತ್ತಾ ಕಾಲಕಳೆಯುವವನು ಅತ್ಯಂತ ಮೂಢನು. ಏಕೆಂದರೆ ಈ ದೇಹವು ಪ್ರಬಲವಾದ ರೋಗಗಳಿಂದ ಯಾವಾಗಲೂ ಸವೆಯುತ್ತಲೇ ಇರುವದು. ರೋಗವೆಂದರೆ ಬರಿಯ ಜ್ವರ ಮುಂತಾದದ್ದೇ ಅಲ್ಲ; ದೇಹವನ್ನು ಹಿಂಸೆಗೊಳಿಸುವದೆಲ್ಲ ರೋಗವೇ. ಉದಾಹರಣೆಗೆ, ಕೈಕಾಲುಮುದುರಿಕೊಂಡು ಅಶುಚಿಯಾದ ಕಶ್ಮಲದಲ್ಲಿ ಬಿದ್ದು ಹೊರಳಾಡುತ್ತಾ ಸ್ವಭಾವದಿಂದ ತನಗೆ ಸಿಕ್ಕಿದಷ್ಟು ಆಹಾರದಿಂದ ತೃಪ್ತನಾಗಿ ಬಿದ್ದು ನರಳುತ್ತಿರುವ ಗರ್ಭವಾಸವೆಂಬುದು ಈ ದೇಹಕ್ಕೆ ರೋಗವಲ್ಲದೆ ಮತ್ತೇನು ? ಹುಟ್ಟಿದ ಮೇಲೆ ಬಾಲಗ್ರಹವೇ ಮುಂತಾದವುಗಳಿಂದ ಸಂಕಟಪಡುವದೂ, ಕ್ರಿಮಿಕೀಟಾದಿಗಳು ಕಡಿದರೆ ತಪ್ಪಿಸಿಕೊಳ್ಳುವ ಸ್ವಾತಂತ್ರ್ಯವಿಲ್ಲದೆ ಗೋಳಿಡುವದೂ, ಹಸಿವುಬಾಯಾರಿಕೆಗಳುಂಟಾದರೆ ಅವುಗಳನ್ನು ನಿವಾರಿಸಿಕೊಳ್ಳುವ ಶಕ್ತಿಯಾಗಲಿ ಹೇಳಿಕೊಳ್ಳುವದಕ್ಕೆ ಬಾಯಾಗಲಿ ಇಲ್ಲದೆ ಸಂಕಟಪಡುವದೂ ರೋಗವಲ್ಲವೆ? ಅಪಥ್ಯವಾದ ಆಹಾರವಿಹಾರಗಳನ್ನು ಪೋಷಕರು ಸೇವನೆಮಾಡಿದರೆ ಜ್ವರವೇ ಮುಂತಾದ ಬಾಧೆಗಳು ಮಕ್ಕಳಿಗೆ ಬರುವವಷ್ಟೆ ? ಅವಂತೂ ರೋಗಗಳೆಂಬುದರಲ್ಲಿ ಯಾರಿಗೂ ಸಂದೇಹವೇ ಇರುವದಿಲ್ಲ. ಇವೆಲ್ಲ ನಾವು ಮಗುವಾಗಿರುವಾಗ ನಮ್ಮ ದೇಹಕ್ಕೆ ಬಂದೊದಗುವ ರೋಗಗಳು. ಸ್ವಲ್ಪ ದೊಡ್ಡವನಾದರೆ ಮನಸ್ಸಿಗೆ ಬಂದಂತೆ ನಡೆಯುವದಕ್ಕಿಲ್ಲದೆ ದೊಡ್ಡವರ ಮೇಲು ವಿಚಾರಣೆಯಿಂದ ಹೊಂದುವ ಕಿರುಕುಳವೂ ಓದುಬರಹಗಳನ್ನು ಕಲಿಯುವಾಗ

ಪಡುವ ಕಷ್ಟವೂ ಕ್ರೂರಚಿತ್ತರಾದ ಉಪಾಧ್ಯಾಯರಿಂದ ಒದಗುವ ಬಾಧೆಯೂ ಅವಶ್ಯವಾಗಿ ನಮ್ಮನ್ನು ಎದುರಿಸುವವು. ದೇಹಕ್ಕೂ ಮನಸ್ಸಿಗೂ ಬಾಧೆಯನ್ನುಂಟುಮಾಡುವದರಿಂದ ಇವೂ ಒಂದು ಬಗೆಯ ರೋಗಗಳೇ. ಇನ್ನೂ ದೊಡ್ಡವನಾದರೆ ನಿಯಮಗಳನ್ನು ಅನುಸರಿಸಿ ಲೋಕದಲ್ಲಿ ವ್ಯವಹರಿಸಬೇಕಾಗುವದರಿಂದಲೂ ಮತಾಚಾರದ ಕಟ್ಟಲೆಗಳನ್ನು ಅನುಸರಿಸಬೇಕಾಗುವದರಿಂದಲೂ ಪ್ರಾಯದಲ್ಲಿ ಸ್ತ್ರೀಸಂಬಂಧದಿಂದ ಎಷ್ಟೋ ತೊಂದರೆಗಳನ್ನನುಭವಿಸಬೇಕಾಗುವದರಿಂದಲೂ ಹೊಸ ಬಗೆಯ ರೋಗಗಳು ಈ ದೇಹಕ್ಕೆ ಮುತ್ತಿಕೊಳ್ಳುವವು. ಗೃಹಸ್ಥನಾದರೆ ಕುಟುಂಬವನ್ನು ರಕ್ಷಣೆಮಾಡುವದಕ್ಕಾಗಿ ಬಟ್ಟೆಬರೆಗಳನ್ನೂ ಒಡವೆವಸ್ತುಗಳನ್ನೂ ಹಣಕಾಸುಗಳನ್ನೂ ಮನೆಮಾರುಗಳನ್ನೂ ಹೊಲಗದ್ದೆಗಳನ್ನೂ ಕೂಡಿಹಾಕುವದರಲ್ಲಿಯೂ ಕೂಡಿಸಿದ್ದನ್ನು ಕಾಪಾಡಿಕೊಳ್ಳುವದರಲ್ಲಿಯೂ ಬೇರೊಂದು ಬಗೆಯ ರೋಗಗಳು ನಮಗೆ ಕಾಣಿಸಿಕೊಳ್ಳುವವು. ರಾಜನಾಗಿದ್ದರೆ ಈ ದೇಹಕ್ಕೆ ಎಷ್ಟು ತೊಂದರೆ ! ಮಂತ್ರಿಯಾಗಿದ್ದರೆ ಮತ್ತೂ ತೊಂದರೆ ; ಇನ್ನು ದಾಸನಾಗಿ ದುಡಿಯುತ್ತಿದ್ದರಂತೂ ಆಗುವ ತೊಂದರೆಯನ್ನು ಹೇಳಬೇಕಾದದ್ದೇ ಇಲ್ಲ. ಈ ತೊಂದರೆಗಳೂ ಒಂದು ಪ್ರಕಾರದ ರೋಗಗಳೇ. ಯಾವ ಸ್ಥಿತಿಯಲ್ಲಿಯೇ ಇರಲಿ, ವಾಯುಪೀಡೆ, ಅಗ್ನಿಪೀಡೆ, ಜಲಪೀಡೆ, ಸರ್ಪಪೀಡೆ, ಭೂತಪ್ರೇತಪಿಶಾಚಾದಿಗಳ ಪೀಡೆ– ಇವು ಬರಲೇಬಹುದಷ್ಟೆ ? ಇವುಗಳೆಲ್ಲ ಒಂದೊಂದು ರೀತಿಯ ರೋಗಗಳೇ. ಹೀಗೆ ದೇಹಕ್ಕೆ ಇರುವ ರೋಗಗಳು ಅಷ್ಟಿಷ್ಟೆಂದು ಹೇಳಲಾಗುವದಿಲ್ಲ. ಮನುಷ್ಯನು ಇವುಗಳನ್ನು ತಪ್ಪಿಸಿಕೊಳ್ಳುವದಕ್ಕೆ ಎಷ್ಟು ಪ್ರಯತ್ನಮಾಡಿದರೆ ಅಷ್ಟು ಬೇರೆಬೇರೆಯ ರೂಪದಲ್ಲಿ ಇವು ತೋರಿಕೊಳ್ಳುವವು. ಇವುಗಳಲ್ಲಿ ಸಣ್ಣಸಣ್ಣ ರೋಗಗಳನ್ನು ಹೇಗಾದರೂ ತಪ್ಪಿಸಿಕೊಳ್ಳಬಹುದು. ಆದರೆ "ಬಹು ಬಲವಾದ ರೋಗಗಳು ಈ ದೇಹವನ್ನು ಯಾವಾಗಲೂ ಸವೆಯಿಸುತ್ತಿರುವವು." ಇವುಗಳನ್ನು ಬರದಂತೆ ಮಾಡುವದಕ್ಕಾಗಲಿ ಬಂದಮೇಲೆ ಪರಿಹರಿಸಿಕೊಳ್ಳುವದಕ್ಕಾಗಲಿ ನಾವು ಶಕ್ತರಲ್ಲವೆಂದು ವಿಚಾರಶೀಲರಿಗೆ ಗೊತ್ತಾಗದೆ ಹೋಗುವದಿಲ್ಲ. ಆದ್ದರಿಂದ ಹೀಗೆ ಕ್ಷಣಕ್ಷಣಕ್ಕೂ ಸವೆಯುತ್ತಿರುವ ಈ ಶರೀರವು ಇನ್ನೂ ಗಟ್ಟಿಯಾಗಿರುವಾಗಲೇ ಅದರಿಂದ ಆಗುವ ಪ್ರಯೋಜನವನ್ನು ಹೊಂದಬೇಕು. ಧರ್ಮಪ್ರವರ್ತನೆಯಲ್ಲಿ ಈಗಲೆ ಈ ದೇಹವನ್ನು ಉಪಯೋಗಿಸಿಕೊಳ್ಳಬೇಕು.

ದೇಹದ ಯೋಗ್ಯತೆಯನ್ನು ಮೇಲೆ ವರ್ಣಿಸಿರುತ್ತದೆಯಷ್ಟೆ? ಇನ್ನು ಈ ದೇಹದ ಸಹಾಯದಿಂದ ನಾವು ಸುಖಪಡಬೇಕೆಂದು ಹಂಬಲಿಸುತ್ತಾ ಹಾತುವರಿಯುವುದಕ್ಕೆ ಕಾರಣವಾಗಿರುವ ಮನಸ್ಸನ್ನು ಕುರಿತು ಸ್ವಲ್ಪ ವಿಚಾರ ಮಾಡೋಣ. ಮನಸ್ಸೂ ದೇಹದಂತೆಯೇ ನಾನಾವಿಧವಾದ ಕೋಟಲೆಗೆ ಒಳಗಾಗಿರುವದು. ಏಕೆಂದರೆ 'ದಿನದಿನವೂ ಕಾಮಾದಿಗಳು ಈ ಮನಸ್ಸನ್ನು ಸುಡುತ್ತಿರುವವು.' ಕಾಮಾದಿಗಳೆಂದರೆ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ–ಎಂಬ ಆರು ಮನೋದೋಷಗಳು. ಆಸೆಯಿಂದ ನಮ್ಮ ಮನಸ್ಸಿನಲ್ಲಿ ಆಗುವ ತಳಮಳವೆಷ್ಟು! ಅದು ನೆರವೇರದಿದ್ದರೆ ತಲೆದೋರುವ ಸಿಟ್ಟಿನಿಂದ ನಾವು ಹೇಗೆ ಬೆಂದುಬೆಂಡಾಗುತ್ತಿರುವೆವು! ಇದ್ದದ್ದು ಹೋಗ ಬಾರದೆಂದೂ ಇಲ್ಲದ್ದು ಬರಬೇಕೆಂದೂ ನಾವು ಮಾಡುವ ವಿಶ್ವಪ್ರಯತ್ನಗಳಿಂದ ನಮ್ಮ ಮನಸ್ಸಿಗೆ ಆಗುವ ಸಂತಾಪವೇನು ಕಡಿಮೆಯೆ? ವಸ್ತುಗಳು ಇಂಥ ವೆಂದು ತಿಳಿಯದೆ ನಾವು ಪಡುವ ಭ್ರಾಂತಿಯೂ ನಮ್ಮಲ್ಲಿ ಕುಲ, ಯೌವನ, ಧನ, ಅಧಿಕಾರ, ವಿದ್ಯೆ–ಮುಂತಾದವುಗಳಿರುವವೆಂದು ನಾವು ಪಡುವ ಹೆಮ್ಮೆ ಯೂ ಮತ್ತೊಬ್ಬರಲ್ಲಿ ಇವುಗಳು ಹೆಚ್ಚಾಗಿದ್ದರೆ ಆಗ ನಾವು ಪಡುತ್ತಿರುವ ಹೊಟ್ಟೆಕಿಚ್ಚೂ ನಮ್ಮನ್ನು ಎಷ್ಟು ಸಂಕಟಗೊಳಿಸುತ್ತಿರುವವು! ಮೈಯಲ್ಲಿ ಹುಟ್ಟುವ ಜ್ವರದ ಬೇಗೆಯನ್ನು ಹೇಗಾದರೂ ಸಹಿಸಬಹುದು; ಈ ಕಾಮಾದಿ ಗಳಿಂದ ನಮ್ಮ ಮನಸ್ಸಿಗೆ ಆಗುತ್ತಿರುವ ಸಂತಾಪವನ್ನು ಅನುಭವಿಸುವದು ಕಷ್ಟತರವಾಗಿರುವದು. ಅದರಲ್ಲಿಯೂ ಕಾಮಾದಿಗಳೆಂಬ ಈ ಆರರಲ್ಲಿ ಮೋಹ ಮದಮಾತ್ಸರ್ಯಗಳಿಗೂ ಕಾಮಕ್ರೋಧಲೋಭಗಳೇ ಕಾರಣವಾಗಿರುವದ ರಿಂದ ಈ ಮೂರೇ ಮನುಷ್ಯರ ಮನಸ್ಸನ್ನು ಸುಡುವ ಸನ್ನಿಪಾತಜ್ವರವಾಗಿರು ವವು. ಆದ್ದರಿಂದಲೇ ಶ್ರೀಕೃಷ್ಣಪರಮಾತ್ಮನು ಗೀತೆಯಲ್ಲಿ–

ತ್ರಿವಿಧಂ ನರಕಸ್ಯೇದಂ ದ್ವಾರಂ ನಾಶನಮಾತ್ಮನಃ ।
ಕಾಮಃ ಕ್ರೋಧಸ್ತಥಾ ಲೋಭಸ್ತಸ್ಮಾದೇತತ್ತ್ರಯಂ ತ್ಯಜೇತ್ ॥

"ಕಾಮ, ಕ್ರೋಧ, ಲೋಭ–ಎಂಬ ಈ ಮೂರೂ ನರಕದ ಬಾಗಿಲು ಗಳು; ಇವು ಆತ್ಮನಾಶಕ್ಕೆ ಕಾರಣವಾಗಿರುವವು. ಆದ್ದರಿಂದ ಈ ಮೂರನ್ನೂ ಬಿಟ್ಟುಬಿಡಬೇಕು" ಎಂದು ಹೇಳಿರುವನು. ಹೀಗೆ ಕಾಮಾದಿಗಳು ದಿನದಿನವೂ

ಮನಸ್ಸನ್ನು ಬೇಗುದಿಗೊಳಿಸುತ್ತಿರುವದರಿಂದ ಈ ಮನಸ್ಸಿನಿಂದ ನಮಗೆ ಸುಖವಾಗುವದೆಂದು ನೆಚ್ಚಬಹುದೆ ? ತುಕ್ಕುಹಿಡಿದ ಕತ್ತಿಯು ಹೇಗೆ ಪ್ರಯೋಜನಕ್ಕೆ ಬಾರದೋ ಹಾಗೆ ಕಾಮಾದಿಗಳಿಂದ ಸಂಕಟಪಡುತ್ತಿರುವ ಈ ಮನಸ್ಸಿನಿಂದ ನಮಗೆ ಯಾವ ಸುಖವೂ ದಕ್ಕುವಹಾಗಿಲ್ಲ.

ಹೀಗೆ ದೇಹವೂ ಮನಸ್ಸೂ ಮಾರ್ಪಾಟುಗಳನ್ನು ಹೊಂದುತ್ತಾ ಇದ್ದರೂ ಜನರು ಈ ಮಾರ್ಪಾಟುಗಳ ಅರ್ಥವೇನೆಂಬುದನ್ನು ಅರಿಯರು. ಆದರೆ ಇವರು ಅರಿಯದಿದ್ದರೇನು ? **"ಮೃತ್ಯುದೇವತೆಯು** ದಿನಗಳನ್ನು ಎಣಿಸಿಕೊಳ್ಳುತ್ತಾ ಯಾವಾಗಲೂ ಕುಣಿಯುತ್ತಿರುವದು." ಮನುಷ್ಯರಿಗೆ ನೂರು ವರ್ಷ ಆಯುಸ್ಸೆಂದು ಜನರು ಲೆಕ್ಕಹಾಕುವದುಂಟು ; ಆದರೆ ಈ ಪರಮಾವಧಿಯ ಆಯುಸ್ಸು ಎಷ್ಟು ಜನರಿಗೆ ಇರುತ್ತದೆ ? ಹಾಗೆ ಪೂರ ಆಯುಸ್ಸು ಇದ್ದರೂ ನಿಜವಾಗಿ ಆ ಕಾಲವು ಹೇಗೆ ಜನರಿಗೆ ತಿಳಿಯದಂತೆಯೇ ಕಳೆದುಹೋಗುತ್ತಿರುವದೆಂಬುದನ್ನು ವಿಚಾರಿಸಿದರೆ ಎದೆ ಒಡೆಯುತ್ತದೆ. ಮನುಷ್ಯನಿಗೆ ನಿದ್ರೆಯಲ್ಲಿ ಆಯುಸ್ಸಿನ ಅರ್ಧಭಾಗವೇ ಕಳೆದುಹೋಗುತ್ತದೆ; ಬಾಲ್ಯವಾರ್ಧಕಗಳಲ್ಲಿ ಉಳಿದುದರ ಅರ್ಧಪಾಲು ಕಳೆಯುತ್ತದೆ. ಇನ್ನು ಉಳಿದಿರುವ ಭಾಗವನ್ನಾದರೂ ಸರಿಯಾಗಿ ವಿನಿಯೋಗಿಸುವನೆ? ಇಲ್ಲ. ಮೇಲೆ ಹೇಳಿದಂತೆ ಬಗೆಬಗೆಯಿಂದ ಪಾಪಗಳನ್ನು ಮಾಡಿ ಆಯುಸ್ಸನ್ನು ಕಡಿಮೆಮಾಡಿಕೊಳ್ಳುವದರಲ್ಲಿಯೇ ನಿರತನಾಗಿರುತ್ತಾನೆ. ಮೃತ್ಯುದೇವತೆಯು ಇದನ್ನೆಲ್ಲ ಬಲ್ಲದು. 'ಇಗೊ, ಇವನ ಆಯುಸ್ಸಿನಲ್ಲಿ ಒಂದು ದಿನ ಕಳೆಯಿತು, ಎರಡು ದಿನ ಕಳೆಯಿತು' ಎಂದು ದಿನಗಳನ್ನೇ ಆ ದೇವತೆಯು ಲೆಕ್ಕಮಾಡುತ್ತಾ ಇರುವದು. ಜನರು ತಮಗೆ ಮರಣವೇ ಬರುವದಿಲ್ಲವೋ–ಎಂಬಂತೆ ಅಜ್ಞಾನದಿಂದ ವಿಷಯಗಳಲ್ಲಿ ಆಸಕ್ತರಾಗಿರಬಹುದು. ಆದರೆ ಇದನ್ನು ಕಂಡ ಮೃತ್ಯುದೇವತೆ ನನ್ನ ಸರದಿಯು ಬೇಗನೆ ಬಂದಿದೆ ಎಂದು ನಲಿಯುತ್ತಾ ಕುಣಿಯುತ್ತಿರುವದು. ಹೀಗಿರುವದರಿಂದ ಮನುಷ್ಯನು 'ಈ ಸುಖವನ್ನನುಭವಿಸಬೇಕು, ಆ ಸುಖವನ್ನು ಅನುಭವಿಸಬೇಕು' ಎಂದು ಹಂಬಲಿಸುತ್ತಿರುವಷ್ಟರಲ್ಲಿಯೇ ಮಂದೆಯನ್ನು ಬಿಟ್ಟಗಲಿದ ಕುರಿಮರಿಯು ತೋಳನ ಪಾಲಾಗುವಂತೆ ಯಮದೂತರ ವಶವಾಗುವನು.

ಇದನ್ನೆಲ್ಲ ಮನಸ್ಸಿಗೆ ತಂದುಕೊಳ್ಳುವವರಿಗೆ 'ಅಯ್ಯೋ ! ನಮಗೆ ಇನ್ನಾರು ಗತಿ ?' ಎಂದು ದೈನ್ಯವು ಬರುವದು. ಆದರೆ ಅವರಿಗೆ ಯಾರೂ ದಿಕ್ಕಿಲ್ಲದೆ ಇಲ್ಲ ದೀನರಿಗೆಲ್ಲ ಪರಮೇಶ್ವರನೇ ಬಂಧು. ಆತನನ್ನೇ ಶರಣುಹೊಕ್ಕರೆ ಅವನು ಅವರನ್ನು ಸಕಲದುಃಖಗಳಿಂದಲೂ ಅವಶ್ಯವಾಗಿ ಪಾರುಮಾಡುತ್ತಾನೆ. ಮೊದಲು ವಿಷಯದೋಷವನ್ನು ತಿಳಿದುಕೊಂಡು ವೈರಾಗ್ಯವನ್ನು ಪಡೆದವರು ಮಾತ್ರ ಆ ಪರಮೇಶ್ವರನ ಅನುಗ್ರಹವನ್ನು ಪಡೆಯುತ್ತಾರಾದ್ದರಿಂದ ಪರಮೇಶ್ವರನನ್ನು ಶರಣುಹೊಗುವದಕ್ಕೆ ವೈರಾಗ್ಯವೆಂಬುದೊಂದು ದೊಡ್ಡ ಸಾಧನ —ಎಂಬುದು ಶ್ಲೋಕದ ಅಭಿಪ್ರಾಯವು.

## ೩. ದೇಹದ ನಶ್ವರತೆ, ಅಂತಃಕರಣದ ಸ್ವಭಾವ

ದೇಹೋ ವಿನಶ್ಯತಿ ಸದಾ ಪರಿಣಾಮಶೀಲ-
ಶ್ಚಿತ್ತಂ ಚ ಖಿದ್ಯತಿ ಸದಾ ವಿಷಯಾನುರಾಗಿ ।
ಬುದ್ಧಿಃ ಸದಾ ಹಿ ರಮತೇ ವಿಷಯೇಷು ನಾನ್ಯ-
ತ್ತಸ್ಮಾತ್ತ್ವಮದ್ಯ ಶರಣಂ ಮಮ ದೀನಬನ್ಧೋ ೩ ॥

### ಅರ್ಥ

ಈ ಶರೀರವು ಯಾವಾಗಲೂ ಪರಿಣಾಮವನ್ನು ಹೊಂದುತ್ತಾ ನಾಶವಾಗುತ್ತಿದೆ ; ಚಿತ್ತವು ಯಾವಾಗಲೂ ವಿಷಯಾನುರಾಗದಿಂದ ಖೇದವನ್ನು ಪಡುತ್ತಿರುವದು ; ಬುದ್ಧಿಯು ಯಾವಾಗಲೂ ವಿಷಯಗಳಲ್ಲಿ ಪ್ರೀತಿಮಾಡುವದೇ ಹೊರತು ಒಳಗೆ ಪ್ರೀತಿಮಾಡುವದಿಲ್ಲ. ಆದ್ದರಿಂದ ಎಲೈ ದೀನಬಂಧುವೆ, ಈಗ ನೀನೇ ನನಗೆ ಶರಣು.

### ವಿಚಾರ

ದೇಹಕ್ಕೆ ಅನೇಕ ರೋಗಗಳಿರುವದು ನಿಜ ; ಮನಸ್ಸಿಗೆ ಕಾಮಾದಿಗಳ ಕಾಟವಿರುವದೂ ನಿಜವೆ. ಆದಮಾತ್ರಕ್ಕೆ ಲೋಕದಲ್ಲಿ ಪ್ರತ್ಯಕ್ಷವಾಗಿ ಕಾಣುವ ಸುಖವು ಸುಖವಲ್ಲವೆ ?— ಎಂದು ಕೆಲವು ವೇಳೆ ನಮಗೆ ತೋರು

ಪದು. ಆದರೂ ಆ ಸುಖದ ಸ್ವರೂಪವೇನೆಂಬುದನ್ನು ಯೋಚಿಸಿದರೆ ನಾವು ಹೇಗೆ ಮೋಸಹೋಗಿರುವೆವೆಂಬುದು ಗೊತ್ತಾಗುತ್ತದೆ.

ಈ ಸುಖವನ್ನು ಹೊಂದುವ ಸಾಮಗ್ರಿಗಳನ್ನು ಒಂದೊಂದಾಗಿ ವಿಚಾರಿಸೋಣ. ದೇಹ, ಇಂದ್ರಿಯಗಳು, ಮನಸ್ಸು, ವಿಷಯ- ಇಷ್ಟು ಸಾಮಗ್ರಿಗಳು ಇದ್ದರೆ ಮಾತ್ರ ನಮಗೆ ಸಂಸಾರದಲ್ಲಿ ಸುಖವು ದೊರಕೀತೆಂಬುದು ನಮಗೆಲ್ಲರಿಗೂ ತಿಳಿದಿರುವ ವಿಷಯಃ. ಇವುಗಳಲ್ಲಿ ಯಾವಯಾವ ಸಾಮಗ್ರಿಯ ಯೋಗ್ಯತೆ ಎಷ್ಟೆಷ್ಟು, ನೋಡಿರಿ. ಮೊದಲು ದೇಹವೆಂಬುದನ್ನು ನೋಡಿದರೆ ಇದು ಯಾವಾಗಲೂ ಬೇರೆಬೇರೆ ಪರಿಣಾಮವನ್ನು ಹೊಂದುತ್ತಲೇ ಇರುವದು. ಶರೀರವು ಪರಿಣಮಿಸುವದಿಲ್ಲವೆಂದೂ ಅದು ಇದ್ದಂತೆಯೇ ಇರುವದೆಂದೂ ಅತಿಮೂಢರಾದವರು ಎಣಿಸುತ್ತಾರೆ. ಆದರೆ ಸ್ವಲ್ಪಮಟ್ಟಿಗೆ ವಿಚಾರಶೀಲರಾಗಿರುವವರುಕೂಡ ಇದನ್ನು ಒಪ್ಪುವಹಾಗಿಲ್ಲ. ಏಕೆಂದರೆ ಕ್ಷಣಕ್ಷಣಕ್ಕೂ ಆಗುತ್ತಿರುವ ಪರಿಣಾಮವು ದೇಹದಲ್ಲಿ ನಮಗೆ ಕಾಣಿಸುವದಿಲ್ಲವೆಂಬುದೇನೋ ನಿಜ; ಆದರೆ ಮಗು ಹುಡುಗನಾಗುವದನ್ನೂ ಆ ಹುಡುಗನು ಹರೆಯದವನಾಗುವದನ್ನೂ ಕೊನೆಗೆ ಅವನೇ ಮುದುಕನಾಗಿಬಿಡುವದನ್ನೂ ನಾವೆಲ್ಲರೂ ಕಂಡಿರುತ್ತೇವಲ್ಲವೆ ? ದೇಹದಲ್ಲಿ ಮಾರ್ಪಾಡುಗಳೇ ಆಗದೆ ಇದ್ದರೆ ಈ ಅವಸ್ಥೆಗಳು ಹೇಗೆ ಬರುತ್ತಿದ್ದವು ? ಯಾವದರಲ್ಲಿ ಅವಯವಗಳಿರುವವೋ ಅದು ಆ ಅವಯವಗಳು ಸವೆಯಲಾಗಿ ತಾನೂ ಸವೆಯಲೇಬೇಕು. ಆದ್ದರಿಂದ ದೇಹವು ಆಹಾರವಿಹಾರಗಳಿಂದ ಪುಷ್ಟವಾಗುತ್ತಿರುವದರಿಂದ ಎಂದಿನಂತೆ ಇರುವಹಾಗೆಯೇ ತೋರುತ್ತಿದ್ದರೂ ನಿಜವಾಗಿ ಅದು ಸವೆಯುತ್ತಲೇ ಇರುವದು. ಕೊನೆಗೆ ಇದು ನಾಶವಾಗಿಯೂಹೋಗುವದು.

**ಮನಸ್ಸೆಂಬುದು** ಸುಖದ ಎರಡನೆಯ ಸಾಮಗ್ರಿಯಷ್ಟೆ ? ಇದಕ್ಕೆ ಸಂಕಲ್ಪವಿಕಲ್ಪಗಳೆಂಬ ಮಾರ್ಪಾಡುಗಳು ಆಗುತ್ತಲೇ ಇರುವವು. 'ಹೀಗೆ ಮಾಡೋಣ' ಎಂದು ಯೋಚಿಸುವದು ಸಂಕಲ್ಪವು ; 'ಇದು ಇಂಥದ್ದು' ಎಂದು ತಿಳಿಯುವದು ವಿಕಲ್ಪವು. ಕಣ್ಣು, ಕಿವಿ, ಮೂಗು- ಮುಂತಾದ ದ್ವಾರಗಳಿಂದ ವಿಷಯಗಳನ್ನು ತಿಳಿಯುತ್ತಲೂ ಅವುಗಳ ಸ್ವರೂಪವನ್ನು ನಿಶ್ಚಯಿಸಿಕೊಳ್ಳುತ್ತಲೂ ಇವುಗಳನ್ನು ಹೀಗೆಹೀಗೆ ಅನುಭವಿಸಬೇಕೆಂದು ಹವಣಿಸುತ್ತಲೂ ಇರುವ ಈ ಮನಸ್ಸಿಗೆ ಅವುಗಳಲ್ಲಿಯೇ ಅನುರಾಗವುಂಟಾಗು

ತ್ತಿರುವದು. ರಾಗವೆಂದರೆ ಬಣ್ಣವೆಂದರ್ಥ. ವಿಷಯಗಳ ಸಂಬಂಧವಾದ ಮೇಲೆ (ಅಸು), ಮನಸ್ಸಿಗೆ ಒಂದು ಬಗೆಯ ವಿಷಯದ ಬಣ್ಣ(ರಾಗ)ವು ಬಳಿದಂತಾಗಿಬಿಡುವದರಿಂದ ವಿಷಯದ ಅನುರಾಗವೆಂಬ ಬಣ್ಣದ ಬಳಿತವುಳ್ಳ ಈ ಮನಸ್ಸು ವಿಷಯದ ಅವಲಂಬನೆಯನ್ನು ಬಿಡಲಾರದೆ ಪ್ರತಿಯೊಂದು ವಿಷಯದ ಸಂಬಂಧವನ್ನೂ ಬಿಟ್ಟು ಮತ್ತೆಮತ್ತೆ ಹೊರಕ್ಕೆ ಬರುತ್ತಲೂ ವಿಷಯದಿಂದ ವಿಷಯಕ್ಕೆ ಹಾರಾಡುತ್ತಲೂ ಆಯಾಸಪಡುತ್ತಿರುವದು. ಹೀಗೆ ಕಷ್ಟಪಡುತ್ತಿರುವ ಮನಸ್ಸಿಗೆ ಸುಖವೆಲ್ಲಿಯದು ?

ಮನಸ್ಸು ಯಾವದಾದರೊಂದು ವಿಷಯದಲ್ಲಿ ನಿತ್ಯವಾಗಿ ಏತಕ್ಕೆ ನಿಂತು ಬಿಡಬಾರದು ? ಹಾಗೆ ನಿಂತುಬಿಟ್ಟರೆ ಯಾವಾಗಲೂ ಸುಖವನ್ನು ಅನುಭವಿಸ ಬಹುದಲ್ಲವೆ ?– ಎಂದು ಯಾರಾದರೂ ಶಂಕಿಸಬಹುದು. ಆದರೆ ಯಾವ ವಿಷಯವೂ ನಿತ್ಯವಾಗಿರುವದಿಲ್ಲವಾದ್ದರಿಂದ ಅದು ಹಾಗೆ ನಿಲ್ಲುವದಕ್ಕೆ ಅವಕಾಶ ವಿಲ್ಲ. ದೇಹವು ಹೇಗೆ ಕ್ಷಣಕ್ಷಣಕ್ಕೂ ಮಾರ್ಪಾಡುಗಳನ್ನು ಹೊಂದುತ್ತಿರು ವದೋ ಹಾಗೆಯೇ ವಿಷಯಗಳುಕೂಡ ಒಂದೇಸಮನೆ ಮಾರ್ಪಾಡುಗಳನ್ನು ಹೊಂದುತ್ತಲೇ ಇರುವವು. ಹುಟ್ಟುತ್ತದೆ, ಇವೆ, ಬೆಳೆಯುತ್ತದೆ, ಮಾರ್ಪಡು ತ್ತದೆ, ಸವೆಯುತ್ತದೆ, ಹಾಳಾಗುತ್ತದೆ– ಎಂದು ಯಾವದಾದರೊಂದು ಕಾಲದಲ್ಲಿ ಹೇಳಿಸಿಕೊಳ್ಳದ ವಿಷಯವೇ ಮೂರುಲೋಕದಲ್ಲಿಯೂ ಇರುವದಿಲ್ಲ. ಮನಸ್ಸೂ ಮಾರ್ಪಡುತ್ತಾ ವಿಷಯವೂ ಮಾರ್ಪಡುತ್ತಾ ಇರುವಾಗ ಇವೆರಡರ ಸಂಬಂಧದಿಂದ ಆಗುವ ಸುಖವು ಒಂದೇ ರೂಪವಾಗಿದ್ದೀತೆ ? 'ಈ ವಿಷಯ ದಿಂದ ಸುಖವು ನನಗೆ ಆಗಬಹುದು' ಎಂದು ಮನಸ್ಸು ಯೋಚಿಸಿಕೊಳ್ಳುವ ಹೊತ್ತಿನೊಳಗಾಗಿ ಆ ವಿಷಯದಲ್ಲಿಯೂ ಇಂದ್ರಿಯಗಳಲ್ಲಿಯೂ ತನ್ನಲ್ಲಿಯೂ ಎಷ್ಟೋ ಮಾರ್ಪಾಡುಗಳಾಗಿಬಿಟ್ಟಿರುವವು. ಹೀಗಿರುವದರಿಂದ ವಿಷಯಸುಖ ವೆಂಬುದು ಅದನ್ನು ಅನುಭವಿಸುವದಕ್ಕೆ ಪ್ರಾರಂಭಿಸುವದರೊಳಗಾಗಿಯೇ ಅದು ಕನಸಿನ ಗಂಟಾಗುವದೆಂಬುದರಲ್ಲಿ ಆಶ್ಚರ್ಯವೇನು ? ಈ ವಿಷಯದಲ್ಲಿ ಭಗವಂತನು ಅಪ್ಪಣೆಕೊಡಿಸಿರುವದೇನೆಂದರೆ :–

**ಯೇ ಹಿ ಸಂಸ್ಪರ್ಶಜಾ ಭೋಗಾ ದುಃಖಯೋನಯ ಏವ ತೇ ।**
**ಆದ್ಯನ್ತವನ್ತಃ ಕೌನ್ತೇಯ ನ ತೇಷು ರಮತೇ ಬುಧಃ ॥**

(ಎಲೈ ಅರ್ಜುನನೆ, ವಿಷಯೇಂದ್ರಿಯಗಳ ಸಂಬಂಧದಿಂದ ಆಗುವ ಭೋಗಗಳೆಲ್ಲ ಕೊನೆಗೆ ದುಃಖಕ್ಕೇ ಮೂಲವು ; ಅವುಗಳಿಗೆ ಆದಿಯೂ ಅಂತವೂ ಉಂಟು. ಅವುಗಳಲ್ಲಿ ಜ್ಞಾನಿಯಾದವನು ಪ್ರೀತಿಯಿಡುವದಿಲ್ಲ). ಆದಕಾರಣ ಮನಸ್ಸು ವಿಷಯಗಳಿಂದ ವಿಷಯಗಳಿಗೆ ಹಾರಾಡಿ ಸಂಕಟಪಡುವದೇ ಹೊರತು ಸುಖಕ್ಕೆ ಕಾರಣವಾಗುವ ಸಂಭವವಿಲ್ಲ.

ಈ ಶ್ಲೋಕದಲ್ಲಿ ಚಿತ್ತ, ಬುದ್ಧಿ–ಎಂಬ ಎರಡು ಮಾತುಗಳಿವೆಯಷ್ಟೆ ? ಇವೆರಡೂ ಅಂತಃಕರಣಕ್ಕೇ ಹೆಸರುಗಳು. ಇದು ವಿಷಯಗಳನ್ನು ನೆನಸಿಕೊಳ್ಳುತ್ತಾ ಬಗೆಬಗೆಯ ವೃತ್ತಿಗಳೆಂಬ ಮಾರ್ಪಾಡುಗಳನ್ನು ಪಡೆಯುತ್ತಿರುವದರಿಂದ ಚಿತ್ತವೆನಿಸಿಕೊಳ್ಳುತ್ತದೆ ; ಇದು ಇಂಥದ್ದೆಂದು ನಿಶ್ಚಯಿಸಿ ಅರಿಯುವದರಿಂದ ಬುದ್ಧಿಯೆನಿಸಿಕೊಳ್ಳುತ್ತದೆ. ಈ ಬುದ್ಧಿಯು ವಿಷಯದ ಯೋಗ್ಯತೆಯನ್ನು ಕಂಡಮೇಲೆ ಬೇರೆ ಕಡೆಗೆ ಏತಕ್ಕೆ ತಿರುಗಬಾರದು ? ಇನ್ನೆಲ್ಲಿಯೂ ನಿತ್ಯವಾದ ಸುಖವು ಇದಕ್ಕೆ ಸಿಕ್ಕುವ ಸಂಭವವೇ ಇಲ್ಲವೆ ?– ಎಂದು ಯಾರಾದರೂ ಕೇಳಬಹುದು. ನಿತ್ಯವಾದ ಸುಖವು ನಮ್ಮ ಒಳಗೇ ಇದ್ದುಕೊಂಡಿರುವ ಆತ್ಮವಸ್ತುವಿನಿಂದ ದೊರಕುತ್ತದೆ. ಆದರೆ ನಿತ್ಯಸುಖರೂಪನಾದ ಆತ್ಮನು ತನ್ನೊಳಗೆ ಇರುವನೆಂಬುದನ್ನು ಬುದ್ಧಿಯು ಅರಿಯದು. ಇಂದ್ರಿಯಗಳು ಸ್ವಭಾವವಾಗಿ ಹೊರಗಡೆಗೇ ತಿರುಗುವದರಿಂದಲೂ ಇಂದ್ರಿಯಗಳ ಬೆನ್ನುಹತ್ತಿದರೆ ತನಗೆ ಸುಖವಾಗುವದೆಂದು ಹುಚ್ಚುತನದಿಂದ ಬುದ್ಧಿಯು ನಿಶ್ಚಯಿಸಿಕೊಂಡಿರುವದರಿಂದಲೂ ಅದು ವಿಷಯಗಳಲ್ಲಿಯೇ ಪ್ರೀತಿಮಾಡುತ್ತಾ ಒಳಗಡೆಗೆ ಅಂತರಾತ್ಮನ ಕಡೆಗೆ ತನ್ನ ದೃಷ್ಟಿಯನ್ನು ಹಾಕದೆ ಇರುವದು. ಆದ್ದರಿಂದಲೇ ಮೇಲೆ ವರ್ಣಿಸಿದ ಹಾಗೆ ವಿಷಯದಿಂದ ಖೇದಪಡುತ್ತಿರುವದು.

ಆದರೆ ಭಗವಂತನು ಗೀತೆಯಲ್ಲಿ ಹೇಳಿರುವ ಹಾಗೆ :–

ಯೋಽನ್ತಃಸುಖೋಽನ್ತರಾರಾಮಸ್ತಥಾನ್ತರ್ಜ್ಯೋತಿರೇವ ಯಃ ।
ಸ ಯೋಗೀ ಬ್ರಹ್ಮನಿರ್ವಾಣಂ ಬ್ರಹ್ಮಭೂತೋಽಧಿಗಚ್ಛತಿ ॥

(ಯಾವಾತನು ತನ್ನೊಳಗಿರುವ ಆತ್ಮನಲ್ಲಿಯೇ ಸುಖವನ್ನು ಹೊಂದಿ ಅಂತರಾತ್ಮನಲ್ಲಿಯೇ ಕ್ರೀಡಿಸುತ್ತಾ ಅಂತರಾತ್ಮನ ಬೆಳಕಿನಲ್ಲಿಯೇ ಇರುತ್ತಿರುವನೋ ಅಂಥ ಯೋಗಿಯು ಜೀವನ್ಮುಕ್ತನಾಗಿ ಬ್ರಹ್ಮಾನಂದವನ್ನು ಪಡೆಯು

ವನು). ಆದ್ದರಿಂದ ಮುಮುಕ್ಷುವಾದವನು ವೈರಾಗ್ಯವನ್ನು ಪಡೆದು ಅಂತ ರಾತ್ಮನ ಉಪಾಸನೆಯನ್ನು ಸಂಪಾದನೆಮಾಡಿಕೊಳ್ಳಬೇಕೆಂಬುದೇ ಮುಖ್ಯ ವಾದದ್ದು. ಇದಕ್ಕಾಗಿ ಭಗವಂತನನ್ನು ಶರಣುಹೋಗಬೇಕು ಎಂಬುದು ಈ ಶ್ಲೋಕದಲ್ಲಿ ತೋರುವ ಆಶಯವು.

## ೪. ಜೀವನದ ಅಸ್ಥಿರತೆ

ಆಯುರ್ವಿನಶ್ಯತಿ ಯಥಾಮಘಟಸ್ಥತೋಯಂ
ವಿದ್ಯುತ್ಪ್ರಭೇವ ಚಪಲಾ ಬತ ಯೌವನಶ್ರೀಃ ।
ವೃದ್ಧಿಃ[1] ಪ್ರಧಾವತಿ ಯಥಾ ಮೃಗರಾಜಪತ್ನೀ
ತಸ್ಮಾತ್ತ್ವಮದ್ಯ ಶರಣಂ ಮಮ ದೀನಬನ್ಧೋ ॥ ೪ ॥

### ಅರ್ಥ

ಆಯುಸ್ಸು ಹಸಿಯ ಗಡಿಗೆಯಲ್ಲಿಟ್ಟಿರುವ ನೀರಿನಂತೆ ನಾಶ ವಾಗುತ್ತಿರುವದು ; ಅಯ್ಯೋ ! ಯೌವನಲಕ್ಷ್ಮಿಯು ಮಿಂಚಿನಹಾಗೆ ಚಂಚಲಳಾಗಿರುವಳು ; ವಾರ್ಧಕವು ಹೆಣ್ಣು ಸಿಂಹದಂತೆ ನನ್ನ ಕಡೆಗೆ ಓಡಿಬರುತ್ತಿರುವದು. ಆದ್ದರಿಂದ ಎಲೈ ದೀನಬಂಧುವೆ, ನೀನೇ ಈಗ ನನಗೆ ಶರಣು.

### ವಿಚಾರ

ಹಿಂದಿನ ಶ್ಲೋಕದಲ್ಲಿ ಹೇಳಿರುವ ಪರಿಣಾಮಗಳು ದೇಹದಲ್ಲಿ ಆಗುತ್ತಿವೆ ಯೆಂಬುದನ್ನು ಮನಗಾಣಿಸುವದಕ್ಕೆ ಈ ಪದ್ಯವು ಬಂದಿರುವದು. ಹಸಿಯ

1. ಈ ಮಾತು ಯಾವ ರೂಪದಲ್ಲಿರಬೇಕೆಂಬುದು ಗೊತ್ತಾಗುವಂತಿಲ್ಲ. "ವೃದ್ಧಃ" ಎಂದು ಕೆಲವು ಪುಸ್ತಕಗಳಲ್ಲಿದೆ ; ಇದೂ ಹೊಂದುವ ಹಾಗೆ ತೋರುವದಿಲ್ಲ. ವಾಕ್ಯಕ್ಕೆ ಸಂದರ್ಭಾನುಸಾರವಾಗಿ ಅರ್ಥವನ್ನೂ ತಾತ್ಪರ್ಯವನ್ನೂ ಕಲ್ಪಿಸಿರುತ್ತದೆ ಯಾದರೂ ಈ ಶ್ಲೋಕವು ಯಾವ ಹೊಸ ಅಭಿಪ್ರಾಯವನ್ನೂ ತಂದುಕೊಡದಿರುವದ ರಿಂದ ಈ ಗ್ರಂಥಕ್ಕೆ ಸೇರಿದ್ದೋ ಅಲ್ಲವೋ ಎಂಬ ಸಂಶಯವಿದೆ. ಆದ್ದರಿಂದಲೇ ಮೊದ ಲನೆಯ ಮುದ್ರಣದಲ್ಲಿ ಇದನ್ನು ಕೈಬಿಟ್ಟಿತ್ತು. ಕೆಲವರ ಕೋರಿಕೆಯಂತೆ ಈಗ ಸೇರಿಸಿರುತ್ತದೆ.

ಗಡಿಗೆಯ ತಳವು ನೀರನ್ನು ತಡೆದಿಟ್ಟುಕೊಳ್ಳುವದೆಂದು ಎಷ್ಟರವುಟ್ಟಿಗೆ ನೆಚ್ಚ ಬಹುದೋ ಅಷ್ಟರವುಟ್ಟಿಗೇ ಈ ದೇಹವು ಪ್ರಾಣವನ್ನು ತಡೆದಿಟ್ಟುಕೊಂಡು ಬಹುಕಾಲವಿರುವದೆಂದು ನಂಬಬಹುದು. ಜನರು ಇಂಥ ಸ್ಥಿತಿಯನ್ನು ಕಂಡೂ ಕಂಡೂ ತಾವು ಬಹುಕಾಲವಿರುವೆವೆಂದು ನಂಬುವದು ಆಶ್ಚರ್ಯವಲ್ಲವೆ ? ಮಹಾಭಾರತದ ಯಕ್ಷಪ್ರಶ್ನೆಯಲ್ಲಿ ಧರ್ಮರಾಯನು ಹೇಳಿರುವಂತೆ :–

**ಅಹನ್ಯಹನಿ ಭೂತಾನಿ ಗಚ್ಛನ್ತೀಹ ಯಮಾಲಯಮ್ ।**
**ಶೇಷಾಃ ಸ್ಥಾವರಮಿಚ್ಛನ್ತಿ ಕಿಮಾಶ್ಚರ್ಯಮತಃ ಪರಮ್ ॥**

ದಿನದಿನವೂ ಪ್ರಾಣಿಗಳು ಯಮಲೋಕಕ್ಕೆ ಹೋಗುತ್ತಲೇ ಇರುವವು. ಉಳಿದವರು ನಿತ್ಯವಾಗಿರುವೆವೆಂದು ನಂಬಿಕೊಂಡಿರುವರು. ಇದಕ್ಕಿಂತಲೂ ಆಶ್ಚರ್ಯವು ಯಾವದಿದೆ ?

ಮಿಂಚಿನ ಬೆಳಕನ್ನು ನಂಬಿ ಕತ್ತಲೆಯಲ್ಲಿ ದಾರಿನಡೆಯುವವರು ಎಂಥ ಅವಿವೇಕಿಗಳೋ, ಯೌವನದ ಅನುಕೂಲ್ಯಗಳನ್ನು ನಂಬಿ ನಡೆಯುವವರೂ ಅಂಥ ಅವಿವೇಕಿಗಳೇ. ನಾಲ್ಕುದಿನಗಳವುಟ್ಟಿಗೆ ತೋರಿಹಾರುವ ಮೈಯ ಕಾಂತಿಯನ್ನೂ ರಕ್ತಪುಷ್ಟಿಯನ್ನೂ ತೋಳಬಲವನ್ನೂ ನೆಚ್ಚಿ ಕೂತಿರುವವ ರನ್ನು ಕಂಡು ಬೇಗನೆ ಜರೆಯು ಹೆಣ್ಣುಸಿಂಹದಂತೆ ಮೇಲೆ ಬೀಳುವದು. ಅರಣ್ಯದಲ್ಲಿ ಮೈಮೇಲೆ ಸಿಂಹವು ಹಾರಿಬಿದ್ದರೆ ಮಿಕ್ಕದ್ದೆಲ್ಲವನ್ನೂ ಮರೆತು ಭಗವಂತನಿಗೆ ಮೊರೆಯಿಡುವದಿಲ್ಲವೆ ? ಹಾಗೆಯೇ ಶರೀರದ ಪರಿಣಾಮಗಳನ್ನು ಮನಗಂಡಾತನು ಭಯದಿಂದಲಾದರೂ ಭಗವಂತನನ್ನು ಶರಣುಹೊಗಬೇಕೆಂದು ಶ್ಲೋಕದ ತಾತ್ಪರ್ಯವು.

## ೫. ಜೀವನದಲ್ಲಿ ಆಯುವ್ಯಯಗಳು

ಅಯಾದ್ವ್ಯಯೋ ಮಮ ಭವತ್ಯಧಿಕೋऽವಿನೀತೇ
 ಕಾಮಾದಯೋ ಹಿ ಬಲಿನೋ ಹ್ಯಬಲಾಃ ಶಮಾದ್ಯಾಃ ।
ಮೃತ್ಯುರ್ಯದಾ ತುದತಿ ಮಾಂ ಬತ ಕಿಂ ವದೇಯಂ
 ತಸ್ಮಾತ್ತ್ವಮದ್ಯ ಶರಣಂ ಮಮ ದೀನಬನ್ಧೋ ॥ ೫ ॥

## ಅರ್ಥ

ನನಗೆ ಆಯಕ್ಕಿಂತಲೂ ವ್ಯಯವು ಹೆಚ್ಚಾಗಿರುವದು; ಏಕೆಂದರೆ ಅಶಿಕ್ಷಿತನಾದವನಲ್ಲಿ ಕಾಮಾದಿಗಳು ಬಲವಾಗಿಯೂ ಶಮಾದಿಗಳು ದುರ್ಬಲವಾಗಿಯೂ ಇರುವವು. ಅಯ್ಯೋ! ಮೃತ್ಯುವು ನನ್ನನ್ನು ಸಂಕಟಪಡಿಸುವಾಗ ಏನು ಹೇಳಲಿ? ಆದ್ದರಿಂದ ಎಲೈ ದೀನಬಂಧುವೆ, ಈಗ ನನಗೆ ನೀನೇ ಶರಣು.

## ವಿಚಾರ

ಕಾಮಾದಿಗಳು ಯಾವಾಗಲೂ ಮನಸ್ಸನ್ನು ಗೋಳಾಡಿಸುತ್ತಿರುವವೆಂದೂ ಅಂತರಾತ್ಮನನ್ನು ಉಪಾಸನೆಮಾಡಿದರೆ ನಿತ್ಯಸುಖವು ದೊರಕುವದೆಂದೂ ಹಿಂದೆ ಹೇಳಿತ್ತಷ್ಟೆ? ಅಂಥ ಉಪಾಸನೆಯನ್ನು ದೊರಕಿಸಿಕೊಳ್ಳುವದಾಗಲಿ, ಆದಕ್ಕಾಗಿ ಬಹುಕಾಲ ಏಕಾಗ್ರತೆಯಲ್ಲಿ ಮನಸ್ಸನ್ನು ನಿಲ್ಲಿಸಿಕೊಳ್ಳುವದಾಗಲಿ, ಸಾಮಾನ್ಯರಿಗೆ ಸಾಧ್ಯವಲ್ಲ. ಆದ್ದರಿಂದ ವ್ಯವಹಾರದಲ್ಲಿ ಹೇಗೆ ನಡೆದುಕೊಂಡರೆ ಕಾಮಾದಿಗಳ ಉಪಟಳವೂ ತಪ್ಪಿ ಒಳನೋಟವನ್ನು ಅಭ್ಯಾಸ ಮಾಡುವದಕ್ಕೂ ಅನುಕೂಲವಾಗುವದೆಂಬುದನ್ನು ಇಲ್ಲಿ ತಿಳಿಸುತ್ತಾರೆ.

ಕಾಮಾದಿಗಳನ್ನು ಶಮಾದಿಗಳಿಂದಲೇ ಗೆಲ್ಲಬೇಕು. ಶಮ, ದಮ, ತಿತಿಕ್ಷೆ, ಉಪರತಿ, ಶ್ರದ್ಧೆ, ಸಮಾಧಾನ–ಇವೇ **ಶಮಾದಿಗಳು.** (೧) ಮನಸ್ಸನ್ನು ವಿಷಯಗಳ ಕಡೆಗೆ ಹೋಗದಂತೆ ಬಿಗಿಹಿಡಿಯುವದೇ **ಶಮವು.** (೨) ಕುದುರೆಯನ್ನು ಲಗಾಮಿನಿಂದ ಜಗ್ಗುವ ಹಾಗೆ ಇಂದ್ರಿಯಗಳನ್ನು ವಿಷಯದ ಕಡೆಗೆ ನುಗ್ಗದಂತೆ ತಡೆದು ಜಗ್ಗುವದೇ **ದಮವು.** (೩) ಒಳಗಿರುವ ಮನಸ್ಸನ್ನು ಹೊರಗಿನ ವಿಷಯಗಳನ್ನು ಕುರಿತು ಹಂಬಲಿಸುತ್ತಾ ಹೊರಹೊಮ್ಮದಂತೆ ಮಾಡಿಕೊಳ್ಳುವದು **ಉಪರತಿ.** (೪) ಯಾವದಾದರೊಂದು ದುಃಖವೊದಗಿದರೆ ಅದಕ್ಕೆ ಪ್ರತೀಕಾರವನ್ನು ಮಾಡಬೇಕೆಂದು ಸೇಡುತೆಗೆಯುವ ಪ್ರವೃತ್ತಿಯಿಲ್ಲದೆ ಸಹಿಸಿಕೊಳ್ಳುವದು **ತಿತಿಕ್ಷೆಯು.** ಕೆಲವು ದುಃಖಗಳಿಗೆ ಪ್ರತೀಕಾರವನ್ನು ಮಾಡುವದೇ ಆಗುವದಿಲ್ಲ; ಇನ್ನು ಕೆಲವಕ್ಕೆ ಪರಿಹಾರವನ್ನು ಬಹುಕಷ್ಟದಿಂದ ಮಾಡಿಕೊಳ್ಳಬಹುದು. ಇಂಥ ದುಃಖಗಳನ್ನು ಬೇರುಮಟ್ಟ ಕಿತ್ತುಬಿಸುಡುವೆನೆಂದು ಹಟಹಿಡಿಯುವದು ಕೆಲವರ

ಸ್ವಭಾವ. ಹೀಗೆ ಹಟಮಾಡಿದರೆ ಪರಮಾರ್ಥಸಾಧನೆಯು ಶಿಥಿಲವಾಗುವದರಿಂದ ಈ ದುಃಖಗಳನ್ನು ಸಹಿಸಿಕೊಳ್ಳುವದೇ ಮೇಲೆಂದು ತಿಳಿದು ಅದರಂತೆ ನಡೆದುಕೊಳ್ಳುವದೇ ಸಾಧಕನಾದವನಿಗೆ **ತಿತಿಕ್ಷೆ**ಯೆನಿಸುವದು. (೫) ಶಾಸ್ತ್ರಗಳಲ್ಲಿಯೂ ಗುರುವಾಕ್ಯದಲ್ಲಿಯೂ ಇಲ್ಲದ ಸಂಶಯಗಳನ್ನು ಮಾಡದೆ ಇದು ಸತ್ಯವೆಂದು ನಂಬಿ ವಿಚಾರಕ್ಕಿಟ್ಟುಕೊಳ್ಳುವದೇ **ಶ್ರದ್ಧೆ**ಯು. (೬) ಯಾವಾಗಲೂ ಪರಮಾತ್ಮನಲ್ಲಿಯೇ ಬುದ್ಧಿಯನ್ನು ಇಡುವದಕ್ಕೆ ಪ್ರಯತ್ನಿಸುವದು **ಸಮಾಧಾನವು.** ಈ ಆರೂ ಮುಮುಕ್ಷುತೆಯನ್ನು ಬಲಪಡಿಸುವ ಸಾಧನಗಳಾದ್ದರಿಂದ ಇವುಗಳನ್ನು ಒಟ್ಟುಗೂಡಿಸಿ '**ಶಮಾದಿಷಟ್ಕ**' ಎಂದು ಕರೆಯುವದುಂಟು.

ಶಮಾದಿಗಳು ಸ್ವಲ್ಪಮಟ್ಟಿಗಾದರೂ ಇಲ್ಲದ ಪ್ರಾಣಿಯೇ ಲೋಕದಲ್ಲಿಲ್ಲ. ಆದರೆ ಇವು ಕೆಲವರಲ್ಲಿ ಕಡಿಮೆಯಾಗಿಯೂ ಮತ್ತೆ ಕೆಲವರಲ್ಲಿ ಹೆಚ್ಚಾಗಿಯೂ ಜ್ಞಾನಿಗಳಲ್ಲಿ ಸಂಪೂರ್ಣವಾಗಿಯೂ ಇರುವವು. ಮುಮುಕ್ಷುವಾದವನು ಈ ಸಾಧನಗಳನ್ನು ಪ್ರಯತ್ನದಿಂದ ಬೆಳೆಯಿಸಿಕೊಳ್ಳುತ್ತಾ ಇರಬೇಕು. ಏಕೆಂದರೆ ಇವು ಎಷ್ಟು ಬಲವಾದರೆ ಕಾಮಾದಿಗಳು ಅಷ್ಟು ದುರ್ಬಲವಾಗುವವು. ಕಾಮಾದಿಗಳಿಗೂ ಶಮಾದಿಗಳಿಗೂ ಇರುವ ಈ ಸಂಬಂಧವನ್ನು ತೋರಿಸುವದಕ್ಕೆ ಶ್ರೀಶಂಕರಾಚಾರ್ಯರವರು ಬೃಹದಾರಣ್ಯಕೋಪನಿಷದ್ಭಾಷ್ಯದಲ್ಲಿ ಒಂದು ಉತ್ತಮವಾದ ರೂಪಕವನ್ನು ವರ್ಣಿಸಿರುತ್ತಾರೆ. ಅಲ್ಲಿ ಹೇಳಿರುವದರ ಸಾರಾಂಶವೇನೆಂದರೆ: ಅಸುರರು, ದೇವತೆಗಳು—ಎಂದು ಎರಡು ಜಾತಿಯ ಅಣ್ಣತಮ್ಮಂದಿರುಂಟು. ಇವರಿಬ್ಬರೂ ಪ್ರಜಾಪತಿಬ್ರಹ್ಮನ ವಂಶದವರು. ಇವರಲ್ಲಿ ಅಸುರರು ಅಣ್ಣಂದಿರು, ದೇವತೆಗಳು ತಮ್ಮಂದಿರು. ಇವರಿಬ್ಬರಿಗೂ ಯುದ್ಧವು ನಡೆಯುತ್ತಲೇ ಇರುವದು. ಅಸುರರು ಹೆಚ್ಚು ಸಂಖ್ಯೆಯವರಾಗಿಯೂ ದೇವತೆಗಳು ಕಡಿಮೆಯ ಸಂಖ್ಯೆಯವರಾಗಿಯೂ ಇರುವದರಿಂದ ಅಸುರರಿಗೇ ಬಹುವಾಗಿ ಗೆಲುವಾಗುತ್ತಿರುವದು, ಕೆಲಕೆಲವು ವೇಳೆ ದೇವತೆಗಳೂ ಗೆಲ್ಲುವದುಂಟು. ಈ ಅಸುರರೂ ದೇವತೆಗಳೂ ಯಾರೆಂದು ಹುಡುಕಿಕೊಂಡು ಹೋಗಿ ತಿಳಿಯಬೇಕಾಗಿಲ್ಲ; ಏಕೆಂದರೆ ನಮ್ಮೆದುರಿಗೇ ಇವರು ಹೋರಾಡುತ್ತಿದ್ದಾರೆ. ಪ್ರಾಣಿಗಳ ಇಂದ್ರಿಯಗಳಿಗೆ ಎರಡು ವಿಧವಾದ ಪ್ರವೃತ್ತಿಗಳುಂಟು. ಶಾಸ್ತ್ರದಲ್ಲಿ ಹೇಳಿಕೊಟ್ಟಿರುವ ಜ್ಞಾನಕರ್ಮಗಳನ್ನು ಮನಸ್ಸಿನಲ್ಲಿ ಹಚ್ಚಿಕೊಂಡಿ

ರುವ ಪ್ರವೃತ್ತಿಯೊಂದು ; ಯಾವ ಶಾಸ್ತ್ರದ ವಾಸನೆಯೂ ಇಲ್ಲದೆ ತಾವು ಕಂಡುಕೇಳಿದ ವಸ್ತುಗಳ ಪ್ರಯೋಜನವನ್ನೇ ಮನಸ್ಸಿನಲ್ಲಿ ತಿರಿವಿಹಾಕುವದರಿಂದುಂಟಾಗುವ ಪ್ರವೃತ್ತಿಯಿನ್ನೊಂದು. ಕಣ್ಣಿಗೆ ಕಾಣುವ ಪ್ರಯೋಜನವನ್ನೇ ಮುಖ್ಯವಾಗಿಟ್ಟುಕೊಂಡದ್ದರಿಂದಾಗುವ ಪ್ರವೃತ್ತಿಯುಳ್ಳ ಇಂದ್ರಿಯಗಳೇ ಅಸುರರು ; ಶಾಸ್ತ್ರದಲ್ಲಿ ಹೇಳಿಕೊಟ್ಟಿರುವ ಕರ್ಮಜ್ಞಾನಗಳನ್ನು ಮನಸ್ಸಿನಲ್ಲಿಟ್ಟಿರುವದರಿಂದ ಆಗುವ ಪ್ರವೃತ್ತಿಯುಳ್ಳ ಇಂದ್ರಿಯಗಳೇ ದೇವತೆಗಳು. ಲೋಕದಲ್ಲಿ ಕಣ್ಣಿಗೆ ಕಾಣಿಸುವ ಫಲದಲ್ಲಿಯೇ ಆಸಕ್ತಿ ಹೆಚ್ಚು ; ಆದ್ದರಿಂದ ಅಸುರರ ಸಂಖ್ಯೆ ಹೆಚ್ಚಾಗಿದೆ. 'ನನಗೆ ಅಧಿಕಾರ ಬೇಕು, ಹಣ ಬೇಕು, ವಿಷಯಸುಖ ಬೇಕು, ನಾನು ಎಲ್ಲರನ್ನೂ ಮೀರಿಸಬೇಕು' ಎಂದು ಹಾತುವರಿಯುತ್ತಿರುವ ಮನೋವೃತ್ತಿಗಳುಳ್ಳವರೆಲ್ಲ ಈ ಅರ್ಥದಲ್ಲಿ ಅಸುರರೆ; ಇಂಥವರು ಶಾಸ್ತ್ರಕ್ಕೆ ಹೆಚ್ಚು ಬೆಲೆಯನ್ನು ಕೊಡುವದಿಲ್ಲ. ಎಲ್ಲಿಯೋ ಕೆಲವು ವೇಳೆ, ತಾವು ಕಾಮಕ್ರೋಧಾದಿಗಳಿಂದ ಮಾಡಿದ ಅತ್ಯಾಚಾರಗಳ ಫಲವು ತಡೆಯಲಾರದಷ್ಟಾದರೆ ಆಗ, ಕಣ್ಣಿಗೆ ಕಾಣುವ ಲೋಕವೇ ಹೆಚ್ಚಿನದೆಂಬ ಅಭಿಮಾನವನ್ನು ಬಿಟ್ಟು ಶಾಸ್ತ್ರವು ಹೇಳುವ ಅತೀಂದ್ರಿಯವಾದ ಪ್ರಯೋಜನಗಳ ಸ್ವರೂಪವು ಏನೆಂದು ವಿಚಾರಿಸುವದಕ್ಕೆ ಹೋಗುವರು : ಆಗ ದೇವತೆಗಳಿಗೆ ಜಯವಾದಂತಾಯಿತು. ಮತ್ತೆ ಕೆಲವು ವೇಳೆ ಕಣ್ಣಿಗೆ ಕಾಣುವ ಫಲಕ್ಕಿಂತ ಯಾವದೂ ಹೆಚ್ಚಲ್ಲವೆನಿಸುವದು ; ಆಗ ಅಸುರರಿಗೆ ಜಯವಾದಂತಾಯಿತು. ಅಸುರರಿಗೆ ಜಯವಾಗುತ್ತಾಹೋದಹಾಗೆಲ್ಲ ಅಧರ್ಮವು ಹೆಚ್ಚಿ ಅಧೋಗತಿಯಾಗುವದು ; ದೇವತೆಗಳಿಗೆ ಜಯವಾದಹಾಗೆಲ್ಲ ಧರ್ಮವು ಹೆಚ್ಚಿ ಉತ್ತಮಗತಿಯಾಗುವದು. ಆದ್ದರಿಂದ ಕಾಮಾದಿಗಳನ್ನು ಗೆಲ್ಲುವದಕ್ಕೆ ಶಮಾದಿಗಳನ್ನು ಅವಶ್ಯವಾಗಿ ಬಲಪಡಿಸಿಕೊಳ್ಳಬೇಕು.

ಯಾವಾತನಿಗೆ ಶಮಾದಿಗಳು ಚೆನ್ನಾಗಿ ಅಳವಟ್ಟಿರುವವೋ ಅವನಿಗೆ ಆಯುವು ಹೆಚ್ಚು, ವ್ಯಯವು ಕಡಿಮೆ. ಹೀಗಿರುವದರಿಂದ ಮರಣಕಾಲವು ಬಂತೆಂದರೆ ಅವನು ಇತರರ ಹಾಗೆ ಬೆಚ್ಚಿಬೀಳುವದಿಲ್ಲ. ಒಂದು ಮನೆಯಿಂದ ಮತ್ತೊಂದು ಮನೆಗೂ ಒಂದು ಊರಿನಿಂದ ಮತ್ತೊಂದು ಊರಿಗೂ ಹೋಗುವವನ ಹಾಗೆ ಉಲ್ಲಾಸದಿಂದ ತನ್ನ ಮುಂದಿನ ಪ್ರಯಾಣಕ್ಕೆ ಆತನು ಸಿದ್ಧನಾಗಿರುವನು. ಏಕೆಂದರೆ ಅವನಿಗೆ ನರಕಭೀತಿಯೇ ಆಗಲಿ, ಮತ್ತೊಂದು

ಜನ್ಮದಲ್ಲಿ ಇದಕ್ಕಿಂತ ಕೀಳಾದ ಯೋನಿಯಲ್ಲಿ ಹುಟ್ಟಿಯೇನೆಂಬ ಭೀತಿಯಾಗಲಿ, ಇರುವದಿಲ್ಲ. ಆದರೆ ಸದ್ಗುರುವಿನಿಂದ ಸರಿಯಾಗಿ ಶಿಕ್ಷಿತನಾಗದೆ ಕಾಮಾದಿಗಳು ಎಳೆದ ಕಡೆಗೆ ಒಲಿಯುತ್ತಾ ಜನ್ಮವನ್ನು ವ್ಯರ್ಥವಾಗಿ ಕಳೆದಿರುವ ಆಸುರಸಂಪತ್ತಿನ ಮೂಢನಿಗೆ ಮರಣಕಾಲದಲ್ಲಿ ಯಮದೂತರು ದರ್ಶನಕೊಡುವರು; ಈ ಲೋಕದ ನೆನಪೇ ಹಾರಿಹೋಗಿ ಮುಂದೆ ತನಗೆ ಯಾವ ನರಕಯಾತನೆಯಾಗುವದೋ ಎಂಬ ಅಂಜಿಕೆಯು ಪಿಶಾಚವು ಅವನನ್ನು ಹಿಡಿದುಕೊಂಡು ಬಿಡುವದು. ಆಗ ಅವನಿಗೆ ಪಶ್ಚಾತ್ತಾಪ ಹುಟ್ಟಿದರೆತಾನೆ ಏನು ಫಲ? ಆದ್ದರಿಂದ ವಿವೇಕಿಯಾದವನು ಮೊದಲಿನಿಂದಲೂ ಶಮಾದಿಗಳನ್ನು ಬೆಳೆಯಿಸುವದು ಅತ್ಯಗತ್ಯವೆಂದು ಭಾವವು.

## ೬. ಮೂರು ವಿಧವಾದ ತಪಸ್ಸು

ತಪ್ತಂ ತಪೋ ನ ಹಿ ಕದಾಪಿ ಮಮೇಹ ತನ್ವಾ
 ವಾಣ್ಯಾ ತಥಾ ನ ಹಿ ಕದಾಪಿ ತಪಶ್ಚ ತಪ್ತಮ್ ।
ಮಿಥ್ಯಾಭಿಭಾಷಣಪರೇಣ, ನ ಮಾನಸಂ ಹಿ
 ತಸ್ಮಾತ್ತ್ವಮದ್ಯ ಶರಣಂ ಮಮ ದೀನಬನ್ಧೋ ೬

### ಅರ್ಥ

ನಾನು ಈ ಜನ್ಮದಲ್ಲಿ ಶರೀರದಿಂದ ಯಾವಾಗಲೂ ತಪಸ್ಸು ಮಾಡಲಿಲ್ಲ; ಸುಳ್ಳು ಹೇಳುತ್ತಲೇ ಇರುವ ನಾನು ವಾಕ್ಕಿನ ತಪಸ್ಸನ್ನೂ ಮಾಡಲಿಲ್ಲ; ಮನಸ್ಸಿನ ತಪಸ್ಸನ್ನಂತೂ ಯಾವಾಗಲೂ ಮಾಡಲಿಲ್ಲ. ಆದ್ದರಿಂದ ಎಲೈ ದೀನಬಂಧುವೆ, ನೀನೇ ಈಗ ನನಗೆ ಶರಣು.

### ವಿಚಾರ

ಹಿಂದಿನ ಶ್ಲೋಕದಲ್ಲಿ ಕಾಮಕ್ರೋಧಾದಿಗಳನ್ನು ಗೆಲ್ಲುವದಕ್ಕೆ ಶಮವೇ ಮುಂತಾದ ಸಾಧನಗಳನ್ನು ಬೆಳೆಯಿಸಿಕೊಳ್ಳಬೇಕು ಎಂದು ತಿಳಿಸಿದೆಯಷ್ಟೆ?

ಈ ಶಮಾದಿಗಳಿಗೆ ತಪಸ್ಸೇ ಕಾರಣವು. ತಪಸ್ಸೆಂದರೆ ಕೃಚ್ಛ್ರ, ಚಾಂದ್ರಾಯಣ–ಮುಂತಾದ ಉಪವಾಸವನವಾಸಗಳ ರೀತಿಯ ಕರ್ಮಗಳನ್ನು ಮಾತ್ರ ಗ್ರಹಿಸಬಾರದು. ಅವೂ ತಪಸ್ಸೇ ನಿಜ ; ಆದರೆ ಅವು ಸ್ಥೂಲವಾದ ತಪಸ್ಸುಗಳು. ನಿಜವಾದ ತಪಸ್ಸು ಯಾವದೆಂದರೆ :–

**ಮನಸಶ್ಚೇನ್ದ್ರಿಯಾಣಾಂ ಚ ಹ್ಯೈಕಾಗ್ರ್ಯಂ ಪರಮಂ ತಪಃ ।**
**ತಜ್ಜ್ಯಾಯಃ ಸರ್ವಧರ್ಮೇಭ್ಯಃ ಸ ಧರ್ಮಃ ಪರ ಉಚ್ಯತೇ ॥**

'ಮನಸ್ಸನ್ನೂ ಇಂದ್ರಿಯಗಳನ್ನೂ ಏಕಾಗ್ರವಾಗಿಟ್ಟುಕೊಳ್ಳುವದೇ ಹೆಚ್ಚಿನ ತಪಸ್ಸು ; ಅದೇ ಎಲ್ಲಾ ಧರ್ಮಗಳಿಗಿಂತಲೂ ಹೆಚ್ಚಿನದು, ಅದೇ ಉತ್ತಮವಾದ ಧರ್ಮವು' ಎಂಬ ಭಾರತವಚನದಂತೆ ಶಮದಮಗಳಿಗೆ ಅನುಕೂಲವಾಗಿರುವ ವ್ಯಾಪಾರವೇ ಮುಖ್ಯವಾದ ತಪಸ್ಸು.

ಈ ತಪಸ್ಸು ವಾಚಿಕತಪಸ್ಸೆಂದೂ ಶಾರೀರಕತಪಸ್ಸೆಂದೂ ಮಾನಸಿಕ ತಪಸ್ಸೆಂದೂ ಮೂರು ಬಗೆಯಾಗಿರುವದು. ವಾಕ್ಕು, ಶರೀರ, ಮನಸ್ಸು– ಇವು ಕತ್ತಿಯೇ ಮುಂತಾದ ಆಯುಧಗಳ ಹಾಗೆ ಇರುವವು. ಹರಿತವಾದ ಆಯುಧವನ್ನು ಸರಿಯಾಗಿ ಉಪಯೋಗಿಸಿ ಶತ್ರುಗಳನ್ನು ಸಂಹಾರಮಾಡಿ ಸುಖವನ್ನೂ ಅನುಭವಿಸಬಹುದು; ಅವಿವೇಕದಿಂದ ಅದನ್ನು ಸಿಕ್ಕಿದ ಹಾಗೆ ಉಪಯೋಗಿಸಿ ತನ್ನ ಕೈಕಾಲುಗಳನ್ನು ಕೊಯಿದುಕೊಂಡು ದುಃಖಕ್ಕೂ ಈಡಾಗಬಹುದು. ಇದರಂತೆ ಈ ತ್ರಿಕರಣಗಳನ್ನು ಸ್ವತಂತ್ರವಾಗಿ ಹರಿಯಗೊಟ್ಟರೆ ಅನರ್ಥವೇ ಆಗುವದು ; ಅತ್ಯುತ್ತಮರೀತಿಯಿಂದ ಉಪಯೋಗಿಸಿದರೆ ಇವೇ ಸದ್ಗತಿಗೆ ಸೋಪಾನಗಳಾಗುವವು. ಆದ್ದರಿಂದ ಮೂರುಕರಣಗಳನ್ನೂ ಹಿಡಿತದಲ್ಲಿಟ್ಟಿರುವದೆಂಬ ತಪಸ್ಸನ್ನು ಅವಶ್ಯವಾಗಿ ಆಚರಿಸಬೇಕೆಂಬುದೇ ಇಲ್ಲಿ ಹೃದಯವು.

## ೭. ತಪಸ್ಸುಗಳ ವಿವರ

**ಸ್ತಬ್ಧಂ ಮನೋ ಮಮ ಸದಾ ನ ಹಿ ಯಾತಿ ಸೌಮ್ಯಂ**
**ಚಕ್ಷುಶ್ಚ ಮೇ ನ ತವ ಪಶ್ಯತಿ ವಿಶ್ವರೂಪಮ್ ।**

ವಾಚಾ ತಥೈವ ನ ವದೇನ್ಮಮ ಸೌಮ್ಯವಾಣೀಂ
ತಸ್ಮಾತ್ತ್ವಮದ್ಯ ಶರಣಂ ಮಮ ದೀನಬನ್ಧೋ ॥ ೭ ॥

## ಅರ್ಥ

ಅಹಂಕಾರದಿಂದ ಕೂಡಿದ ನನ್ನ ಮನಸ್ಸು ಸೌಮ್ಯತ್ವವನ್ನು ಹೊಂದುವದಿಲ್ಲ ; ನನ್ನ ಕಣ್ಣು ನಿನ್ನ ವಿಶ್ವರೂಪವನ್ನು ನೋಡುವದಿಲ್ಲ ; ಮತ್ತು ನನ್ನ ವಾಕ್ಕು ಸೌಮ್ಯವಾದ ಮಾತನ್ನು ನುಡಿಯುವದಿಲ್ಲ. ಆದ್ದರಿಂದ ಎಲೈ ದೀನಬಂಧುವೆ, ನನಗೆ ಈಗ ನೀನೇ ಶರಣು.

## ವಿಚಾರ

ಹಿಂದಿನ ಶ್ಲೋಕಗಳಲ್ಲಿ ಹೇಳಿದ ತಪಸ್ಸುಗಳ ಸ್ವರೂಪವನ್ನು ಈಗ ತಿಳಿಸುತ್ತಾರೆ. ಮೊದಲು ಮನಸ್ಸಿನ ತಪಸ್ಸನ್ನು ತಿಳಿಸುತ್ತಾರೆ. ಮನಸ್ಸಿನಲ್ಲಿ ಮುಖ್ಯವಾಗಿ ಎರಡು ದೋಷಗಳಿರುವವು. ಒಂದನೆಯದು ಹರಿದಾಡುವ ದೋಷವು. ಮನಸ್ಸು ಒಂದು ಹೂವಿನಿಂದ ಇನ್ನೊಂದು ಹೂವಿಗೆ ಹಾರುವ ಜೇನುಹುಳುವಿನಂತೆ, ಒಂದು ವಿಷಯದಿಂದ ಮತ್ತೊಂದು ವಿಷಯಕ್ಕೆ ಹರಿದಾಡುತ್ತಲೇ ಇರುವದು. ಆದರೆ ಹೀಗೆ ಹಾರಾಡುವದೆಂಬ ಹೋಲಿಕೆಯಿಂದ ಮಾತ್ರವೇ ಮನಸ್ಸಿಗೆ ಜೇನುಹುಳುವಿನ ದೃಷ್ಟಾಂತವು ಹೊಂದುವದೇ ಹೊರತು ಹೂವಿನಲ್ಲಿ ಮಕರಂದವು ದೊರೆಯುವ ಹಾಗೆ ಒಂದೊಂದು ವಿಷಯದಲ್ಲಿಯೂ ಮನಸ್ಸಿಗೆ ಸುಖರಸವೇ ಸಿಕ್ಕುವದೆಂಬ ಹೋಲಿಕೆಯನ್ನೇನೂ ಹೇಳುವದಕ್ಕಿಲ್ಲ. ಏಕೆಂದರೆ ಅಭಿಮಾನವೆಂಬ ಕಲ್ಮಷಯುಕ್ತವಾದ ನಾಲಗೆಯಿಂದ ಮನಸ್ಸು ವಿಷಯವನ್ನು ಸವಿಯುವದರಿಂದ, ಯಾವ ವಿಷಯವೇ ಆಗಲಿ, ಪ್ರಾಪ್ತಿಯಾಗುವದಕ್ಕೆ ಮುಂಚೆ ತೋರಿಸಿದಷ್ಟು ರುಚಿಯನ್ನು ಪ್ರಾಪ್ತವಾದ ಮೇಲೆ ತೋರಿಸಲಾರದೆ ಇರುವದು. ಆದ್ದರಿಂದ ಮನಸ್ಸು ಹರಿದಾಡುವದು ಇದಕ್ಕೆ ಶ್ರಮವನ್ನು ಉಂಟುಮಾಡುವದಕ್ಕೆ ಮಾತ್ರ ಕಾರಣವಾಗಿರುವದರಿಂದ ಒಂದು ದೋಷವೇ ಆಗಿರುವದು. ಹಿಂದೆಯೇ ತಿಳಿಸಿರುವಂತೆ ಮನಸ್ಸು ಕಾಮಕ್ರೋಧಾದಿಗಳಿಂದ ಕಲ್ಮಷಯುಕ್ತವಾಗಿರುವದರಿಂದ ಒಂದುವೇಳೆ ಅದು ಹರಿದಾಡದೆ ನಿಂತರೂ ಮತ್ತೆ ವಿಷಯಗಳ ಆಲೋಚನೆಯಿಂದ ಬಹುಬೇಗ

ಚಂಚಲವಾಗಿಬಿಡುವದು. ಆದ್ದರಿಂದ ಕಲ್ಮಷವೂ ಮನಸ್ಸಿನಲ್ಲಿ ಒಂದು ದೋಷವೇ. ಬಗ್ಗಡವಾದ ನೀರು ಸ್ವಲ್ಪಹೊತ್ತು ನಿಂತರೆ ತಿಳಿತುಕೊಳ್ಳಬಹುದು; ಆದರೆ ಆಗಾಗ ಅದರಲ್ಲಿ ಎಮ್ಮೆ, ಕೋಣ-ಮುಂತಾದ ಪ್ರಾಣಿಗಳು ಬಿದ್ದು ಹೊರಳಾಡುತ್ತಿದ್ದರೆ ಅದು ನೋಡುವದಕ್ಕೆ ಅಸಹ್ಯವಾಗಿಯೇ ಇರಬೇಕಷ್ಟೆ? ಇದರಂತೆ ಕಾಮಾದಿಗಳೆಂಬ ಮಲ, ಮತ್ತು ವಿಷಯಗಳ ಆಲೋಚನೆಯಿಂದ ಉಂಟಾಗುವ ಅಲುಗಾಟವೆಂಬ ವಿಕ್ಷೇಪ- ಈ ಎರಡು ದೋಷಗಳೂ ಮನಸ್ಸಿಗೆ ಹತ್ತಿರುವದರಿಂದ ನಮಗೆ ಬಹುಸಂಕಟಗಳು ಒದಗುತ್ತಿರುವವು.

ಇಂಥ ಸಂಕಟವನ್ನು ಪರಿಹರಿಸಿಕೊಳ್ಳುವದಕ್ಕೆ ಸೌಮ್ಯವೇ ಮುಂತಾದ ಮಾನಸತಪಸ್ಸನ್ನು ಅಭ್ಯಾಸಮಾಡಬೇಕು. ಮನಃಪ್ರಸಾದ, ಸೌಮ್ಯತ್ವ, ಮೌನ, ಆತ್ಮವಿನಿಗ್ರಹ, ಭಾವಸಂಶುದ್ಧಿ-ಇವೆಲ್ಲ ಮಾನಸತಪಸ್ಸಿನ ರೂಪಗಳು. ಮನಸ್ಸಿನಲ್ಲಿ ಕೆಟ್ಟ ಚಿಂತೆಗಳನ್ನು ಹಚ್ಚಿಕೊಳ್ಳದೆ ವಿಷಯಸಂಬಂಧದ ಮಸುಕನ್ನು ಹತ್ತಿಸದೆ ದಿನದಿನಕ್ಕೂ ಅದನ್ನು ಶುದ್ಧಿಗೊಳಿಸಿಕೊಳ್ಳುವದೇ ಪ್ರಸಾದವು. ಮನಸ್ಸಿನಲ್ಲಿ ಮತ್ತೊಬ್ಬರಿಗೆ ಕೇಡನ್ನು ಬಗೆಯದೆ ಒಳ್ಳೆಯದೇ ಆಗಲೆಂದು ಬಗೆಯುತ್ತಿರುವದರಿಂದ ಆಗಿರುವ ವೃತ್ತಿಯೇ ಸೌಮ್ಯತ್ವವು. ಮುಖಾದಿಗಳು ಪ್ರಸನ್ನವಾಗಿದ್ದರೆ ಈಗ ಸೌಮ್ಯವಾಗಿದ್ದಾರೆಂದು ನಾವು ಊಹಿಸುತ್ತೇವಷ್ಟೆ? ಅಂಥ ಮಾನಸವೃತ್ತಿಯನ್ನು ಸಂಪಾದಿಸಿಕೊಳ್ಳುವದಕ್ಕೆ ಯತ್ನಿಸುತ್ತಿರಬೇಕು. ಮನಸ್ಸನ್ನು ವಶಮಾಡಿಕೊಂಡು ವಾಕ್ಕನ್ನು ಹಿಡಿತದಲ್ಲಿಟ್ಟುಕೊಳ್ಳುವದೇ ಮೌನವು. ಮಾತಿನ ಚಟಕ್ಕೆ ವಶರಾಗಿ ತಮಗೂ ಗೊತ್ತಿಲ್ಲದೆಯೇ ಸಾಮಾನ್ಯ ಮನುಷ್ಯರು ಏನೇನೋ ಹರಟಿಬಿಡುವರು; ಹಾಗೆ ಆಗದಂತೆ ಮನಸ್ಸಿನಲ್ಲಿ ಪ್ರಯತ್ನಮಾಡುತ್ತಿದ್ದರೆ ಮೌನವೆಂಬ ಮಾನಸತಪಸ್ಸನ್ನು ಆಚರಿಸಿದಂತಾಗುವದು. ಮನಸ್ಸಿನಲ್ಲಿ ಒಳ್ಳೆಯ ಯೋಚನೆಗಳನ್ನು ತುಂಬಿಕೊಂಡಿರುವವರಿಗೆ ಮಾತ್ರ ಈ ಮೌನವು ಸಾಧ್ಯವಾಗುವದು. ಇದಕ್ಕೂ ಮೊದಲು ಮನಸ್ಸನ್ನು ಆಗಾಗ ಎಳೆದುಕೊಂಡು ತನ್ನಲ್ಲಿ ನಿಲ್ಲಿಸಿಕೊಳ್ಳುವ ಅಭ್ಯಾಸಮಾಡಬೇಕಾಗುವದಷ್ಟೆ? ಆ ಪ್ರಯತ್ನವೇ ಆತ್ಮವಿನಿಗ್ರಹವೆಂಬ ಸಾಧನವು. ಇನ್ನೊಬ್ಬರ ಸಂಗಡ ಮಾತನಾಡುತ್ತಿರುವಾಗ ಮನಸ್ಸಿನಲ್ಲಿ ಕಪಟವಿಲ್ಲದೆ ಇರುವದೇ ಭಾವಸಂಶುದ್ಧಿಯು. ಇದುವರೆಗೆ ವರ್ಣಿಸಿದ ಸಾಧನಗಳ

ನ್ನೆಲ್ಲ ಸೌಮ್ಯವೆಂಬ ಒಂದೇ ಮಾತಿನಲ್ಲಿ ಗ್ರಂಥಕಾರರು ಅಡಗಿಸಿರುತ್ತಾರೆ. ಇದೆಲ್ಲ **ಮಾನಸತಪಸ್ಸು.**

'ನನ್ನ ಕಣ್ಣು ನಿನ್ನ ವಿಶ್ವರೂಪವನ್ನು ನೋಡುವದಿಲ್ಲ' ಎಂಬ ವಾಕ್ಯವು ಶಾರೀರಕತಪಸ್ಸನ್ನು ಸೂಚಿಸುವದು. ಯಾವಾಗಲೂ ಮನುಷ್ಯನು ಮನಸ್ಸನ್ನು ಬಿಗಿಹಿಡಿದುಕೊಂಡೇ ಇರುವದಿಲ್ಲವಷ್ಟೆ ? ಅದು ಪ್ರಪಂಚದ ಕಡೆಗೆ ಹೋದರೂ ಪ್ರಪಂಚವನ್ನೆಲ್ಲ ಪರಮಾತ್ಮನ ರೂಪವೇ ಎಂದು ಭಾವಿಸುತ್ತಿರಬೇಕು. ಸರ್ವವೂ ಪರಮಾತ್ಮನೇ ಎಂದು ತಿಳಿಯುವದು ಯಾವನಿಗೆ ಕಷ್ಟವಾಗಿರುವದೋ ಆವನು ಮೊದಮೊದಲು ಯಾವಯಾವದು ದೊಡ್ಡದಾಗಿ, ಸುಂದರವಾಗಿ, ಸಂಪದ್ಯುಕ್ತವಾಗಿ, ಕಾಂತಿಯುಕ್ತವಾಗಿ, ಅಥವಾ ಮತ್ತೆ ಯಾವ ಕಾರಣದಿಂದಲಾದರೂ ತನ್ನ ಮೆಚ್ಚಿಕೆಗೆ ಪಾತ್ರವಾಗಿ ಇರುವದೆಂದು ತೋರುವದೋ ಅದದರಲ್ಲಿ ಪರಮಾತ್ಮಭಾವನೆಯನ್ನು ಮಾಡಬೇಕು. ದೇವತೆಗಳನ್ನೂ ಬ್ರಾಹ್ಮಣರನ್ನೂ ಗುರುಗಳನ್ನೂ ತಿಳಿದವರನ್ನೂ ಗೌರವಿಸುವ ಅಭ್ಯಾಸವನ್ನು ಇಡಬೇಕು. ಶರೀರವನ್ನು ಶುಚಿಯಾಗಿಟ್ಟುಕೊಂಡಿರಬೇಕು, ಬ್ರಹ್ಮಚರ್ಯದಿಂದ ಇಂದ್ರಿಯನಿಗ್ರಹವನ್ನು ಮಾಡಿಕೊಳ್ಳುತ್ತಿರಬೇಕು. ಯಾವ ಪ್ರಾಣಿಗೂ ಯಾವ ವಿಧವಾದ ಹಿಂಸೆಯನ್ನೂ ಮಾಡದೆ ಇರುವದಕ್ಕೆ ಯತ್ನಿಸುತ್ತಿರಬೇಕು. ಮನಸ್ಸಿನಿಂದಲೇ ಈ ತಪಸ್ಸುಗಳೂ ನಡೆಯಬೇಕಾಗಿವೆಯಾದರೂ ಇವುಗಳಿಗೆ ಇಂದ್ರಿಯಗಳಿಂದ ಕೂಡಿದ ಶರೀರವೇ ಮುಖ್ಯವಾಗಿರುವದರಿಂದ ಈ ಸಾಧನಗಳನ್ನು **ಶಾರೀರಕತಪಸ್ಸು** ಎಂದು ಕರೆಯುತ್ತಾರೆ.

'ನನ್ನ ವಾಕ್ಕು ಸೌಮ್ಯವಾದ ಮಾತನ್ನಾಡುವದಿಲ್ಲ' ಎಂಬುದು **ವಾಙ್ಮಯತಪಸ್ಸನ್ನು** ತಿಳಿಸುತ್ತದೆ. ಯಾರಿಗೂ ದುಃಖವನ್ನುಂಟುಮಾಡದೆ ಇರುವದಾಗಿಯೂ ಸತ್ಯವಾಗಿಯೂ ಪ್ರಿಯವಾಗಿಯೂ ಹಿತವಾಗಿಯೂ ಇರುವ 'ಸೌಮ್ಯ'ವಾದ ಮಾತನ್ನೇ ಅಲ್ಲದೆ ಶಾಸ್ತ್ರವನ್ನು ವಿಧಿಪ್ರಕಾರವಾಗಿ ಅಭ್ಯಾಸ ಮಾಡುವದನ್ನೂ ಈ ತಪಸ್ಸಿನಲ್ಲಿ ಸೇರಿಸಿಕೊಳ್ಳಬೇಕು. ಸೌಮ್ಯವಾಣಿ ಎನ್ನಿಸಿಕೊಳ್ಳಬೇಕಾದರೆ ಪ್ರಿಯವಾಗಿದ್ದರೆ ಸಾಲದು, ಹಿತವಾಗಿಯೂ ಇರಬೇಕು. ಪ್ರಿಯವಾದ ಮಾತೇ ಆಗಲಿ, ಸತ್ಯವಾದ ಮಾತೇ ಆಗಲಿ, ಹಿತವಾದ ಮಾತೇ ಆಗಲಿ–ಯಾರಿಗೂ ವ್ಯಥೆಯನ್ನುಂಟುಮಾಡುವಂತಿರಬಾರದು. ಆಡುವ ಮಾತಿನಲ್ಲಿ ಈ ನಾಲ್ಕು ಗುಣಗಳಲ್ಲಿ ಯಾವದೊಂದು ಕಡಿಮೆಯಾದರೂ ಅದು

ವಾಙ್ಮಯತಪಸ್ಸೆನಿಸುವದಿಲ್ಲ. ಶಾಸ್ತ್ರವನ್ನು ಅಭ್ಯಾಸಮಾಡುವ ವಿಷಯ ದಲ್ಲಿಯೂ ಹೀಗೆಯೇ ತಿಳಿಯಬೇಕು. ಶುಚಿಯಾಗಿರಬೇಕು, ಇಂಥ ದಿಕ್ಕಿಗೆ ಮುಖವಾಗಿ ಕೂತುಕೊಂಡಿರಬೇಕು, ಗುರುಗಳಿಗೆ ನಮಸ್ಕರಿಸಬೇಕು, ಶ್ರದ್ಧೆ ಯಿಂದ ಕೂಡಿರಬೇಕು– ಎಂದು ಮೊದಲಾಗಿ ಶಾಸ್ತ್ರಾಭ್ಯಾಸಕ್ಕೆ ಏನೇನು ನಿಯಮಗಳನ್ನು ಹೇಳಿದೆಯೋ ಅವುಗಳನ್ನೆಲ್ಲ ಪಾಲಿಸಿ ಅಭ್ಯಾಸಮಾಡಿದರೇ ತಪಸ್ಸಾಗುವದೇ ಹೊರತು ಗುರುಶಾಸ್ತ್ರನಿಯಮಗಳನ್ನು ಲೆಕ್ಕಕ್ಕೆ ತೆಗೆದು ಕೊಳ್ಳದೆ ತನಗೆ ತೋರಿದ ರೀತಿಯಿಂದ ಮಾಡಿದ ಶಾಸ್ತ್ರಾಭ್ಯಾಸವು ತಪಸ್ಸಾ ಗುವದಿಲ್ಲ.

ಹೀಗೆ ಮೂರು ವಿಧವಾದ ತಪಸ್ಸುಗಳಿರುವವಷ್ಟೆ? ಇವುಗಳಲ್ಲಿ ಮಾನಸ ತಪಸ್ಸು ಹೆಚ್ಚುಕಷ್ಟವಾಗಿರುವದು; ಆದ್ದರಿಂದ ಶಾರೀರಕತಪಸ್ಸನ್ನೂ ವಾಚಿಕ ತಪಸ್ಸನ್ನೂ ಮೊದಲು ಅಭ್ಯಾಸಮಾಡಬೇಕು. ಆಮೇಲೆ ಮಾನಸಿಕತಪಸ್ಸನ್ನು ಅಭ್ಯಾಸಮಾಡಬೇಕು–ಎಂಬುದೇ ಇಲ್ಲಿ ತಿಳಿಯತಕ್ಕದ್ದು.

## ೮. ಸತ್ತ್ವಗುಣದ ಪ್ರಾಮುಖ್ಯತೆ

**ಸತ್ತ್ವಂ ನ ಮೇ ಮನಸಿ ಯಾತಿ ರಜಸ್ತಮೋಭ್ಯಾಮ್**
**ವಿದ್ಧೇ ತದಾ ಕಥಮಹೋ ಶುಭಕರ್ಮವಾರ್ತಾ ।**
**ಸಾಕ್ಷಾತ್ಪರಂಪರತಯಾ ಸುಖಸಾಧನಂ ತತ್**
**ತಸ್ಮಾತ್ತ್ವಮದ್ಯ ಶರಣಂ ಮಮ ದೀನಬನ್ಧೋ ॥ ೮ ॥**

## ಅರ್ಥ

ರಜಸ್ತಮೋಗುಣಗಳಿಂದ ವ್ಯಥೆಪಟ್ಟಿರುವ ನನ್ನ ಮನಸ್ಸಿನಲ್ಲಿ ಸತ್ತ್ವವು ಬರುವಂತಿಲ್ಲ; ಆಗ ಪುಣ್ಯಕರ್ಮದ ಮಾತು ಹೇಗೆ ಬರುವದು ? ಆ ಶುಭಕರ್ಮವೇ ಸಾಕ್ಷಾತ್ತಾಗಿಯೂ ಪರಂಪರೆ

ಯಿಂದಲೂ ಸುಖಕ್ಕೆ ಸಾಧನವಾಗಿರುವದು. ಆದ್ದರಿಂದ ಎಲೈ, ದೀನಬಂಧುವೆ, ನೀನೇ ಈಗ ನನಗೆ ಶರಣು.

## ವಿಚಾರ

ಹಿಂದೆ ತಿಳಿಸಿದ ಮೂರುಬಗೆಯ ತಪಸ್ಸುಗಳೂ ಮುಖ್ಯವಾಗಿ ಮನಸ್ಸಿಗೇ ಸಂಬಂಧಪಟ್ಟಿರುತ್ತವೆ. ಏಕೆಂದರೆ ಕಾಯಿಕವಾಚಿಕತಪಸ್ಸುಗಳಿಗೆ ಶರೀರವೂ ವಾಗಿಂದ್ರಿಯವೂ ಮುಖ್ಯವಾಗಿವೆಯಾದರೂ ಅವುಗಳಿಗೂ ಮನಸ್ಸೇ ಮೂಲಾಧಾರವಾಗಿದೆ. ಆದ್ದರಿಂದ ಮನಸ್ಸಿನ ಸಂಬಂಧವಿಲ್ಲದೆ ಯಾವ ತಪಸ್ಸೂ ನಡೆಯುವಹಾಗಿಲ್ಲ. ಆದಕಾರಣ ಮನಸ್ಸಿನ ಸ್ಥಿತಿಯೇ ಎಲ್ಲಕ್ಕೂ ಕಾರಣವೆಂದು ತಿಳಿಸುವದಕ್ಕೆ ಮನಸ್ಸಿನ ಸ್ವರೂಪವನ್ನು ಈಗ ನಿರೂಪಿಸುತ್ತಾರೆ.

ಈ ಮನಸ್ಸು ಸತ್ತ್ವ, ರಜಸ್ಸು, ತಮಸ್ಸು–ಎಂಬ ಮೂರು ಗುಣಗಳಿಂದ ಆಗಿರುತ್ತದೆ. ಈ ಮೂರು ಗುಣಗಳು, ಒಂದೊಂದು ಕಾಲದಲ್ಲಿ ಒಂದೊಂದು ಪ್ರಬಲವಾಗಿರುವವು. ಆಗ ಅವುಗಳ ಫಲವು ನಮ್ಮಲ್ಲಿ ಕಾಣಿಸಿಕೊಳ್ಳುವದು. ಹೇಗೆಂದರೆ ಅಜ್ಞಾನ, ಆಲಸ್ಯ, ಜಡತ್ವ, ನಿದ್ರೆ, ಪ್ರಮಾದ–ಮುಂತಾದವುಗಳು **ತಮೋಗುಣದ ಕಾರ್ಯಗಳು.** ತಮಸ್ಸೆಂದರೆ ಕತ್ತಲೆಯೆಂದರ್ಥವಾಗುವದು. ತಮೋಗುಣವು ನಮ್ಮಲ್ಲಿ ಹೆಚ್ಚಿದಾಗ ಕತ್ತಲು ಕವಿದಂತೆ ನಮಗೆ ಅಜ್ಞಾನವು ಮುಸುಕಿಕೊಂಡಿರುವದು ; ಸೋಮಾರಿತನವು ಕಾಲೂರಿಕೊಂಡಿರುವದು ; ಜಡವಸ್ತುಗಳಾದ ಕಲ್ಲು, ಗುಂಡು– ಮುಂತಾದವುಗಳಂತೆ ಬಿದ್ದಲ್ಲಿ ಬಿದ್ದಿರುವೆವು ; ತೂಕಡಿಕೆಯು ನಮ್ಮನ್ನು ಬಾಧಿಸುತ್ತಿರುವದು ; ಯಾವ ವಿಷಯದಲ್ಲಿಯೂ ನಮಗೆ ಅವಧಾನವಿರುವದಿಲ್ಲ. ರಜಸ್ಸೆಂದರೆ ಧೂಳಿಯೆಂದು ಅರ್ಥವಾಗುತ್ತದೆ. ಕಾಮ, ಕ್ರೋಧ, ಲೋಭ, ದಂಭ, ಅಸೂಯೆ, ಅಹಂಕಾರ, ಈರ್ಷ್ಯೆ, ಮತ್ಸರ– ಮುಂತಾದ ಕೆಟ್ಟ ಗುಣಗಳೆಲ್ಲ **ರಜೋಗುಣದ ಕಾರ್ಯಗಳು.** ಕನ್ನಡಿಯ ಮೇಲೆ ಧೂಳು ಕೂತಿರುವಾಗ ಪ್ರತಿಬಿಂಬವು ತಪ್ಪುತಪ್ಪಾಗಿ ಬೀಳುವಂತೆ, ರಜೋಗುಣದ ಸಂಬಂಧವಿರುವ ಮನಸ್ಸಿನಲ್ಲಿ ನಿಜವಾದ ವಸ್ತುಸ್ವಭಾವವು ಬಿಂಬಿಸುವದಕ್ಕೆ ಅವಕಾಶವಿರುವದಿಲ್ಲ. ಇದರಿಂದ ಅನೇಕ ಅನರ್ಥಗಳಾಗಿಬಿಡುವವು. ಇನ್ನೊಂದು ವಿಷಯವೇನೆಂದರೆ, ಈ ರಜೋಗುಣದ ಕಾರ್ಯವು ಎದ್ದುಕಾಣಬೇಕಾದರೆ ತಮೋಗುಣವು ತನ್ನ

ಕಾರ್ಯವನ್ನು ಆಗಲೆ ನಡೆಯಿಸಿಯೇಬಿಟ್ಟಿರುತ್ತದೆ. ಕತ್ತಲೆಯಲ್ಲಿ ನಿದ್ದೆಗಣ್ಣಿನಿಂದ ಹೊರಕ್ಕೆ ಬಂದವನಿಗೆ ದೂರದಲ್ಲಿ ಕೈಕಂಬವು ಒಬ್ಬ ಕಳ್ಳನೆಂದೋ ಯಾವದೋ ಭೂತವೆಂದೋ ತೋರಿದರೆ, ಕೂಡಲೆ ಅವನು ಹೆದರಿ ನಡುಗುತ್ತಾ ಓಡಿಹೋಗುವದುಂಟಷ್ಟೆ ? ಇದರಂತೆ ಮೂಢನಿಗೇ ಗಡಿಬಿಡಿಗೆ ಕಾರಣವಾದ ರಜೋಗುಣವು ಅಂಟುತ್ತದೆ. ಇವೆರಡು ಗುಣಗಳೂ ಯಾವ ಮನಸ್ಸಿನ ಮೇಲೆ ತಮ್ಮ ಕೈತೋರಿಸುತ್ತಿರುವವೋ ಆ ಮನಸ್ಸಿನಲ್ಲಿ ಸತ್ತ್ವದ ಕಾರ್ಯವೇನೂ ಜರುಗುವದಿಲ್ಲ.

ಮನಸ್ಸಿನಲ್ಲಾಗುವ ಶುಭಪ್ರವೃತ್ತಿಯೆಲ್ಲ ಸತ್ತ್ವಗುಣದ ಕಾರ್ಯವೇ. ಹೇಗೆಂದರೆ ಶರೀರವನ್ನು ಶುದ್ಧವಾಗಿರಿಸಿಕೊಳ್ಳಬೇಕೆಂದು ಬಯಸುವದು, ವಿಷಯಗಳಲ್ಲಿ ಹೆಚ್ಚು ಆಸಕ್ತಿಯನ್ನಿಡದೆ ಇರುವದು, ಸಂಸಾರದುಃಖಕ್ಕೆ ಹೇಸಿ ಇವುಗಳಿಂದ ಬಿಡುಗಡೆಯಾಗಬೇಕೆಂದು ತವಕಿಸುವದು, ಈಶ್ವರನಲ್ಲಿ ಭಕ್ತಿಯನ್ನು ಮಾಡುವದು, ಸದ್ಗುರುವನ್ನು ಸೇವಿಸುವದು, ಆತನು ಹೇಳಿದ ತತ್ತ್ವಾರ್ಥವನ್ನು ಕುರಿತು ಮನನಮಾಡುವದು, ಧ್ಯಾನಾದಿಗಳಿಂದಾಗುವ ಸುಖವನ್ನು ಬಯಸುವದು–ಇವೆಲ್ಲ ಸತ್ತ್ವಗುಣದ ಕಾರ್ಯಗಳು. ಆದರೆ ತಮೋಗುಣವೂ ರಜೋಗುಣವೂ ಎಡೆಬಿಡದೆ "ವ್ಯಥೆಪಡಿಸುತ್ತಿರುವ ಮನಸ್ಸಿನಲ್ಲಿ ಸತ್ತ್ವಗುಣವು ಒರುವದಿಲ್ಲ." ಏಕೆಂದರೆ ಮನಸ್ಸಿನಲ್ಲಿ ಮೂರು ಗುಣಗಳೂ ಇವೆಯಾದರೂ ಯಾವಾಗ ಯಾವ ಗುಣವು ಬೆಳೆದುಕೊಂಡಿರುವದೋ ಆಗ ಮನಸ್ಸು ಆ ರೀತಿಯಿಂದ ಇರುವದು. ತಮೋಗುಣವು ಹೆಚ್ಚಾಗಿದ್ದರೆ ತಾಮಸಮನಸ್ಸಾಗಿರುವದು. ತಾಮಸಜನರಿಗೆ ಅಜ್ಞಾನ, ನಿದ್ರೆ– ಮುಂತಾದವುಗಳೇ ಧರ್ಮಗಳಾಗಿರುತ್ತವೆ. ರಜೋಗುಣವು ಹೆಚ್ಚಾದ ಮನಸ್ಸು ರಾಜಸಮನಸ್ಸು ಎನಿಸುತ್ತದೆ. ಅಂಥ ಮನಸ್ಸಿನ ಜನರಿಗೆ ಕಾಮ, ಕ್ರೋಧ, ಚಾಂಚಲ್ಯ–ಮುಂತಾದವೇ ಧರ್ಮಗಳಾಗಿರುತ್ತವೆ. ಈ ರೀತಿಯಲ್ಲಿ ರಜಸ್ತಮೋಗುಣಗಳು ಅಜ್ಞಾನಾದಿಗಳನ್ನೂ ಕಾಮಾದಿಗಳನ್ನೂ ಬಾಣಗಳಂತೆ ಪ್ರಯೋಗಿಸಿ ವ್ಯಥೆಪಡಿಸುತ್ತಿರುವ ಮನಸ್ಸಿನಲ್ಲಿ ಸತ್ತ್ವಗುಣವು ಹೇಗೆ ತಲೆದೋರೀತು ? ಅದಿಲ್ಲದಿದ್ದರೆ ಅದರ ಕಾರ್ಯವಾದ ಶುಭಕರ್ಮದ ಮಾತು ಎಲ್ಲಿಯದು ?

'ಶುಭಕರ್ಮವೇ ಪರಂಪರೆಯಿಂದಲೂ ಸಾಕ್ಷಾತ್ತಾಗಿಯೂ ಸುಖಕ್ಕೆ ಸಾಧನವಾಗಿರುವದು.' ಶುಭಕರ್ಮವು ಹೆಚ್ಚುತ್ತಾ ಹೋದಹಾಗೆಲ್ಲ ಮನಸ್ಸು ಶುದ್ಧಿಯಾಗುವದು. ಶುದ್ಧವಾದ ಕನ್ನಡಿಯಲ್ಲಿ ಮುಖದ ಪ್ರತಿಬಿಂಬವು ಚೆನ್ನಾಗಿ ಮೂಡುವ ಹಾಗೆ ಶುದ್ಧವಾದ ಮನಸ್ಸಿನಲ್ಲಿ ಆತ್ಮನ ಆನಂದವು ಹೆಚ್ಚುಹೆಚ್ಚಾಗಿ ಪ್ರತಿಬಿಂಬಿಸುತ್ತಾಹೋಗುವದರಿಂದ ಶುಭಕರ್ಮಗಳಿಂದ ಒಂದು ಬಗೆಯ ಆನಂದವುಂಟಾಗುತ್ತದೆ. ಕರ್ಮವು ನೆರವೇರಿದಮಾತ್ರದಿಂದ ಉಂಟಾಗುವ ಈ ಉತ್ತಮಸುಖವನ್ನು ಪುಣ್ಯಕರ್ಮಿಗಳಾದ ಸಾತ್ತ್ವಿಕರಲ್ಲದೆ ಮಿಕ್ಕ ತಾಮಸರಾಗಲಿ ರಾಜಸರಾಗಲಿ ಅರಿಯರು. ನಿತ್ಯಸುಖವಾದ ಮೋಕ್ಷಕ್ಕೂ ಈ ಶುಭಕರ್ಮವೇ ಪರಂಪರೆಯಿಂದ ಸಾಧನವಾಗುವದು. ಅದು ಹೇಗೆಂದರೆ, ಮೇಲೆ ಹೇಳಿದಂತೆ ಮನಸ್ಸು ಶುದ್ಧಿಯಾದಹಾಗೆಲ್ಲ ಗುರುಶಾಸ್ತ್ರ ಬೋಧೆಗಳು ಮನಸ್ಸಿಗೆ ಚೆನ್ನಾಗಿ ಹಿಡಿಯುತ್ತವೆ. ತತ್ತ್ವೋಪದೇಶವು ಯಾವ ಮನಸ್ಸಿನಲ್ಲಿ ಪ್ರತಿಫಲಿಸುತ್ತದೆಯೋ ಆ ಮನಸ್ಸುಳ್ಳ ಸಾಧಕನಿಗೆ ನಿತ್ಯಸುಖವೆಂಬುದು ಅಂಗೈನೆಲ್ಲಿಯಂತಾಗುವದು. ಆದ್ದರಿಂದ ಶುಭಕರ್ಮವೇ ಸುಖಕ್ಕೆ ಮೂಲಕಾರಣವಾಗಿರುತ್ತದೆ.

ಇಂಥ ಶುಭಕರ್ಮವು ಮನಸ್ಸಿಗೆ ಒಗ್ಗುವದಕ್ಕೆ ಅದರಲ್ಲಿ ರಜಸ್ತಮೋಗುಣಗಳ ಹೊಡೆತಗಳು ಕಡಿಮೆಯಾಗಿರಬೇಕು. ಈ ರಜಸ್ತಮೋಗುಣಗಳು ಪರಮೇಶ್ವರನನ್ನು ನಂಬಿ ಸಾಧನಮಾಡುವಾತನಿಂದ ಮೆಲ್ಲಮೆಲ್ಲಗೆ ಹಿಮ್ಮೆಟ್ಟುವವು. ಶುಭಕರ್ಮವನ್ನು ಮಾಡುತ್ತಲೇ ಇದ್ದರೆ ರಜಸ್ತಮೋಗುಣಗಳು ಕೊನೆಗೆ ಸಂಪೂರ್ಣವಾಗಿ ತೊಳೆದುಹೋಗಿ ಕೇವಲಸತ್ತ್ವವೇ ಉಳಿದುಕೊಳ್ಳುವದು. ಇದನ್ನು ಶುದ್ಧಸತ್ತ್ವವೆನ್ನುತ್ತಾರೆ. ಇದೇ ಪರಮಾತ್ಮಸಾಕ್ಷಾತ್ಕಾರಕ್ಕೆ ಕಾರಣವಾಗುವದರಿಂದ ಮುಮುಕ್ಷುವಾದವನು ಭಗವಂತನಿಗೆ ಶರಣುಹೋಗಿ ಆತನ ಅನುಗ್ರಹದ ಬಲದಿಂದ ರಜಸ್ಸಿನ ಬಲದಿಂದ ತಮಸ್ಸನ್ನೂ ಸತ್ತ್ವಗುಣದಿಂದ ರಜಸ್ತಮೋಗುಣಗಳನ್ನೂ ಕಡಿಮೆಮಾಡಿಕೊಂಡು ಶುದ್ಧಸತ್ತ್ವಪ್ರಧಾನವಾದ ಮನಸ್ಸನ್ನು ಸಂಪಾದಿಸಿಕೊಳ್ಳಬೇಕೆಂಬುದು ಅಭಿಪ್ರಾಯವು.

# ೯. ಗೌಣಭಕ್ತಿ

ಪೂಜಾ ಕೃತಾ ನ ಹಿ ಕದಾಪಿ ಮಯಾ ತ್ವದೀಯಾ
ಮನ್ತ್ರಂ ತ್ವದೀಯಮಪಿ ಮೇ ನ ಜಪೇದ್ರಸಜ್ಞಾ
ಚಿತ್ತಂ ನ ಮೇ ಸ್ಮರತಿ ತೇ ಚರಣೌ ಹ್ಯವಾಪ್ಯ
ತಸ್ಮಾತ್ತ್ವಮದ್ಯ ಶರಣಂ ಮಮ ದೀನಬನ್ಧೋ ॥ ೫ ॥

## ಅರ್ಥ

ನಾನು ನಿನ್ನ ಪೂಜೆಯನ್ನು ಎಂದೂ ಮಾಡಲಿಲ್ಲ; ನನ್ನ ನಾಲಿಗೆಯು ನಿನ್ನ ಮಂತ್ರವನ್ನೂ ಜಪಿಸಲಿಲ್ಲ. ನಿನ್ನ ಚರಣವನ್ನೇ ನಂಬಿ ನನ್ನ ಮನಸ್ಸು ಸ್ಮರಿಸುವದೂ ಇಲ್ಲ. ಆದ್ದರಿಂದ ಎಲೈ ದೀನಬಂಧುವೆ, ಈಗ ನೀನೇ ನನಗೆ ಶರಣು.

## ವಿಚಾರ

ಹಿಂದಿನ ಎರಡು ಶ್ಲೋಕಗಳಲ್ಲಿ ಕಾಯಿಕ, ವಾಚಿಕ, ಮಾನಸಿಕ– ಎಂಬ ತಪಸ್ಸನ್ನೂ ಅದಕ್ಕಿರುವ ವಿಘ್ನವನ್ನೂ ಆ ವಿಘ್ನದ ಕಾರಣವನ್ನೂ ತಿಳಿಸಿರುತ್ತದೆ. ರಜಸ್ತಮೋಗುಣಗಳು ಹೆಚ್ಚಿ ಮನಸ್ಸನ್ನು ಸಂಕಟಗೊಳಿಸುತ್ತಿರುವದೇ ತಪಸ್ಸಿಗೆ ವಿಘ್ನವು. ಈ ವಿಘ್ನಕ್ಕೆ ನಿವಾರಣೆಯೇನು ?– ಎಂಬುದನ್ನು ಈಗ ಹೇಳುತ್ತಾರೆ.

ಯಾವ ಸಾಧನೆಗೂ ಪರಮೇಶ್ವರನೇ ಸಹಾಯಮಾಡಬೇಕಾಗಿರುವದರಿಂದ ಪರಮೇಶ್ವರಭಕ್ತಿಯು ಎಲ್ಲಕ್ಕೂ ಹೆಚ್ಚಿನ ಸಾಧನವೆಂದು ತಾನೇ ವ್ಯಕ್ತವಾಗುತ್ತದೆ. ಈ ಭಕ್ತಿಯು ಗೌಣಭಕ್ತಿಯೆಂದೂ ಪರಭಕ್ತಿಯೆಂದೂ ಎರಡು ಬಗೆಯಾಗಿರುವದು. ಪರಭಕ್ತಿಯು ಮಾಡತಕ್ಕದ್ದಲ್ಲ. ಏಕೆಂದರೆ ಪರಮಾತ್ಮನ ಸ್ವರೂಪವನ್ನು ತಿಳಿದಮೇಲೆ ಆ ಸ್ವರೂಪದ ಮಹಿಮೆಯಿಂದ ನಮಗೆ ಅದರಲ್ಲಿ ತಾನೇ ಆಗುವ ನಿಷ್ಠೆಗೆ ಪರಭಕ್ತಿಯೆಂದ ಹೆಸರು. ಈ ನಿಜವಾದ ಭಕ್ತಿಯು ಉಂಟಾಗುವವರೆಗೆ ನಾವು ಮಾಡಬೇಕಾದ ಸಾಧನರೂಪವಾದ ಭಕ್ತಿಯೇ **ಗೌಣಭಕ್ತಿಯು**. ಈ ಗೌಣಭಕ್ತಿಯನ್ನು ಇಲ್ಲಿ ವಿಘ್ನ

ನಿವಾರಣೆಗೆ ಉಪಾಯವೆಂದು ತಿಳಿಸಿಕೊಟ್ಟಿರುತ್ತದೆ. ಅದು ಹೇಗೆಂದರೆ, ಪೂಜೆ ಮುಂತಾದವುಗಳಲ್ಲಿ ಅನುರಾಗವಿಡುವದು ಕಾಯಿಕತಪಸ್ಸಿಗೆ ಆಗಬಹುದಾದ ವಿಘ್ನದ ನಾಶಕ್ಕೆ ಉಪಾಯವಾಗಿರುವದು. ಪರಮಾತ್ಮಮಂತ್ರಜಪವೇ ಮುಂತಾದವುಗಳಲ್ಲಿ ಅನುರಾಗವಿಡುವದು ವಾಚಿಕತಪಸ್ಸಿಗೆ ಆಗಬಹುದಾದ ವಿಘ್ನದ ನಾಶಕ್ಕೆ ಉಪಾಯವಾಗಿರುವದು. ಪರಮಾತ್ಮಚರಣಸ್ಮರಣೆಯೇ ಮುಂತಾದವುಗಳಲ್ಲಿ ಅನುರಾಗವಿಡುವದು ಮಾನಸತಪಸ್ಸಿಗೆ ಆಗಬಹುದಾದ ವಿಘ್ನದ ನಾಶಕ್ಕೆ ಉಪಾಯವಾಗಿರುವದು. ಹೀಗೆ ಈ ಮೂರು ಬಗೆಯಾದ ಗೌಣಭಕ್ತಿಯ ಸಾಧನಗಳನ್ನೂ ತಪಸ್ಸಿನ ವಿಘ್ನದ ನಾಶಕ್ಕೆ ಉಪಯೋಗಿಸಿಕೊಳ್ಳಬೇಕು.

ಪರಮೇಶ್ವರನ ಸ್ವರೂಪವು ವ್ಯಕ್ತವೆಂದೂ ಅವ್ಯಕ್ತವೆಂದೂ ಎರಡು ಬಗೆಯಾಗಿರುವದರಿಂದ ಪೂಜೆಯೂ ವ್ಯಕ್ತಪೂಜೆಯೆಂದೂ ಅವ್ಯಕ್ತಪೂಜೆಯೆಂದೂ ಎರಡು ವಿಧವಾಗಿರುವದು. ಇಂದ್ರಿಯಾದಿಗಳಿಗೆ ಗೋಚರವಾಗದೆ ಇರುವ ಪರಮಾತ್ಮತತ್ತ್ವವೇ ಅವ್ಯಕ್ತವೆನಿಸುವದು ; ನಾರಾಯಣ, ಶಿವ, ಶಕ್ತಿ, ಗಣೇಶ, ಸೂರ್ಯ–ಮುಂತಾದ ರೂಪದಲ್ಲಿ ಪ್ರಕಟವಾಗಿರುವನೆಂದು ಪುರಾಣ ಪ್ರಸಿದ್ಧವಾಗಿರುವ ಸ್ವರೂಪವೇ ಪರಮೇಶ್ವರನ ವ್ಯಕ್ತರೂಪವು. ಎಲ್ಲಾ ಕಡೆಯಲ್ಲಿಯೂ ವ್ಯಾಪಿಸಿಕೊಂಡಿರುವ ಬೆಳಕು ಸೂರ್ಯಬಿಂಬವೇ ಮುಂತಾದ ರೂಪದಲ್ಲಿ ಒಂದು ಸ್ಥಾನದಲ್ಲಿಯೂ ಇದ್ದುಕೊಂಡಿರುವಹಾಗೆ ಚೈತನ್ಯರೂಪದಿಂದ ಎಲ್ಲಾ ಕಡೆಯಲ್ಲಿಯೂ ಇರುತ್ತಿರುವ ಪರಮಾತ್ಮನೇ ಈ ವ್ಯಕ್ತರೂಪಗಳಿಂದಲೂ ಪ್ರಕಟನಾಗಿರುತ್ತಾನೆ. ಆಪ್ತಕಾಮನಾಗಿದ್ದರೂ ಪರಮೇಶ್ವರನು ಲೋಕಗಳಲ್ಲಿ ವ್ಯವಸ್ಥೆಯನ್ನು ಇಡುವದಕ್ಕಾಗಿಯೂ ತನ್ನನ್ನು ಉಪಾಸನೆ ಮಾಡುವ ಭಕ್ತರ ಅನುಗ್ರಹಕ್ಕಾಗಿಯೂ ಹೀಗೆ ವ್ಯಕ್ತವಾದ ರೂಪಗಳನ್ನು ಲೀಲಾಮಾತ್ರದಿಂದಲೇ ಅಂಗೀಕರಿಸುತ್ತಾನಾದ್ದರಿಂದ ಆತನು ನಮ್ಮಹಾಗೆ ದೇಹವುಳ್ಳವನೆಂದು ಭಾವಿಸಬಾರದು. ಆದ್ದರಿಂದಲೇ ಪರಮೇಶ್ವರನು ನಾರದರಿಗೆ ತನ್ನ ರೂಪವನ್ನು ಅನುಗ್ರಹಪೂರ್ವಕವಾಗಿ ತೋರಿಸಿ ಅಪ್ಪಣೆ ಕೊಡಿಸಿದ್ದೇನೆಂದರೆ :

**ಮಾಯಾ ಹ್ಯೇಷಾ ಮಯಾ ಸೃಷ್ಟಾ ಯನ್ಮಾಂ ಪಶ್ಯಸಿ ನಾರದ ।**
**ಸರ್ವಭೂತಗುಣೈರ್ಯುಕ್ತಂ ನೈವಂ ಮಾಂ ಜ್ಞಾತುಮರ್ಹಸಿ ॥**

'ಎಲೈ ನಾರದನೆ, ಈಗ ನೀನು ನೋಡುತ್ತಿರುವ ರೂಪವು ನನ್ನ ಮಾಯೆಯಿಂದ ಆಗಿರುವದು ; ನಾನು ಸಕಲಭೂತಗಳ ಗುಣಗಳಿಂದಲೂ ಕೂಡಿರುವವನು ಎಂದು ಇದರಿಂದ ತಿಳಿದುಕೊಳ್ಳಬೇಡ.' ಹೀಗೆ ವ್ಯಕ್ತವಾಗಿರುವ ರೂಪವನ್ನು ಮೊದಲು ಅರ್ಚನೆಮಾಡಬೇಕು. ಅಂಥವರಿಗೆ ಆಮೇಲೆ ಅವ್ಯಕ್ತರೂಪದ ಉಪಾಸನೆಯು ದಕ್ಕುವದು.

ವ್ಯಕ್ತರೂಪದ ಅರ್ಚನೆಯುಕೂಡ ಬಾಹ್ಯವೆಂದೂ ಅಂತರವೆಂದೂ ಎರಡು ಬಗೆ. ಹೊರಗೆ ನಾವೇ ಮಾಡಿಕೊಂಡಿರುವ ಮೂರ್ತಿ, ಸಾಲಗ್ರಾಮ, ಲಿಂಗ-ಮುಂತಾದವುಗಳ ದ್ವಾರದಿಂದ ಅರ್ಚನೆಮಾಡುವದು ಬಾಹ್ಯಾರ್ಚನೆಯು ; ಮನಸ್ಸಿನಲ್ಲಿಯೇ ಭಾವನೆಯಿಂದ ಮಾಡುವ ಅರ್ಚನೆಯು ಅಂತರವಾದ ಅರ್ಚನೆ. ಯಾರಿಗೆ ಮನಸ್ಸು ಹರಿದಾಡುತ್ತಿರುವದೋ ಅವರು ಮೊದಲು ಬಾಹ್ಯಾರ್ಚನೆಯನ್ನು ಮಾಡಬೇಕು. ಈ ಪೂಜೆಯನ್ನು ಮಾಡುವಾಗ ಕುಲಪದ್ಧತಿಯನ್ನೂ ಶಾಸ್ತ್ರವಚನವನ್ನೂ ಗುರುವಿನ ಉಪದೇಶವನ್ನೂ ಅನುಸರಿಸಿ ಸಾತ್ತ್ವಿಕವಸ್ತುಗಳ ಸಹಾಯದಿಂದ ಮಾಡಬೇಕಲ್ಲದೆ, ದಂಭಕ್ಕಾಗಿ ಸ್ವಧರ್ಮವನ್ನು ಮೀರಿ ತಮಗೆ ತೋರಿದಂತೆ ಮಾ ಡ ಬಾ ರ ದು. ಪೂಜೆಗೆ ಮುಖ್ಯವಾಗಿ ಶ್ರದ್ಧೆಯೇ ಬೆಲೆಯನ್ನು ಕೊಡುವದೆಂಬುದನ್ನು ಮರೆಯಬಾರದು. ಯಾವ ಮೂರ್ತಿಯನ್ನು ಉಪಯೋಗಿಸಲಿ, ಯಾವ ವಸ್ತುಗಳನ್ನು ಪೂಜೆಗಾಗಿ ಒದಗಿಸಿಕೊಂಡಿರಲಿ, ಸರ್ವವ್ಯಾಪಿಯಾದ ಪರಮೇಶ್ವರನಿಗೆ ಈ ಪೂಜೆಯು ಅರ್ಪಿತವಾಗಬೇಕಾಗಿದೆಯೆಂಬುದನ್ನು ಯಾವಾಗಲೂ ಮರೆಯದೆ ಇರಬೇಕು.

ಪೂಜೆಮಾಡುವಾಗಲೂ ಬೇರೆಯ ಕಾಲದಲ್ಲಿಯೂ ಮಂತ್ರಜಪವನ್ನು ಮಾಡುವದು ವಿಶೇಷಫಲದಾಯಕವಾಗಿರುವದು. ಬಾಹ್ಯಾರ್ಚನೆಯಿಂದ ಶರೀರದ ತಪಸ್ಸು ನೆರವೇರುವಂತೆ ಮಂತ್ರಜಪದಿಂದ ವಾಕ್ತಪಸ್ಸು ನೆರವೇರುತ್ತದೆ. ಮಂತ್ರಸಿದ್ಧಿಯನ್ನು ಹೊಂದಿದ ಗುರುಗಳಿಂದ ಉಪದೇಶವನ್ನು ಪಡೆದು ಜಪಿಸಿದರೆ ಅದಕ್ಕೆ ಬಲವು ಬರುತ್ತದೆ. ಮಂತ್ರಜಪದ ಕಾಲದಲ್ಲಿ ಆದಷ್ಟು ಶುಚಿಯಾಗಿರಬೇಕು. ಮಂತ್ರದ ದೇವತೆಯ ಸ್ವರೂಪವನ್ನು ಸ್ಮರಣೆಗೆ ತಂದುಕೊಳ್ಳುತ್ತಿರಬೇಕು. ಅಖಂಡವಾಗಿ ಮಂತ್ರಾರ್ಥವನ್ನು ಅನುಸಂಧಾನಮಾಡುವದೆಂಬುದು ಸಾಮಾನ್ಯರಿಗೆ ದಕ್ಕಲಾರದಾದ್ದರಿಂದ ವ್ಯವ

ಹಾರದ ನಡುವೆ ಸಿಕ್ಕಿದಷ್ಟು ಕಾಲದಲ್ಲಿಯಾದರೂ ಜಪವನ್ನು ಮಾಡುತ್ತಿರಬೇಕು. ಮಂತ್ರವನ್ನು ಜಪಿಸುವದರಲ್ಲಿಕೂಡ ದಂಭಾಹಂಕಾರಗಳನ್ನು ಬಿಟ್ಟು ಕುಲಾಚಾರ, ದೇಶಕಾಲಗಳ ವ್ಯವಹಾರ– ಇವುಗಳಿಗೆ ವಿರೋಧವಾಗದಂತೆ ನೋಡಿಕೊಳ್ಳುವದು ಆಗತ್ಯವು. ವೇದಾದಿಮಂತ್ರಗಳೇ ಮಂತ್ರಗಳೆಂದು ಭಾವಿಸಬಾರದು. ಪರಮಾತ್ಮನ ಸ್ತೋತ್ರ, ನಾಮಸ್ಮರಣವೇ–ಮುಂತಾದವೂ ಮಂತ್ರದಲ್ಲಿಯೇ ಸೇರಿರುವವು. ಇವುಗಳನ್ನು ವೇದಾಧಿಕಾರವಿಲ್ಲದವರು ಜಪ ಮಾಡಬೇಕು. ತಮ್ಮ ತಮ್ಮ ಅಂತಸ್ತಿಗೆ ದಕ್ಕುವ ಶಾಸ್ತ್ರಾಚಾರಗಳಿಗೆ ವಿರೋಧವಲ್ಲದ ಮಂತ್ರದಿಂದಲೇ ಬೇಕಾದದ್ದೆಲ್ಲವೂ ಕೈಗೂಡುವದರಲ್ಲಿ ಸಂಶಯವಿಲ್ಲ. ಯಾವ ಮಂತ್ರವೇ ಆಗಲಿ ಅದನ್ನು ಶ್ರದ್ಧೆಯಿಂದ ನಿಯಮ ಪೂರ್ವಕವಾಗಿಯೇ ಜಪಿಸಬೇಕು. ನಿಯಮದಿಂದ ಮಾಡಿದ ಮಂತ್ರಜಪವು ವಾಕ್ತಪಸ್ಸಿನ ವಿಘ್ನಗಳನ್ನು ದೂರಮಾಡುತ್ತದೆ.

'ನಿನ್ನ ಚರಣವನ್ನೇ ನಂಬಿ ನನ್ನ ಮನಸ್ಸು ಸ್ಮರಿಸುವದೂ ಇಲ್ಲ' ಎಂಬ ವಾಕ್ಯದಿಂದ **ಮಾನಸಪೂಜೆಯ** ಅವಶ್ಯಕತೆಯನ್ನು ಸೂಚಿಸಿರುತ್ತಾರೆ. ಯಾರ ಮನಸ್ಸಿಗೆ ಹೆಚ್ಚು ವಿಕ್ಷೇಪಕಾರಣಗಳು ಇರುವದಿಲ್ಲವೋ ಅಂಥವರು ಮಾನಸಪೂಜೆಗೆ ಅಧಿಕಾರಿಗಳು. ಮಾನಸಪೂಜೆಯನ್ನು ಮಾಡಿದರೆ ಸಾಕೆಂದು ಅವರು ಬಾಹ್ಯಪೂಜೆಯನ್ನು ಕಡೆಗಣಿಸುವರೆಂದು ತಿಳಿಯಬಾರದು ; ಅಂಥವರಿಗೆ ಹೊರಗಿನ ಉಪಕರಣಗಳನ್ನು ಕೂಡಿಹಾಕುವ ಯೋಚನೆ ಇಲ್ಲದೆಯೇ ಮಾನಸಪೂಜೆಯಿಂದಲೇ ಈಶ್ವರಾರ್ಚನೆಯ ಫಲವು ಸಂಪೂರ್ಣವಾಗಿ ದೊರೆಯುವದೆಂಬುದೇ ಇಲ್ಲಿ ತಿಳಿಯಬೇಕಾದದ್ದು. ಏಕಾಗ್ರವಾದ ಚಿತ್ತದಿಂದ ಪರಮಾತ್ಮಸ್ಮರಣೆಯನ್ನು ಯಾವಾಗಲೂ ಮಾಡುವದು ಯೋಗಿಗಳಿಗೆಮಾತ್ರ ಸಾಧ್ಯವಾಗಿರುವದಾದರೂ ಸಾಮಾನ್ಯಜನರೂ ಕ್ಲೃಪ್ತಕಾಲಗಳಲ್ಲಿ ಮಾನಸ ಪೂಜೆಯನ್ನು ಮಾಡುವ ಅಭ್ಯಾಸವನ್ನು ಇಡಬೇಕು. ಸದ್ಗುರುಗಳಿಂದ ಈ ಪೂಜೆಯ ಕ್ರಮವನ್ನು ಉಪದೇಶಮಾಡಿಸಿಕೊಂಡು ತನ್ನ ಹೃದಯದಲ್ಲಿಯೇ ಪೀಠವನ್ನು ಧ್ಯಾನಿಸಿ ಅದರಲ್ಲಿ ತನ್ನ ಇಷ್ಟದೇವತೆಯು ಕುಳಿತಿರುವಂತೆ ಕಲ್ಪಿಸಿಕೊಂಡು ಆ ಇಷ್ಟದೇವತೆಯನ್ನು ಪಾದತಲದಿಂದ ಹಿಡಿದು ತಲೆಯವರೆಗೂ ತಲೆಯಿಂದ ಪಾದದವರೆಗೂ ಆವರ್ತನಕ್ರಮದಿಂದ ಧ್ಯಾನಮಾಡಬೇಕು. ಮಾನಸೋಪಚಾರದ್ರವ್ಯಗಳಿಂದಲೇ ಎಲ್ಲಾ ಪೂಜೆಯನ್ನೂ ನೆರವೇರಿಸಬೇಕು.

ಪೂಜಾಕಾಲದಲ್ಲಿ ಭಗವಂತನ ಗುಣಗಳನ್ನು ಸ್ಮರಣೆಮಾಡಿಕೊಳ್ಳುತ್ತಿರಬೇಕು. ಕೊನೆಯಲ್ಲಿ ಆತನ ಚರಣದಲ್ಲಿ ಹಣೆಯನ್ನಿಟ್ಟು ನಮಸ್ಕರಿಸಿ ಮನಸ್ಸಿನಿಂದಲೇ ಪ್ರಾರ್ಥನೆಯನ್ನೂ ನೆರವೇರಿಸಬೇಕು. ನಿಜವಾಗಿ ಈಶ್ವರನಿಗೆ ಭಾವನೆಯು ಮುಖ್ಯವಾಗಿರುವದೇ ಹೊರತು ಉಪಚಾರದ್ರವ್ಯಗಳು ಮುಖ್ಯವಲ್ಲವಾದ್ದರಿಂದ ಕಲ್ಪನೋಪಚಾರಗಳುಕೂಡ ಆತನ ತೃಪ್ತಿಗೆ ಕಾರಣವಾಗುವವು.

ಹೀಗೆ ಬಾಹ್ಯಪೂಜೆ, ಮಂತ್ರಜಪ, ಮಾನಸಪೂಜೆ– ಇವುಗಳಿಂದ ಶಾರೀರವಾಙ್ಮಯಮಾನಸತಪಸ್ಸುಗಳ ವಿಘ್ನಗಳನ್ನು ಪರಿಹಾರಮಾಡಿಕೊಳ್ಳಬೇಕೆಂಬುದು ಅಭಿಪ್ರೇತವಾದ ಅರ್ಥವು.

## ೧೦. ಯಜ್ಞದಾನಾದಿಸಾಧನಗಳು

ಯಜ್ಞೋ ನ ಮೇಽಸ್ತಿ ಹುತಿದಾನದಯಾದಿಯುಕ್ತೋ
ಜ್ಞಾನಸ್ಯ ಸಾಧನಗಣೋ ನ ವಿವೇಕಮುಖ್ಯಃ ।
ಜ್ಞಾನಂ ಕ್ವ ಸಾಧನಗಣೇನ ವಿನಾ ಕ್ವ ಮೋಕ್ಷ-
ಸ್ತ್ವಸ್ಮಾತ್ತ್ವಮದ್ಯ ಶರಣಂ ಮಮ ದೀನಬನ್ಧೋ ॥೧೦॥

### ಅರ್ಥ

ಹೋಮ, ದಾನ, ದಯೆ– ಮುಂತಾದವುಗಳಿಂದ ಕೂಡಿದ ಯಜ್ಞವೆಂಬ ಸಾಧನವು ನನ್ನಲ್ಲಿಲ್ಲ ; ಜ್ಞಾನಕ್ಕೆ ಬೇಕಾದ ವಿವೇಕವೇ ಮುಂತಾದ ಸಾಧನಸಮೂಹವಿಲ್ಲ ; ಅಂಥ ಸಾಧನಸಮೂಹವಿಲ್ಲದ ಮೇಲೆ ಜ್ಞಾನವೆಲ್ಲಿಯದು ? ಅದಿಲ್ಲದಿದ್ದರೆ ಮೋಕ್ಷವೆಲ್ಲಿಯದು ? ಆದ್ದರಿಂದ ಎಲೈ ದೀನಬಂಧುವೆ, ನೀನೇ ಈಗ ನನಗೆ ರಕ್ಷಕನು.

## ವಿಚಾರ

ಸಕಲಸಾಧನೆಗಳೂ ಜ್ಞಾನಕ್ಕಾಗಿ ಏರ್ಪಟ್ಟಿವೆಯೆಂಬುದನ್ನು ತಿಳಿಸು ವದೇ ಈ ಶ್ಲೋಕದ ಉದ್ದೇಶವು. ಜ್ಞಾನದಿಂದಲೇ ಕೈವಲ್ಯವಾಗುವದೆಂದು ಶ್ರುತಿಸ್ಮೃತಿಗಳು ಸಾರುತ್ತಿರುವಾಗ ಮಿಕ್ಕ ಸಾಧನಗಳು ಏತಕ್ಕೆ ?– ಎಂದು ಕೆಲವರು ಕುಂಟುನೆಪವನ್ನು ತೆಗೆದು ಸಾಧನಗಳನ್ನು ಅಲಕ್ಷ್ಯಮಾಡುತ್ತಾರೆ. ಆದರೆ ಇದು ಸರಿಯಲ್ಲ. 'ಅನ್ನದಿಂದಲೇ ಹಸಿವು ಅಡಗುವದಾದ್ದರಿಂದ ಅಕ್ಕಿಯೇಕೆ, ಕಟ್ಟಿಗೆಯೇಕೆ ?' ಎಂದು ಯಾರಾದರೂ ಕೇಳಿಯಾರೆ? ಜ್ಞಾನಕ್ಕೆ ಸಾಧನಗಳೇ ಮುಖ್ಯವಾದ್ದರಿಂದ ಆ ಸಾಧನಗಳನ್ನು ಮೊದಲು ಸಂಪಾದಿಸಿ ಕೊಳ್ಳಬೇಕಾದದ್ದು ಅಗತ್ಯವು.

ಜ್ಞಾನಸಾಧನಗಳು ಎರಡು ಬಗೆ: ಜ್ಞಾನದಲ್ಲಿ ಬಲವಾದ ಇಚ್ಛೆಯನ್ನು ಹುಟ್ಟಿಸುವ ಯಜ್ಞ, ತಪಸ್ಸು, ದಾನ– ಮುಂತಾದ ಚಿತ್ತಮಲವನ್ನು ಕಳೆ ಯುವ ಸಾಧನಗಳು ಬಹಿರಂಗಸಾಧನಗಳೆನಿಸುವವು. ಊಟವನ್ನು ತಾನೇ ಹಾಕುವವನು ಹೇಗೆ ನಮಗೆ ಉಪಕಾರಿಯಾಗುವನೋ ಹಾಗೆಯೇ ಊಟವನ್ನು ಹಾಕುವ ದಾತೃವನ್ನು ತೋರಿಸಿಕೊಡುವವನೂ ನಮಗೆ ಉಪ ಕಾರಿಯೇ ಆಗಿರುವನಷ್ಟೆ ? ಅದರಂತೆ ವಿವೇಕಾದಿಗಳು ಹುಟ್ಟುವದಕ್ಕೆ ಕಾರಣ ವಾದ ಯಜ್ಞವೇ ಮುಂತಾದ ಸಾಧನಗಳೂ ಜ್ಞಾನಸಾಧನಗಳೇ ಆಗಿರುತ್ತವೆ. ಆದ್ದರಿಂದಲೇ ಭಗವಂತನು :

**ಯಜ್ಞದಾನತಪಃಕರ್ಮ ನ ತ್ಯಾಜ್ಯಂ ಕಾರ್ಯಮೇವ ತತ್ ।**
**ಯಜ್ಞೋ ದಾನಂ ತಪಶ್ಚೈವ ಪಾವನಾನಿ ಮನೀಷಿಣಾಮ್ ॥**

'ಯಜ್ಞ, ದಾನ, ತಪಸ್ಸು– ಎಂಬ ಕರ್ಮವನ್ನು ಬಿಡತಕ್ಕದ್ದಲ್ಲ. ಅವಶ್ಯವಾಗಿ ಅವನ್ನು ಮಾಡುತ್ತಿರಬೇಕು. ಜಾಣರಾದವರಿಗೆ ಯಜ್ಞವೂ ದಾನವೂ ತಪಸ್ಸೂ ಚಿತ್ತವನ್ನು ಪವಿತ್ರಗೊಳಿಸುತ್ತವೆ' ಎಂದು ಅಪ್ಪಣೆಕೊಡಿ ಸಿರುತ್ತಾನೆ. ಇವುಗಳಲ್ಲಿ ತಪಸ್ಸನ್ನು ಕುರಿತು ಹಿಂದೆ ಹೇಳಿರುತ್ತದೆಯಾದ್ದ ರಿಂದ ಉಳಿದ ಯಜ್ಞದಾನಗಳನ್ನು ಇಲ್ಲಿ ಪ್ರಸ್ತಾಪಿಸಿರುತ್ತಾರೆ. ಯಜ್ಞವೆಂಬು ದನ್ನು ದಂಭಕ್ಕಾಗಿ ಮಾಡಿದರೆ ಏನೂ ಪ್ರಯೋಜನವಿಲ್ಲ ; ಶಾಸ್ತ್ರದಲ್ಲಿ ಹೇಳಿರುವಂತೆ ದಾನ, ಹೋಮ–ಮುಂತಾದ ಅಂಗಗಳಿಂದ ಕೂಡಿದ ಯಜ್ಞವೇ

ನಿಜವಾದ ಯಜ್ಞವು. ಇಲ್ಲದಿದ್ದರೆ ಅದು ಹೆಸರಿಗೆ ಮಾತ್ರ ಯಜ್ಞವೆನಿಸುವದು. ಎಲ್ಲರಿಗೂ ವಿಧಿಯಲ್ಲಿ ಹೇಳಿರುವಂತೆ ಯಜ್ಞವನ್ನು ಮಾಡುವ ಅನುಕೂಲವು ದೊರೆಯಲಾರದು. ಆದರೂ ದೇವಯಜ್ಞವೆಂಬ ದೇವಪೂಜೆ, ಪಿತೃಯಜ್ಞವೆಂಬ ಶ್ರಾದ್ಧತರ್ಪಣಾದಿಗಳು, ಬ್ರಹ್ಮಯಜ್ಞವೆಂಬ ಶಾಸ್ತ್ರಾಧ್ಯಯನ, ಮನುಷ್ಯಯಜ್ಞವೆಂಬ ಅತಿಥಿಸತ್ಕಾರ, ಭೂತಯಜ್ಞವೆಂಬ ಪ್ರಾಣಿಗಳಲ್ಲಿ ಕನಿಕರವನ್ನು ತೋರಿಸುವದು—ಇವೈದನ್ನೂ ಯಥಾಶಕ್ತಿಯಾಗಿ ಕುಲಾಚಾರ ಪದ್ಧತಿಯನ್ನು ಅನುಸರಿಸಿ ಎಲ್ಲರೂ ಮಾಡಬಹುದಾಗಿರುತ್ತದೆ.[1]

ಅಂತರಂಗಸಾಧನಗಳಲ್ಲೆಲ್ಲ ವಿವೇಕವೇ ಮುಖ್ಯವಾದದ್ದು. ಹೇಗೆಂದರೆ ಮೋಕ್ಷಕ್ಕೆ ಮುಮುಕ್ಷುತೆಯೇ ಬೇಕಾದದ್ದು. ತಲೆಯು ಹತ್ತಿಕೊಂಡು ಉರಿಯುತ್ತಿರುವವನು ನೀರೊಂದಲ್ಲದೆ ಮತ್ತೇನೂ ತನಗೆ ಬೇಡವೆಂದು ನೀರನ್ನೇ ಹುಡುಕುತ್ತಿರುವಂತೆ, ಈ ಸಂಸಾರದುಃಖದಿಂದ ತಪ್ತನಾಗಿರುವೆನೆಂದು ತಿಳಿದಾತನು ಎಂದಿಗೆ ನನಗೆ ಬಿಡುಗಡೆಯಾದೀತೆಂದು ಮೋಕ್ಷವೊಂದನ್ನೇ ಹಂಬಲಿಸುತ್ತಿರುವನು. ಈ ಹಂಬಲಿಕೆಯೇ ಮುಮುಕ್ಷುತ್ವವು. ನಿಜವಾದ ವೈರಾಗ್ಯವಿಲ್ಲದವನಿಗೆ ನಿಜವಾಗಿ ಮುಮುಕ್ಷುತ್ವವಿರುವದಿಲ್ಲ ; ಈ ಸಂಸಾರದಲ್ಲಿ ಸುಖವುಂಟೆಂದು ನಂಬುವವನು ಅದರಿಂದ ಬಿಡುಗಡೆಯಾಗಬೇಕೆಂದು ಏಕೆ ಬಯಸಿಯಾನು ? ಆದ್ದರಿಂದ ಮುಮುಕ್ಷುತ್ವಕ್ಕೆ ಮೊದಲು ವೈರಾಗ್ಯವಿರಬೇಕಾಯಿತು. ಈ ವೈರಾಗ್ಯ, ಮುಮುಕ್ಷುತ್ವ— ಎಂಬ ಸಾಧನಗಳು ಯಾವನಲ್ಲಿರುವವೋ ಅವನಲ್ಲಿಯೇ ನಿಜವಾದ ಶಮಾದಿಗಳು ಇರುತ್ತವೆ. ಶಮಾದಿಗಳನ್ನು ಕುರಿತು ಹಿಂದೆ ಎರಡನೆಯ ಶ್ಲೋಕದಲ್ಲಿಯೇ ವಿವರಿಸಿರುತ್ತದೆ. ವೈರಾಗ್ಯವೂ ಮುಮುಕ್ಷುತ್ವವೂ ಇಲ್ಲದಾತನಲ್ಲಿ ಶಮಾದಿಗಳು ಇರಲಾರವೆಂಬುದೂ, ಒಂದುವೇಳೆ ಇದ್ದರೂ ಸ್ಥಿರವಾಗಿ ನಿಂತು ಅವು ಫಲಕಾರಿಯಾಗುವ ಸಂಭವವಿಲ್ಲವೆಂಬುದೂ ಆ ವಿವರಣೆಯಿಂದ ಗೊತ್ತಾಗುವದು. ನಿಜವಾದ ವೈರಾಗ್ಯವೂ ಮೋಕ್ಷೇಚ್ಛೆಯೂ ವಿವೇಕವಿಲ್ಲದೆ ಬರಲಾರವು. ತನಗೆ ಏನಾದರೂ

---

1. ಈ ಯಜ್ಞಗಳಿಗೆ ಅಧಿಕಾರವಿಲ್ಲದವರು ಪರಮಾತ್ಮನ ನಾಮವನ್ನು ಭಕ್ತಿಯಿಂದ ಜಪಿಸುತ್ತಿರಬೇಕು. ಯಜ್ಞಗಳಲ್ಲಿ ನಾನು ಜಪಯಜ್ಞವಾಗಿರುವೆನು ಎಂದು ಭಗವಂತನು ಜಪಯಜ್ಞದ ಮಹಿಮೆಯನ್ನು ಕೊಂಡಾಡಿರುತ್ತಾನೆ.

ಆಪತ್ತು ಒದಗಿದಾಗ "ಛೆ ! ಇನ್ನು ಬದುಕಿ ಏನು ಫಲ ?" ಎಂದು ಬೇಸರ ಪಡುವದು ವೈರಾಗ್ಯವಲ್ಲ. ಯಾರಾದರೂ ಸತ್ತಾಗ, ಏನಾದರೂ ಪುರಾಣವನ್ನು ಶ್ರವಣಮಾಡುವಾಗ, ಅಥವಾ ಸಂಸಾರದ ತೊಂದರೆಗಳಿಂದ ಸಂಕಟ ಪಡುತ್ತಿರುವಾಗ 'ಈ ಸಂಸಾರವು ಇನ್ನು ಸಾಕು'– ಎಂದು ತೋರುವದುಂಟು. ಅದು ನಿಜವಾದ ವೈರಾಗ್ಯವಲ್ಲ. ಈ ಜಗತ್ತೆಲ್ಲ ಅಸ್ಥಿರವಾದದ್ದೆಂದು ವಿಚಾರ ದೃಷ್ಟಿಯಿಂದ ಮನಗಂಡು ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಆಗುವ ಯಾವ ಸುಖವೂ ತನಗೆ ಬೇಡವೆಂದೂ ಪರಮಾತ್ಮತತ್ತ್ವವನ್ನು ಅರಿತರೆ ಆಗುವ ಮೋಕ್ಷವೊಂದೇ ನಿತ್ಯವಾದ್ದರಿಂದ ಅದೇ ತನಗೆ ಬೇಕೆಂದೂ ಬಯಸುವದೇ ನಿಜವಾದ ವೈರಾಗ್ಯ, ಅದೇ ನಿಜವಾದ ಮುಮುಕ್ಷುತ್ವ. ಆದ್ದರಿಂದ ಅಂತರಂಗ ಸಾಧನಗಳಿಗೆಲ್ಲ ಮೂಲಕಾರಣವಾದ ವಿವೇಕವನ್ನು ಸಂಪಾದಿಸುವದಕ್ಕೆ ಯತ್ನಿಸಬೇಕೆಂಬುದೇ ಶ್ಲೋಕದಲ್ಲಿ ಸೂಚಿತವಾಗಿರುವ ಅರ್ಥವು.

## ೧೧. ಸತ್ಸಂಗ

ಸತ್ಸಙ್ಗತಿರ್ಹಿ ವಿದಿತಾ ತವ ಭಕ್ತಿಹೇತುಃ
ಸಾಪ್ಯದ್ಯ ನಾಸ್ತಿ ಬತ ಪಣ್ಡಿತಮಾನಿನೋ ಮೇ ।
ತಾಮನ್ತರೇಣ ನ ಹಿ ಸಾ ಕ್ವ ಚ ಬೋಧವಾರ್ತಾ
ತಸ್ಮಾತ್ತ್ವಮದ್ಯ ಶರಣಂ ಮಮ ದೀನಬನ್ಧೋ ॥೧೧॥

### ಅರ್ಥ

ಸತ್ಸಂಗವೇ ನಿನ್ನ ಭಕ್ತಿಗೆ ಕಾರಣವೆಂದು ಪ್ರಸಿದ್ಧವಾಗಿದೆಯಷ್ಟೆ ? ನಾನೇ ಪಂಡಿತನೆಂದು ತಿಳಿದುಕೊಂಡಿರುವ ನನಗೆ ಈಗ ಈ ಭಕ್ತಿಕಾರಣವೂ ಇರುವದಿಲ್ಲ. ಅದಿಲ್ಲದೆ ಜ್ಞಾನದ ವಾರ್ತೆಯೆಲ್ಲಿ [illegible]ಗು ? ಆದ್ದರಿಂದ ಎಲೈ ದೀನಬಂಧುವೆ, ನೀನೇ ಈಗ ನನಗೆ ಶರಣು.

## ವಿಚಾರ

ಹಿಂದಿನ ಶ್ಲೋಕದಲ್ಲಿ ಹೇಳಿದ ವಿವೇಕಾದಿಗಳು ಜನರಿಗೆ ಏಕೆ ಹುಟ್ಟು ವದಿಲ್ಲ ?– ಎಂದರೆ ಪರಮೇಶ್ವರನಲ್ಲಿ ಭಕ್ತಿಯಿಲ್ಲದಿರುವದೇ ಇದಕ್ಕೆ ಕಾರಣ. ಅಂಥ ಭಕ್ತಿಯುಿಲ್ಲದಿರುವದಕ್ಕೇನು ಕಾರಣ ?– ಎಂದರೆ ಆ ಭಕ್ತಿಯಲ್ಲಿ ತನಗೆ ರುಚಿ ತೋರದ್ದರಿಂದ. ಆದ್ದರಿಂದ ಪರಮೇಶ್ವರನ ಭಕ್ತಿಯುಂಟಾಗುವದಕ್ಕೆ ದಾರಿಯನ್ನು ಇಲ್ಲಿ ಸೂಚಿಸುತ್ತಾರೆ.

ಸಾಧುಜನಸಂಗತಿಯೇ ಭಕ್ತಿಗೆ ಮುಖ್ಯವಾದ ಕಾರಣವು. ಸಾಧು ಗಳು ಸಂಸಾರವೆಲ್ಲ ನಿಸ್ಸಾರವೆಂಬುದನ್ನೂ ಪರಮಾತ್ಮನ ಪ್ರೇಮವೇ ನಿತ್ಯಾ ನಂದಕ್ಕೆ ದಾರಿಯೆಂಬುದನ್ನೂ ಮನಗಂಡಿರುವರು. ಆದ್ದರಿಂದ ಅವರು ಯಾವಾಗಲೂ ಪರಮಾತ್ಮನಲ್ಲಿಯೇ ಚಿತ್ತವಿಟ್ಟು, ಅವನೇ ತಮ್ಮ ಪ್ರಾಣ ವೆಂದು ಭಾವಿಸಿಕೊಂಡು, ತಮ್ಮ ಅನುಭವದಲ್ಲಿ ಪರಮಾತ್ಮತತ್ತ್ವದ ವಿಷಯ ವಾಗಿ ಒಬ್ಬರಿಗೊಬ್ಬರು ಹೇಳುತ್ತಲೂ ಒಬ್ಬರಿಂದೊಬ್ಬರು ಕೇಳುತ್ತಲೂ ಅಂಥ ಕಥಾಪ್ರಸಕ್ತಿಯಿಂದಲೇ ತೃಪ್ತರಾಗಿ ಅದರಿಂದಲೇ ಆನಂದವನ್ನು ಪಡೆ ಯುತ್ತಿರುವರು. ಹೀಗಿರುವದರಿಂದ "ಎಲ್ಲವನ್ನೂ ಬಿಟ್ಟ ಈ ಮಹಾತ್ಮರಿಗೆ ಏತರಿಂದ ನಿತ್ಯತೃಪ್ತಿಯು ದೊರಕಿರುವದೋ ಅಂಥ ಭಕ್ತಿಯನ್ನು ನಾನೇಕೆ ಸಂಪಾದಿಸಿಕೊಳ್ಳಬಾರದು ?" ಎಂಬ ಕುತೂಹಲವು ಸತ್ಸಂಗವನ್ನು ಮಾಡಿ ದಾತನಿಗೆ ಸ್ವಭಾವವಾಗಿಯೇ ಹುಟ್ಟುತ್ತದೆ. ಆದ್ದರಿಂದಲೇ ಭಾಗವತದಲ್ಲಿ

**ಸತಾಂ ಪ್ರಸಙ್ಗಾನ್ಮಮ ವೀರ್ಯಸಂವಿದೋ**
**ಭವನ್ತಿ ಹೃತ್ಕರ್ಣರಸಾಯನಾಃ ಕಥಾಃ ।**
**ತಜ್ಜೋಷಣಾದಾಶ್ವಪವರ್ಗವರ್ತ್ಮನಿ**
**ಶ್ರದ್ಧಾರತಿರ್ಭಕ್ತಿರನುಕ್ರಮಿಷ್ಯತಿ ॥**

**"ಸತ್ಪುರುಷರ ಉತ್ತಮಸಹವಾಸದಲ್ಲಿದ್ದರೆ ಭಗವಂತನ ಶೌರ್ಯವೀರ್ಯ ದಯಾದಾಕ್ಷಿಣ್ಯಾದಿಗುಣಸಂಪತ್ತುಗಳನ್ನು ವರ್ಣಿಸಿರುವ ಮಾತುಕಥೆಗಳು ಮನಸ್ಸಿಗೂ ಕಿವಿಗೂ ಇಂಪಾಗುವಂತೆ ಕೇಳಬರುತ್ತಿರುವವು, ಅಂಥ ಮಾತು ಕಥೆಗಳನ್ನು ಕಿವಿಯಿಂದೀಂಟುವಾತನಿಗೆ ಮುಕ್ತಿಮಾರ್ಗದಲ್ಲಿ ಶ್ರದ್ಧೆಯೂ**

ಆದರವೂ ಭಕ್ತಿಯೂ ಕ್ರಮಕ್ರಮವಾಗಿ ಉಂಟಾಗುವವು" ಎಂದು ಹೇಳಿರುತ್ತದೆ.

ಆದರೆ ಸತ್ಸಂಗವು ದೊರೆಯುವದಕ್ಕೆ ಪಾಂಡಿತ್ಯಾಭಿಮಾನವು ದೊಡ್ಡ ವಿಘ್ನವಾಗಿರುವದು. ತಾನೇ ಪಂಡಿತನೆಂದೂ ತಾನು ಮತ್ತೊಬ್ಬರಿಂದ ತಿಳಿದುಕೊಳ್ಳಬೇಕಾದದ್ದು ಏನೂ ಇರುವದಿಲ್ಲವೆಂದೂ ಭಾವಿಸಿಕೊಂಡಿರುವಾತನಿಗೆ ಸತ್ಪುರುಷರ ಸಂಗವು ಹೇಗೆ ದೊರೆಯಬೇಕು? ಅದಿಲ್ಲದಿದ್ದರೆ ಪರಮಾತ್ಮನ ಮಾಹಾತ್ಮ್ಯದ ಮಾತು ಕಿವಿಗೆ ಬೀಳುವದಕ್ಕೆಲ್ಲಿ ದಾರಿ ? ಅಂಥ ಕಥಾಶ್ರವಣವಿಲ್ಲದೆ ಭಕ್ತಿಹೀನನಾದವನಿಗೆ ವಿವೇಕಾದಿಗಳು ಹುಟ್ಟುವದೆಲ್ಲಿ ಬಂತು ? ಆದ್ದರಿಂದ ಪರಮಪುರುಷಾರ್ಥಕ್ಕೆ ಸತ್ಪುರುಷರ ಸಂಗತಿಯೇ ಮೂಲಕಾರಣವಾಯಿತಷ್ಟೆ ? ಎಲ್ಲಾ ವಿಧವಾದ ಅಭಿಮಾನವನ್ನೂ ಬಿಟ್ಟು ಅಂಥ ಸಜ್ಜನಸಂಗವನ್ನು ಅವಶ್ಯವಾಗಿ ಸಂಪಾದಿಸಿಕೊಳ್ಳಬೇಕೆಂಬುದೇ ಈ ಶ್ಲೋಕದ ಅಭಿಪ್ರಾಯವು.

## ೧೨. ಸಮದೃಷ್ಟಿ

ದೃಷ್ಟಿರ್ನ ಭೂತವಿಷಯಾ ಸಮತಾಭಿಧಾನಾ
ವೈಷಮ್ಯಮೇವ ತದಿಯಂ ವಿಷಯೀಕರೋತಿ ।
ಶಾನ್ತಿಃ ಕುತೋ ಮಮ ಭವೇತ್ಸಮತಾ ನ ಚೇತ್ಸ್ಯಾತ್
ತಸ್ಮಾತ್ತ್ವಮದ್ಯ ಶರಣಂ ಮಮ ದೀನಬನ್ಧೋ ॥ ೧೨ ॥

### ಅರ್ಥ

ಪ್ರಾಣಿಗಳಲ್ಲಿ ಸಮತ್ವವೆಂಬ ದೃಷ್ಟಿಯೇ ನನಗೆ ಇರುವದಿಲ್ಲ ; ಈ ದೃಷ್ಟಿಗೆ ವೈಷಮ್ಯವೇ ಗೋಚರವಾಗುತ್ತಿರುವದು. ಸಮತ್ವವಿಲ್ಲದಿದ್ದರೆ ನನಗೆ ಶಾಂತಿ ಎಲ್ಲಿಂದ*: ಬಂದೀತು ? ಆದ್ದರಿಂದ ಎಲೈ ದೀನಬಂಧುವೆ, ನೀನೇ ಈಗ ನನಗೆ ಶರಣು.

## ವಿಚಾರ

ತಾನು ಪಂಡಿತನೆಂದು ತಿಳಿದುಕೊಳ್ಳುವ ಅಭಿಮಾನವೇ ಸತ್ಸಂಗಕ್ಕೆ ಇರುವ ಅಡ್ಡಿಯೆಂದು ಮೇಲೆ ಹೇಳಿದೆಯಷ್ಟೆ ? ಈ ಅಭಿಮಾನವನ್ನು ತೊಲಗಿಸಿ ಕೊಳ್ಳುವ ಉಪಾಯವನ್ನು ಇಲ್ಲಿ ತಿಳಿಸಿರುತ್ತದೆ.

ಅಭಿಮಾನತ್ಯಾಗಕ್ಕೆ ಸಮದೃಷ್ಟಿಯೇ ಮುಖ್ಯವಾದ ಉಪಾಯವು. ಇವನು ಕಡಿಮೆ, ನಾನು ಹೆಚ್ಚು—ಎಂಬ ವೈಷಮ್ಯವನ್ನು ಇಟ್ಟುಕೊಂಡಿರುವದೇ ಮುಖ್ಯವಾಗಿ ಅಭಿಮಾನಕ್ಕೆ ಕಾರಣವಾಗಿರುವದು. ಲೋಕದಲ್ಲಿ ನಮಗೆ ಕಾಣುತ್ತಿರುವ ವೈಷಮ್ಯವು ಹೇಗೆ ಇರುವದೆಂದರೆ—ಒಬ್ಬನು ಯಾವ ಉಪಕಾರವನ್ನೂ ಬಯಸದೆ ಇರುವ ಸುಹೃದನು ; ಮತ್ತೊಬ್ಬನು ನಮ್ಮ ಸ್ನೇಹವನ್ನು ಬೆಳೆಯಿಸಿಕೊಂಡು ಉಪಕಾರಮಾಡುತ್ತಿರುವ ಸ್ನೇಹಿತನು ; ಮಗುದೊಬ್ಬನು ನಮ್ಮನ್ನು ಯಾವಾಗಲೂ ಹಗೆಮಾಡುತ್ತಿರುವ ಶತ್ರು ; ಇನ್ನೊಬ್ಬನು ಈ ಯಾವ ಪಕ್ಷಕ್ಕೂ ಸೇರದೆ ಇರುವ ಉದಾಸೀನನು ; ಬೇರೊಬ್ಬನು ವಿರೋಧಿಗಳಿಬ್ಬರಿಗೂ ಹಿತವಾಗಬೇಕೆಂದು ಹಾರೈಸುತ್ತಿರುವ ಮಧ್ಯಸ್ಥನು; ಇನ್ನೊಬ್ಬನು ತನಗೆ ಪ್ರಿಯನಲ್ಲದಿರುವ ದ್ವೇಷ್ಯನು ; ಒಬ್ಬನು ಸಂಬಂಧಿಯು, ಒಬ್ಬನು ದೂರದವನು ; ಒಬ್ಬನು ಸತ್ಪುರುಷನು, ಮತ್ತೊಬ್ಬನು ಪಾಪಿ. ಹೀಗೆ ಬಗೆ ಬಗೆಯಾಗಿ ತೋರುವ ಪ್ರಾಣಿಗಳಲ್ಲಿ ರಾಗದ್ವೇಷಾದಿಗಳಿಲ್ಲದೆ ಸಮತೂಕದಲ್ಲಿ ಪ್ರವರ್ತಿಸುವ ಬುದ್ಧಿಗೆ **ಸಮದೃಷ್ಟಿ** ಎಂದು ಹೆಸರು.

ಇಂಥ ಮುಖ್ಯಸಮದೃಷ್ಟಿಯು ಸಾಧಕನಿಗೆ ದಕ್ಕುವದಿಲ್ಲವಾದ್ದರಿಂದ ಇದಕ್ಕಿಂತ ಮೊದಲು **ಗೌಣಸಮದೃಷ್ಟಿಯನ್ನು** ಅಭ್ಯಾಸಮಾಡಬೇಕು. "ನನಗೆ ಹೇಗೆ 'ಎಂದಿಗೂ ದುಃಖವಾಗಬಾರದು, ಯಾವಾಗಲೂ ಸುಖವೇ ಆಗಬೇಕು'—ಎಂಬ ಬುದ್ಧಿಯಿದೆಯೋ ಹಾಗೆಯೇ ಮಿಕ್ಕ ಪ್ರಾಣಿಗಳಿಗೂ ಇರುತ್ತದೆ. ಆದ್ದರಿಂದ ಶರೀರದಿಂದಲಾಗಲಿ, ಮಾತಿನಿಂದಲಾಗಲಿ, ಮನಸ್ಸಿನಿಂದಲಾಗಲಿ, ಯಾರಿಗೂ ನೋವನ್ನುಂಟುಮಾಡಬಾರದು. ನನ್ನ ಕೈಲಾದ ಮಟ್ಟಿಗೂ ಉಪಕಾರವನ್ನೇ ಮಾಡಬೇಕು"—ಎಂಬ ಬುದ್ಧಿಯೇ ಸಾಧಕರು **ಅನುಸರಿಸಬೇಕಾಗಿರುವ ಸಮದೃಷ್ಟಿ.** ಹೀಗೆ ಸರ್ವಭೂತಗಳಲ್ಲಿಯೂ ಸಮದೃಷ್ಟಿಯಿಂದ ವರ್ತಿಸುವವನಿಗೆ ಮನಸ್ಸಿನ ಗಡಿಬಿಡಿಯು ತಪ್ಪಿ ಶಾಂತಿಯು

ಅಳವಡುವದು. ಆದರಿಂದ ಸಾಧುಗಳ ಯೋಗ್ಯತೆಯು ಚೆನ್ನಾಗಿ ಗೊತ್ತಾಗುತ್ತದೆ. ಏಕೆಂದರೆ ಸಮದೃಷ್ಟಿಯನ್ನು ತಾನು ಹೆಚ್ಚಿನ ಯತ್ನದಿಂದ ಸಂಪಾದಿಸಿಕೊಳ್ಳುತ್ತಿರುವಾಗ ಯಾವ ಆಯಾಸವೂ ಇಲ್ಲದೆಯೇ ಸ್ವಭಾವದಿಂದಲೇ ಸಮದೃಷ್ಟಿಯನ್ನು ಇಟ್ಟುಕೊಂಡಿರುವ ಸತ್ಪುರುಷರನ್ನು ಕಂಡರೆ–ಮಿಣುಕುಹುಳುವು ಸೂರ್ಯನನ್ನು ಕಂಡಮಾತ್ರದಿಂದ ತಾನು ಪ್ರಕಾಶಸ್ವರೂಪನೆಂಬ ಗರ್ವವನ್ನು ಬಿಡುವಹಾಗೆ– ಪಾಂಡಿತ್ಯಾಭಿಮಾನವನ್ನು ಕೂಡಲೆ ದೂರಮಾಡಬೇಕಾಗುವದು. ಆದ್ದರಿಂದ ಮನಶ್ಶಾಂತಿಯನ್ನು ಬಯಸುವಾತನು ಸಮದೃಷ್ಟಿಯನ್ನು ಮೊದಲು ಸಂಪಾದಿಸಿಕೊಳ್ಳಬೇಕೆಂಬುದೇ ಇಲ್ಲಿ ಆಶಯವು.

## ೧೩. ಶುಭವಾಸನೆಗಳು

ಮೈತ್ರೀ ಸಮೇಷು ನ ಚ ಮೇಽಸ್ತಿ ಕದಾಪಿ ನಾಥ
ದೀನೇ ತಥಾ ನ ಕರುಣಾ ಮುದಿತಾ ಚ ಪುಣ್ಯೇ ।
ಪಾಪೇಽನುಪೇಕ್ಷಣವತೋ ಮಮ ಮುತ್ಕಥಂ ಸ್ಯಾತ್
ತಸ್ಮಾತ್ತ್ವಮದ್ಯ ಶರಣಂ ಮಮ ದೀನಬನ್ಧೋ ॥ ೧೩ ॥

### ಅರ್ಥ

ಎಲೈ ನಾಥನೆ, ನನಗೆ ಸಮರಾಗಿರುವವರಲ್ಲಿ ಮೈತ್ರಿಯಿಲ್ಲ; ದೀನರಾದವರಲ್ಲಿ ಕರುಣೆಯಾಗಲಿ ಪುಣ್ಯವಂತರಲ್ಲಿ ಮುದಿತೆಯಾಗಲಿ ಯಾವಾಗಲೂ ಇರುವದಿಲ್ಲ. ಪಾಪಿಗಳಲ್ಲಿ ಉಪೇಕ್ಷೆಯಿಲ್ಲದ ನನಗೆ ಸಂತೋಷವು ಹೇಗೆ ಉಂಟಾದೀತು? ಆದ್ದರಿಂದ ಎಲೈ ದೀನಬಂಧುವೆ, ನೀನೇ ಈಗ ನನಗೆ ಶರಣು.

### ವಿಚಾರ

ಹಿಂದಿನ ಶ್ಲೋಕದಲ್ಲಿ ವರ್ಣಿಸಿರುವ ಸಮದೃಷ್ಟಿಯು ದೊರೆಯುವದಕ್ಕೆ ಏನು ಮಾಡಬೇಕೆಂಬುದನ್ನು ಈಗ ತಿಳಿಸುತ್ತಾರೆ. ಶುಭವಾಸನೆಗಳನ್ನು

ಯಾವಾಗಲೂ ಅಭ್ಯಾಸಮಾಡುತ್ತಿರುವದೇ ಸಮದೃಷ್ಟಿಗೆ ಉಪಾಯವಾಗಿರುತ್ತದೆ.

ನಾವು ಯಾವದನ್ನು ಒಂದೇ ಸಮನಾಗಿ ಆಚರಿಸುತ್ತಿರುವೆವೋ ಯಾವ ಯಾವ ಆಹಾರವನ್ನು ಉಪಯೋಗಿಸುತ್ತಿರುವೆವೋ, ಯಾವಯಾವ ಉಡುಪುಗಳನ್ನು ಧರಿಸುತ್ತಿರುವೆವೋ, ಯಾವಯಾವ ಬಗೆಯ ನಡೆನುಡಿಗಳನ್ನು ಅನುಸರಿಸುತ್ತಿರುವೆವೋ– ಅವುಗಳಲ್ಲೆಲ್ಲ ಅಭ್ಯಾಸವಶದಿಂದ ನಮಗೆ ಅಭಿಮಾನವುಂಟಾಗುವದು ಸ್ವಾಭಾವಿಕವಾಗಿರುತ್ತದೆ. ಏಕೆಂದರೆ ಆಯಾ ಅನುಭವಗಳನ್ನೇ ಉಂಡುಂಡು ಅಭ್ಯಾಸವಾಗಿರುವ ನಮ್ಮ ಮನಸ್ಸಿನಲ್ಲಿ ಅವುಗಳ ಅಭಿಮಾನವು ಬೀಜರೂಪವಾಗಿದ್ದುಕೊಂಡುಬಿಟ್ಟಿರುವದು. ಹೀಗೆ 'ಇದೇ ಸರಿ, ಮಿಕ್ಕದ್ದು ಸರಿಯಲ್ಲ'–ಎಂಬ ನಿಶ್ಚಯಕ್ಕೆ ಕಾರಣವಾಗಿ ನಮ್ಮ ಮನಸ್ಸಿನಲ್ಲಿ ಬೇರೂರಿಕೊಂಡಿರುವ ಸಂಸ್ಕಾರಗಳನ್ನು 'ವಾಸನೆ' ಎಂದು ಕರೆಯುತ್ತಾರೆ. ಇವುಗಳಲ್ಲಿ ಮನುಷ್ಯಮಾತ್ರಕ್ಕೆ ಸ್ವಭಾವದಿಂದ ತೋರಿಕೊಳ್ಳುವವಾಗಿಯೂ ಪರಮಾರ್ಥದೃಷ್ಟಿಗೆ ಅಡ್ಡಿಯಾಗಿಯೂ ಇರುವ ವಾಸನೆಗಳನ್ನು ಮೂರು ಬಗೆಯಾಗಿ ವಿಂಗಡಿಸಿ ಅವಕ್ಕೆ ಮಲಿನವಾಸನೆ ಎಂದು ಹೆಸರಿಟ್ಟಿರುತ್ತಾರೆ. ಸಾಧಕನಾದವನು ಮಲಿನವಾಸನೆಯನ್ನು ಮೊದಲು ಹೋಗಲಾಡಿಸಿಕೊಳ್ಳಬೇಕು.

ಲೋಕವಾಸನೆ, ಶಾಸ್ತ್ರವಾಸನೆ, ದೇಹವಾಸನೆ–ಎಂದು ಮಲಿವಾಸನೆಯು ಮೂರು ವಿಧವಾಗಿರುವದು. ಲೋಕದಲ್ಲಿ ತನ್ನನ್ನು ಎಲ್ಲರೂ ಹೊಗಳುತ್ತಿರಬೇಕೆಂದು ಅಂಥ ಕೀರ್ತಿಯ ಸಾಧನೆಗಾಗಿ ತನ್ನ ಕೈಯಲ್ಲಾದ ಕಾರ್ಯಗಳನ್ನು ಕೈಕೊಳ್ಳುವದು ಲೋಕವಾಸನೆ. ಶ್ರೀರಾಮ, ಶ್ರೀಕೃಷ್ಣ–ಮುಂತಾದ ಅವತಾರಪುರುಷರನ್ನೇ ಸಮಸ್ತಲೋಕವೂ ಮೆಚ್ಚಲಿಲ್ಲ ; ಹೀಗಿರುವಲ್ಲಿ ಸಾಮಾನ್ಯಜೀವರಾದ ನಾವುಗಳು ಎಲ್ಲಾ ಜನರ ಮೆಚ್ಚಿಕೆಗೆ ಪಾತ್ರರಾಗುವೆವೆಂಬ ಭರವಸೆಯೆಲ್ಲಿಯದು ? ಒಂದುವೇಳೆ ಲೋಕವೆಲ್ಲವೂ ನಮ್ಮನ್ನು ಹೊಗಳಿದರೆತಾನೆ ಏನು ಪ್ರಯೋಜನ ? ಏನೂ ಪ್ರಯೋಜನವಿಲ್ಲ. ಆದ್ದರಿಂದ ಲೋಕವಾಸನೆಯು ಮನಸ್ಸಿಗೆ ಕ್ಲೇಶವನ್ನುಂಟುಮಾಡುವಂಥ ಮಲಿನವಾಸನೆಯಾಗಿದೆ. ಇದರಂತೆ ಶಾಸ್ತ್ರವಾಸನೆಯೂ ಮಲಿನವಾಸನೆಯೇ. ಹೇಗೆಂದರೆ ಲೋಕದಲ್ಲಿರುವ ಶಾಸ್ತ್ರಗಳನ್ನೆಲ್ಲ ಓದಬೇಕು, ಅವುಗಳಲ್ಲಿ ಹೇಳಿರುವಂತೆ ಆಚರಿಸಬೇಕು–ಎಂದು ಪ್ರಯತ್ನಿಸುವದಕ್ಕೆ ಕಾರಣವಾಗಿರುವದೇ ಶಾಸ್ತ್ರ

ವಾಸನೆಯು. ಲೋಕದಲ್ಲಿರುವ ಅನಂತಶಾಸ್ತ್ರಗಳನ್ನು ನಮಗಿರುವ ಅಲ್ಪ ಕಾಲದಲ್ಲಿ ನಮ್ಮ ಅಲ್ಪಮತಿಯಿಂದ ಓದಿ ಮುಗಿಸುವದೆಂಬುದೇ ಆಗದ ಮಾತು. ಇನ್ನು ಅವುಗಳಂತೆ ಆಚರಿಸುವದು ಹೇಗೆ ಸಾಧ್ಯವಾದೀತು ? ಒಂದುವೇಳೆ ಆ ಎಲ್ಲಾ ಶಾಸ್ತ್ರಗಳನ್ನೂ ಓದಿಮುಗಿಸಿದರೂ ಅವುಗಳಲ್ಲಿರುವಂತೆಯೇ ನಾವು ಆಚರಿಸಿದರೂ ನಮಗೆ ಸಂಸಾರಬಂಧದಿಂದ ಬಿಡುಗಡೆಯಾಗುವದೆಂದೇನೂ ಶಾಸ್ತ್ರವು ಹೇಳುವದಿಲ್ಲ. ಹೀಗೆ ಕಷ್ಟಸಾಧ್ಯವಾಗಿಯೂ ನಿಷ್ಪ್ರಯೋಜನ ವಾಗಿಯೂ ಇರುವ ಸರ್ವಶಾಸ್ತ್ರವಿಷಯಕವಾದ ಇಚ್ಛೆಗೆ ಹೇತುವಾದ ಶಾಸ್ತ್ರ ವಾಸನೆಯೂ ಮಲಿನವಾಸನೆಯೇ. ದೇಹವೇ ತಾನೆಂದು ಭ್ರಮಿಸಿ ಅದರಲ್ಲಿ ಉತ್ತಮವಾದ ಗುಣಗಳು ತೋರಬೇಕೆಂದೂ ಯಾವ ದೋಷವೂ ಇರಕೂಡ ದೆಂದೂ ಪ್ರಯತ್ನಿಸುವದಕ್ಕೆ ಕಾರಣವಾಗಿರುವ ವಾಸನೆಯೇ ದೇಹವಾಸನೆ ಯು. ನಾನು ಇಂಥ ಕುಲದವನು, ಇಂಥ ಗೋತ್ರದವನು, ಇಂಥ ಹೆಸರಿ ನವನು, ಇಂಥ ರೂಪಿನವನು-ಎಂದು ಮೊದಲಾಗಿ ಅಭಿಮಾನವನ್ನು ತಳೆಯು ವದಕ್ಕೂ ಇಂಥಿಂಥ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳ ವಸ್ತುಗಳನ್ನು ಕೂಡಿಹಾಕಬೇಕೆಂಬುದಾಗಿ ತವಕಿಸುವದಕ್ಕೂ ದೇಹವಾಸನೆಯೇ ಕಾರಣವು. ವೈದ್ಯಶಾಸ್ತ್ರದಲ್ಲಿ ಹೇಳಿರುವಂತೆ ಆಚರಿಸಿ ಶರೀರದ ರೋಗಗಳನ್ನೆಲ್ಲ ಹೋಗ ಲಾಡಿಸಿಕೊಳ್ಳಬೇಕೆಂದೂ ತೀರ್ಥಸ್ನಾನ, ತೀರ್ಥೋದಕಪ್ರಾಶನ-ಮುಂತಾದ ಸತ್ಕರ್ಮಗಳಿಂದ ದೇಹವನ್ನು ಅತ್ಯಂತಶುದ್ಧವಾಗಿ ಇಟ್ಟುಕೊಳ್ಳಬೇಕೆಂದೂ ಹೆಚ್ಚಿನ ಪ್ರಯತ್ನವನ್ನು ಮಾಡುವದೂ ದೇಹವಾಸನೆಯಿಂದಲೇ. ಸದಾಚಾರ ಗಳು ಚಿತ್ತಶುದ್ಧಿಗೆ ನೆರವಾಗುವವಾದಕಾರಣ ಅವುಗಳು ಅಷ್ಟುಮಟ್ಟಿಗೆ ಸಪ್ರಯೋಜನವೆಂಬುದಕ್ಕೆ ಸಂದೇಹವೇನೂ ಇಲ್ಲ; ಆದರೆ ಸ್ವಭಾವವಾಗಿಯೇ ಮಲಿನವಾಗಿರುವ ಈ ದೇಹವನ್ನು ಎಂಥ ಸತ್ಕರ್ಮದಿಂದಲೂ ಎಂದೆಂದಿಗೂ ಶುದ್ಧವಾಗಿರುವಂತೆ ಮಾಡಿಕೊಳ್ಳುವದು ಆಗಲಾರದು. ಹೀಗಿದ್ದರೂ ದೇಹ ಶುದ್ಧಿಯನ್ನೇ ಮುಖ್ಯವಾಗಿಟ್ಟುಕೊಂಡು ಕರ್ಮಾಚರಣೆಯಿಂದ ದೇಹವನ್ನು ಸುಮ್ಮನೆ ಆಯಾಸಗೊಳಿಸುವದು ಬುದ್ಧಿವಂತಿಕೆಯಲ್ಲ. ಆದ್ದರಿಂದ ಆಯಾಸ ಸಾಧ್ಯವಾಗಿಯೂ ನಿಷ್ಪ್ರಯೋಜನವಾಗಿಯೂ ಇರುವ ಕಾರ್ಯಗಳಲ್ಲಿ ತೊಡ ಗಿಸುವ ದೇಹವಾಸನೆಯೂ ಮಲಿನವಾಸನೆಯೇ. ಈ ರೀತಿಯಲ್ಲಿ ಮೂರು ಬಗೆಯ ಮಲಿನವಾಸನೆಗಳನ್ನು ನಾವು ಹಬ್ಬಿಸಿಕೊಂಡಿರುವದೇ ಸಮ್ಯದೃಷ್ಟಿಯು ತಲೆಯೆತ್ತುವದಕ್ಕೆ ಅಡ್ಡಿಯಾಗಿರುವದು.

ಈ ಮೇಲಿನ ವಾಸನೆಗಳನ್ನು ತಪ್ಪಿಸಿಕೊಳ್ಳುವದಕ್ಕೆ ಶುಭವಾಸನೆಗಳನ್ನು ನಾವು ಸ್ವೀಕರಿಸಬೇಕು. ಹೇಗೆಂದರೆ 'ತನಗೊಬ್ಬನಿಗೇ ಸುಖವಿರಬೇಕು. ಇನ್ನು ಯಾರೂ ತನ್ನಂತೆ ಸುಖಸಾಮಗ್ರಿಯಿಂದ ಕೂಡಿರಬಾರದು'-ಎಂದುಕೊಳ್ಳುವ ಅವಿವೇಕಿಗೆ, ಯಾರಾದರೂ ತನ್ನಂತೆಯೇ ಸುಖವಾಗಿರುವದು ಕಂಡುಬಂದರೆ, ಸ್ವಭಾವದಿಂದಲೇ ಅಸೂಯೆಯು ಹುಟ್ಟುವದು. ಆದರೆ ಅಸೂಯೆಯೆಂಬುದು ಸಮದೃಷ್ಟಿಗೆ ವಿರೋಧವಾಗಿರುವದರಿಂದ 'ಈ ಸುಖಿಗಳೆಲ್ಲ ನನ್ನವರೇ' ಎಂದು ಭಾವಿಸಬೇಕು. ಇದೇ ಮೈತ್ರಿಯೆಂಬ ಶುಭವಾಸನೆಯು. ಇದರ ಅಭ್ಯಾಸದಿಂದ ಸುಖದಲ್ಲಿರುವ ಉತ್ಕಟವಾದ ರಾಗವೂ ತನ್ನಂತೆಯೇ ಸುಖಪಡುವವರಲ್ಲಿ ಉಂಟಾಗಬಹುದಾದ ಅಸೂಯೆಯೂ ತೊಲಗುವವು. 'ಯಾವ ದುಃಖವೂ ತನಗೆ ಆಗಲಾರದು, ಯಾವ ದುಃಖದ ಕಾರಣವೂ ತನಗೆ ಇರಕೂಡದು'-ಎಂದು ದುಃಖದಲ್ಲಿ ದ್ವೇಷಬುದ್ಧಿಯಿರುವವನಿಗೆ ಯಾರಾದರೂ ತನಗೆ ಕೆಟ್ಟದ್ದನ್ನು ಮಾಡಿದರೆ 'ಇವರೇ ನನ್ನ ದುಃಖಕ್ಕೆ ಕಾರಣರು ; ಆದ್ದರಿಂದ ಇವರು ಶತ್ರುಗಳು' ಎಂದು ಅವರಲ್ಲಿಯೂ ಹಗೆತನವುಂಟಾಗುವದು ಸ್ವಾಭಾವಿಕವಾಗಿದೆ. 'ನನ್ನಹಾಗೆಯೇ ಎಲ್ಲರೂ ದುಃಖವನ್ನು ಪೇಡವೆನ್ನುತ್ತಾರೆ ; ಆದ್ದರಿಂದ ನಾನು ಯಾರನ್ನೂ ಸಂಕಟಗೊಳಿಸಬಾರದು' ಎಂದು ಭಾವಿಸುತ್ತಾ ದೀನರಾದವರನ್ನು ಕಂಡರೆ 'ಅಯ್ಯೊ, ಇವರೆಲ್ಲ ಸಂಕಟಪಡುತ್ತಿದ್ದಾರಲ್ಲ ! ಇವರ ಸಂಕಟಕ್ಕೇನು ಪರಿಹಾರವು ?'-ಎಂದು ಮರುಕವನ್ನು ಸಂಪಾದಿಸಿಕೊಳ್ಳಬೇಕು. ಈ ಭಾವನೆಗೆ ಕರುಣೆ ಎಂದು ಹೆಸರು. ಈ ಶುಭವಾಸನೆಯು ಅಭ್ಯಾಸದಿಂದ ದ್ವೇಷವೆಂಬ ಕಲ್ಮಷವು ಮನಸ್ಸಿನಿಂದ ತೊಲಗಿ ಸಮದೃಷ್ಟಿಗೆ ಅವಕಾಶವಾಗುವದು. ಪ್ರಾಣಿಗಳು ಪುಣ್ಯವನ್ನು ಕೈಬಿಟ್ಟು ಸ್ವಭಾವದಿಂದಲೇ ಪಾಪವನ್ನು ಕೈಕೊಳ್ಳುತ್ತಿರುವರು. ಪುಣ್ಯವಂತರನ್ನು ಕಂಡರೆ ಅಂಥವರಿಗೆ "ಅಯ್ಯೋ, ನಾನು ಪುಣ್ಯವನ್ನು ಮಾಡಲಿಲ್ಲವಲ್ಲ ! ಇಂಥ ಪುಣ್ಯವಂತರ ಮುಂದೆ ನನ್ನ ನೀಚಸ್ಥಿತಿಯು ಹೊರಕ್ಕೆ ಬಂದು ನನಗೆ ಅಪಮಾನವಾಗಿ ಬಿಡುವದಲ್ಲ!" ಎಂದು ಅವರಲ್ಲಿ ಅಸೂಯೆಯೂ ಮಾತ್ಸರ್ಯಬುದ್ಧಿಯೂ ಹುಟ್ಟುವವು. ಇವು ಸಮದೃಷ್ಟಿಗೆ ವಿರೋಧವಾಗಿರುವದರಿಂದ ಪುಣ್ಯವಂತರನ್ನು ಕಂಡರೆ ಸಂತೋಷಪಡುವದನ್ನು ಅಭ್ಯಾಸಮಾಡಬೇಕು. ಈ ಶುಭವಾಸನೆಗೆ ಮುದಿತೆ ಎಂದು ಹೆಸರು. ಇದರ ಬೆಳವಣಿಗೆಯಿಂದ ಸಮ

ದೃಷ್ಟಿಗೆ ಅಡ್ಡಿಯಾಗಿರುವ ಮಾತ್ಸರ್ಯವೆಂಬ ಮನೋದೋಷವು ತೊಲಗು ವದು. ಮನುಷ್ಯನು ಪುಣ್ಯವನ್ನು ಮಾಡುವದೇ ಅಪೂರ್ವ; ಒಂದು ವೇಳೆ ಅಲ್ಪಸ್ವಲ್ಪ ಮಾಡಿದರೆ, ಅಷ್ಟುಮಾತ್ರದಿಂದ ತಾನೇ ಮಹರ್ಷಿಯೆಂದು ಹೆಮ್ಮೆಗೊಳ್ಳುವನಲ್ಲದೆ, ಯಾರಾದರೂ ಪಾಪಿಗಳು ತನ್ನ ಕಣ್ಣಿಗೆ ಬಿದ್ದರೆ 'ಛೀ, ಇವರ ದರ್ಶನದಿಂದಲೇ ನನಗೆ ದುರ್ಗತಿಯುಂಟಾಗುವದು. ಇವರ ಸ್ಪರ್ಶವನ್ನಂತೂ ಎಂದೆಂದಿಗೂ ನಾನು ಮಾಡಬಾರದು'–ಎಂದು ಅಸಹ್ಯವಾದ ತುಚ್ಛಬುದ್ಧಿಯನ್ನು ಅಂಗೀಕರಿಸಿಬಿಡುತ್ತಾನೆ. ಈ ಬುದ್ಧಿಯೂ ಸಮದೃಷ್ಟಿಗೆ ಅಡ್ಡಿಯಾಗಿರುತ್ತದೆ. ಆದ್ದರಿಂದ ಪಾಪದ ವಿಷಯದಲ್ಲಿ ಉದಾಸೀನನಾಗಿ ವರ್ತಿಸುವದನ್ನು ಕಲಿಯಬೇಕು. ಇದೇ ಉಪೇಕ್ಷೆಯೆಂಬ ಶುಭವಾಸನೆಯು. ಇದರ ಅಭ್ಯಾಸದಿಂದ ಮತ್ತೊಬ್ಬರ ವಿಷಯದಲ್ಲಿ ಉಂಟಾಗಬಹುದಾದ ನಿಕೃಷ್ಟಬುದ್ಧಿಯು ತೊಲಗುವದು.

ಹೀಗೆ ಮೈತ್ರಿ, ಕರುಣೆ, ಮುದಿತೆ, ಉಪೇಕ್ಷೆ– ಎಂಬ ಶುಭವಾಸನೆಗಳನ್ನು ಅಭಿಮಾನವಿಲ್ಲದೆ ಅಭ್ಯಾಸಮಾಡಿ ರಾಗ, ದ್ವೇಷ, ಈರ್ಷ್ಯೆ, ಅಸೂಯೆ –ಮುಂತಾದ ಚಿತ್ತದೋಷಗಳನ್ನು ಕಳೆದುಕೊಳ್ಳುವದೇ ಸಮದೃಷ್ಟಿಗೆ ಮುಖ್ಯ ಉಪಾಯವೆಂಬುದು ಶ್ಲೋಕದ ಒಟ್ಟರ್ಥವು.

## ೧೪. ಅಂತರ್ಮುಖತ್ವ

ನೇತ್ರಾದಿಕಂ ಮಮ ಬಹಿರ್ವಿಷಯೇಷು ಸಕ್ತಂ
ನಾನ್ತರ್ಮುಖಂ ಭವತಿ ತಾನ್ಪ್ರವಿಹಾಯ, ತಸ್ಯ ।
ಕ್ವಾನ್ತರ್ಮುಖತ್ವಮುಪಹಾಯ ಸುಖಸ್ಯ ವಾರ್ತಾ
ತಸ್ಮಾತ್ತ್ವಮದ್ಯ ಶರಣಂ ಮಮ ದೀನಬನ್ಧೋ ॥೧೪॥

### ಅರ್ಥ

ನನ್ನ ನೇತ್ರವೇ ಮುಂತಾದದ್ದು ಹೊರಗಿನ ವಿಷಯಗಳಲ್ಲಿ ಯೇ ಆಸಕ್ತವಾಗಿರುವದು ; ಅವುಗಳನ್ನು ಬಿಟ್ಟು ಒಳಮುಖವಾಗು

ವದೇ ಇಲ್ಲ. ಒಳಮುಖವಿಲ್ಲದಿದ್ದರೆ ಅದಕ್ಕೆ ಸುಖದ ವಾರ್ತೆ ಎಲ್ಲಿಯದು ? ಆದ್ದರಿಂದ ಎಲೈ ದೀನಬಂಧುವೆ, ನೀನೇ ಈಗ ನನಗೆ ಶರಣು.

## ವಿಚಾರ

ಮಲಿನವಾಸನೆಗಳನ್ನು ತಪ್ಪಿಸುವದಕ್ಕೆ ಶುಭವಾಸನೆಗಳನ್ನು ಅನುಸರಿಸುವದೇ ಉಪಾಯವೆಂದು ಹಿಂದಿನ ಶ್ಲೋಕದಲ್ಲಿ ಹೇಳಿರುತ್ತದೆಯಷ್ಟೆ. ಆದರೆ ಸುಮ್ಮನೆ ಮಲಿನವಾಸನೆಗಳನ್ನು ತಪ್ಪಿಸಿಕೊಂಡರಾಗಲಿಲ್ಲ ; ಅವುಗಳು ಮತ್ತೆ ಹುಟ್ಟದೆ ಇರುವಂತೆಯೂ ನೋಡಿಕೊಳ್ಳುವದು ಅಗತ್ಯವು. ಆದ್ದರಿಂದ ಈ ವಿಷಯವನ್ನು ಇಲ್ಲಿ ಪ್ರಸ್ತಾಪಿಸಿರುತ್ತಾರೆ.

ಇಂದ್ರಿಯಗಳೆಲ್ಲ ಹೊರಮುಖವಾಗಿಯೇ ಪ್ರವರ್ತಿಸುವವು. ಏಕೆಂದರೆ ಕಠೋಪನಿಷತ್ತಿನಲ್ಲಿ ಹೇಳಿರುವಂತೆ– " ಪರಾಂಚಿ ಖಾನಿ ವ್ಯತೃಣತ್ ಸ್ವಯಂಭೂಃ ತಸ್ಮಾತ್ ಪರಾಙ್ ಪಶ್ಯತಿ ನಾಂತರಾತ್ಮನ್ " (೨–೧–೧) ಬ್ರಹ್ಮನು ಇಂದ್ರಿಯಗಳನ್ನು ಹೊರಮುಖವಾಗಿಯೇ ಸೃಷ್ಟಿಮಾಡಿರುತ್ತಾನೆ ; ಆದ್ದರಿಂದಲೇ ಮನುಷ್ಯನು ಸ್ವಭಾವದಿಂದ ಹೊರಗಡೆಗೆ ನೋಡುತ್ತಿರುವನೇ ಹೊರತು ಒಳಗಿರುವ ಆತ್ಮನ ಕಡೆಗೆ ತಿರುಗುವದಿಲ್ಲ. ನಾಯಿಯು ಒಂದು ಎಲುಬನ್ನು ಕಡಿದುಕಡಿದು ಕೊನೆಗೆ ತನ್ನ ಬಾಯಿಯಿಂದ ಹೊರಡುವ ರಕ್ತವನ್ನೇ ಎಲುಬಿನಿಂದ ಬಂದದ್ದೆಂಬ ಭ್ರಾಂತಿಯಿಂದ ನೆಕ್ಕುತ್ತಾ ಎಲುಬನ್ನು ಕಂಡಾಗಲೆಲ್ಲ ಅದರ ಕಡೆಗೆ ಓಡುತ್ತಿರುವಂತೆ, ಮನುಷ್ಯನು ಇಂದ್ರಿಯಗಳನ್ನು ವಿಷಯಗಳ ಮೇಲೆ ಎರಗಿಸುತ್ತಲೂ, ವಿಷಯೇಂದ್ರಿಯಗಳ ಕೂಡುವಿಕೆಯಿಂದ ಮನಸ್ಸು ಕ್ಷಣಹೊತ್ತು ಒಕ್ಕಡೆಗೆ ನಿಂತಾಗ ಒಳಗಿನ ಆತ್ಮಸುಖವು ಹೊರಸೂಸಲು ಅದನ್ನೇ ವಿಷಯಸುಖವೆಂದು ಭ್ರಾಂತಿಪಡುತ್ತಲೂ, ಇರುವನು. ಹೀಗೆ ಒಂದೊಂದು ಸಲ ವಿಷಯೇಂದ್ರಿಯಗಳ ಸಂಬಂಧವಾಗುವಾಗಲೂ ಅಲ್ಲಿ ಸುಖಭ್ರಾಂತಿಯಾಗುತ್ತಿರುವದರಿಂದ ಹೊರಮುಖವಾಗಿರುವದೇ ಸುಖದಾಯಕವೆಂಬ ಬುದ್ಧಿಯು ಮನುಷ್ಯನಲ್ಲಿ ಬೇರೂರಿಕೊಂಡುಬಿಡುವದು. ಇದೇ ಮಲಿನವಾಸನೆಗೆ ಮೂಲಕಾರಣವು.

ಆದ್ದರಿಂದ ಮಲಿನವಾಸನೆಯನ್ನು ಬೇರುಮುಟ್ಟ ಕಿತ್ತುಹಾಕಬೇಕೆಂದು ಬಯಸುವಾತನು ಮೊದಲು ಒಳನೋಟವನ್ನು ಸಂಪಾದಿಸಿಕೊಳ್ಳಬೇಕು.

ಇದೇನೂ ಸುಲಭವಾದ ಮಾತಲ್ಲ; ಗಂಗಾದಿನದಿಗಳು ಒಂದೊಂದು ಗೊತ್ತಾದ ದಿಕ್ಕಿಗೆ ಹರಿಯುತ್ತಿರುವಲ್ಲಿ ಅವನ್ನು ಮೂಲದ ಕಡೆಗೆ ಹರಿಯುವಂತೆ ಹಿಂತಿರುಗಿಸುವದು ಸಾಮಾನ್ಯಕಾರ್ಯವೆ? ಇಂದ್ರಿಯಗಳ ಹೊರಹೊರಡುವಿಕೆಯನ್ನು ನಿಲ್ಲಿಸಿ ಒಳನೋಟವನ್ನು ಅಭ್ಯಾಸಮಾಡುವದೂ ಅಷ್ಟೇ ಕಷ್ಟವಾಗಿರುವದು. ಆದರೆ ಹಾಗೆ ಮಾಡಿದರೇ ಮನುಷ್ಯನಿಗೆ ನಿತ್ಯಸುಖವುಂಟು ; ಇಲ್ಲದಿದ್ದರೆ ಸುಖದ ವಾರ್ತೆಯೂ ಅವನ ಕಿವಿಗೆ ಬೀಳುವ ಸಂಭವವಿಲ್ಲ. ಆದ್ದರಿಂದಲೇ ಮೇಲೆ ಉದಾಹರಿಸಿರುವ ಶ್ರುತಿಯು ಉತ್ತರಾರ್ಧದಲ್ಲಿ ಹೇಳಿರುವದೇನೆಂದರೆ–

**ಕಶ್ಚಿದ್ಧೀರಃ ಪ್ರತ್ಯಗಾತ್ಮಾನಮೈಕ್ಷದಾವೃತ್ತಚಕ್ಷುರಮೃತತ್ವಮಿಚ್ಛನ್**

ಯಾವನೋ ಒಬ್ಬ ಧೀರನು, ಇಂದ್ರಿಯಾದಿಗಳನ್ನು ಹೊರಕ್ಕೆ ಹರಿಯದಂತೆ ಹಿಂತಿರುಗಿಸಿಕೊಂಡು, ತಾನು ಅಮರಣಸ್ವಭಾವದವನಾಗಬೇಕೆಂಬ ಬಯಕೆಯಿಂದ ಒಳಗಿನ ಆತ್ಮನನ್ನು ಕಾಣಲೆಳಸುವನು. ಹೀಗೆ ಇಂದ್ರಿಯಗಳ ವೃತ್ತಿಗಳನ್ನು ಹಿಂತಿರುಗಿಸುವ ಅಭ್ಯಾಸವೇ ವಿಷಯವಾಸನೆಯು ಬೇರೂರದಂತೆ ಮಾಡುವದಕ್ಕೆ ಮೊದಲನೆಯ ಮೆಟ್ಟಲು ಎಂಬುದು ಫಲಿತಾರ್ಥವು.

## ೧೫. ಬರಿಯ ಬಾಹ್ಯತ್ಯಾಗದ ವ್ಯರ್ಥತೆ

**ತ್ಯಕ್ತಂ ಗೃಹಾದ್ಯಪಿ ಮಯಾ ಭವತಾಪಶಾನ್ತ್ಯೈ**
**ನಾಸೀದಸೌ ಹೃತಹೃದೋ ಮಮ ಮಾಯಯಾ ತೇ ।**
**ಸಾ ಚಾಧುನಾ ಕಿಮು ವಿಧಾಸ್ಯತಿ ನೇತಿ ಜಾನೇ**
**ತಸ್ಮಾತ್ತ್ವಮದ್ಯ ಶರಣಂ ಮಮ ದೀನಬನ್ಧೋ ॥೧೫॥**

### ಅರ್ಥ

ಸಂಸಾರತಾಪದ ಶಾಂತಿಗಾಗಿ ಮನೆಮಠಗಳನ್ನೂ ಬಿಟ್ಟುಬಿಟ್ಟೆನು. ನಿನ್ನ ಮಾಯೆಯಿಂದ ಅಪಹೃತವಾದ ಮನಸ್ಸುಳ್ಳ ನನಗೆ ಆ ಶಾಂತಿಯು ಉಂಟಾಗಲಿಲ್ಲ. ಆ ನಿನ್ನ ಮಾಯೆಯು ಈಗ ಏನು

ಮಾಡುವದೋ ನಾನರಿಯೆನು. ಆದ್ದರಿಂದ ಎಲೈ ದೀನಬಂಧುವೆ, ನೀನೇ ನನಗೆ ಶರಣು.

## ವಿಚಾರ

ಹಿಂದೆ ಹೇಳಿದಂತೆ ಇಂದ್ರಿಯಗಳ ವೃತ್ತಿಯನ್ನು ತಡೆಯುವದಕ್ಕೆ ಅಶಕ್ತರಾದ ಪಾಮರರು ಇಂದ್ರಿಯಗಳ ಮುಂದೆ ವಿಷಯಗಳು ಇರುವದೇ ಇಂದ್ರಿಯಗಳ ಉಪಟಳಕ್ಕೆ ಕಾರಣವಾಗುವದೆಂತ ಭಾವಿಸುತ್ತಾರೆ. ಆದ್ದರಿಂದ ಇವರು ಹಿಂದುಮುಂದು ವಿಚಾರಮಾಡದೆ ಮನೆಮಠಗಳನ್ನು ಬಿಟ್ಟು ಹೊರಟು ಮಕ್ಕಳುಮರಿಗಳೂ ದನಕರುಗಳೂ ತಮ್ಮ ಕಣ್ಣಿಗೆ ಬೀಳದೆ ಇರಲೆಂದು ದೇಶಾಂತರಕ್ಕೆ ಹೋಗಿಬಿಡುತ್ತಾರೆ. ಅಥವಾ ಕಾಡುಮೇಡುಗಳನ್ನು ಸೇರಿ ಕೊಳ್ಳುತ್ತಾರೆ. ಆದರೆ ಇಷ್ಟುಮಾತ್ರದಿಂದ ಸಂಸಾರತಾಪವು ಎಂದಿಗೂ ಅತ್ಯಂತವಾಗಿ ಶಾಂತವಾಗಲಾರದು. ಈ ವಿಷಯವನ್ನು ಈ ಶ್ಲೋಕದಲ್ಲಿ ತಿಳಿಸುತ್ತಾರೆ.

ಸಂಸಾರದಲ್ಲಿ ಮನುಷ್ಯನಿಗೆ ಉಂಟಾಗುತ್ತಿರುವ ತಾಪಗಳು ಮೂರು ಬಗೆ. ದೈವಿಕವಾಗಿ ಅತಿವೃಷ್ಟಿ, ಅನಾವೃಷ್ಟಿ, ಸಿಡಿಲು, ಮಿಂಚು-ಮುಂತಾದವುಗಳಿಂದ ನಮಗೆ ಆಗುವ ತಾಪಗಳು ಆಧಿದೈವಿಕವೆನಿಸುವವು. ಹೊರಗೆ ಇರುವ ಹುಲಿ, ಕರಡಿ- ಮುಂತಾದ ಪ್ರಾಣಿಗಳಿಂದಾಗಲಿ ಕಳ್ಳರುಕಾಕರು ಮುಂತಾದವರಿಂದಾಗಲಿ, ಅಥವಾ ಮತ್ತೆ ಯಾವ ಪ್ರಾಣಿಯಿಂದಲೋ ವಸ್ತುವಿನಿಂದಲೋ ಆಗಲಿ, ನಮಗೆ ಆಗುವ ತಾಪಗಳು ಅಧಿಭೌತಿಕವೆನಿಸುವವು. ನಮ್ಮ ಶರೀರದಲ್ಲಿ ಅಥವಾ ನಮ್ಮ ಮನಸ್ಸಿನಲ್ಲಿಯೇ ನಮಗೆ ಉಂಟಾಗುವ ತಾಪಗಳು ಆಧ್ಯಾತ್ಮಿಕವೆನಿಸುವವು. ಈ ಮೂರು ಬಗೆಯ ತಾಪಗಳಿಗೂ ಮುಖ್ಯವಾಗಿ ಮನಸ್ಸೇ ಆಶ್ರಯವಾಗಿರುವದರಿಂದ ಮನುಷ್ಯನು ಎಲ್ಲಿಗೆ ಹೋದರೆ ತಾನೆ ಆ ತಾಪಗಳಿಂದ ಬಿಡುಗಡೆಯಾದೀತು ? 'ರಾಮೇಶ್ವರಕ್ಕೆ ಹೋದರೂ ಶನೀಶ್ವರ ಬಿಡದು' ಎಂಬ ಹಾಗೆ ಮನಸ್ಸಿನ ತಾಪಗಳು ನಮ್ಮನ್ನು ಬೆನ್ನು ಹತ್ತಿಯೇ ಇರುವವು. ಇದನ್ನರಿಯದ ಮೂಢರು ವಿಷಯಿಗಳ ಸಂಬಂಧವನ್ನು ತಪ್ಪಿಸಿಕೊಂಡಮಾತ್ರದಿಂದ ತಾಪತ್ರಯದಿಂದ ಪಾರಾಗಬಹುದೆಂದು ತಿಳಿಯುವರು.

ಈ ಜಗತ್ತೆಲ್ಲ ಭಗವಂತನು ಹರಡಿರುವ ಮಾಯೆಯಾದ್ದರಿಂದಲೂ ಜಗತ್ತನ್ನು ಬಿಟ್ಟು ನಾವು ಮತ್ತೆಲ್ಲಿಗೂ ಹೋಗಲಾರೆವಾದ್ದರಿಂದಲೂ ಮನೆಯನ್ನು ಬಿಟ್ಟು ಓಡಿಹೋದರೆ ನಮಗೆ ತಾಪವಡಗುವದೆಂದು ಭಾವಿಸುವದು ಹುಚ್ಚುತನವು. ಹಾಗಾದರೆ ಇದಕ್ಕೆ ಪರಿಹಾರವೇನು ? ಎಂದರೆ ಗೀತೆಯಲ್ಲಿ ಭಗವಂತನು ಅಪ್ಪಣೆಕೊಟ್ಟಿರುವ ವಾಕ್ಯವನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬೇಕು :

**ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ ।**
**ಭ್ರಾಮಯನ್ ಸರ್ವಭೂತಾನಿ ಯನ್ತ್ರಾರೂಢಾನಿ ಮಾಯಯಾ ॥**
**ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ ।**
**ತತ್ಪ್ರಸಾದಾತ್ಪರಾಂ ಶಾನ್ತಿಂ ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಮ್ ॥**

'ಎಲೈ ಅರ್ಜುನನೆ, ಈಶ್ವರನು ಸಕಲಪ್ರಾಣಿಗಳ ಹೃದಯದಲ್ಲಿಯೂ ಇದ್ದುಕೊಂಡು ರಾಟೆಯ ಕುದುರೆಗಳನ್ನು ಹತ್ತಿದ ಜನರನ್ನು ತಿರುಗಿಸುವ ಆಟಗಾರನಂತೆ ತನ್ನ ಮಾಯೆಯಿಂದ ತಿರುಗಿಸುತ್ತಿರುವನು. ಆತನನ್ನೇ ಸರ್ವಭಾವದಿಂದಲೂ ಶರಣುಹೊಂದು ; ಆತನ ಪ್ರಸಾದದಿಂದ ಉತ್ತಮವಾದ ಶಾಂತಿಯನ್ನೂ ಶಾಶ್ವತವಾದ ಸ್ಥಾನವನ್ನೂ ಹೊಂದುತ್ತೀಯೆ.' ಮನಸ್ಸು ವಿಷಯಗಳೆಂಬ ಕುದುರೆಗಳನ್ನೇರುವದು ವಿಷಯಗಳನ್ನು ಕಂಡಾಗ ಮಾತ್ರವೇ ಅಲ್ಲ ; ಪರಮಾತ್ಮನ ಮಾಯೆಗೆ ಒಳಗಾಗಿರುವವರೆಗೂ ನಮ್ಮೆದುರಿಗೆ ಯಾವ ವಿಷಯವೂ ಇಲ್ಲದಿದ್ದರೂ ಚಿಂತೆಯಿಲ್ಲ, ಬೇಕಾದರೆ ನಮ್ಮ ಮನಸ್ಸು ತಾನೇ ವಿಷಯಗಳನ್ನು ಕಲ್ಪಿಸಿಕೊಂಡು ಸವಾರಿಗೆ ಹೊರಡುವದು. ವಿಶ್ವಾಮಿತ್ರ ಪರಾಶರಾದಿಗಳು ವನದಲ್ಲಿದ್ದರೂ ಮನಸ್ಸನ್ನು ಜಯಿಸಲಾರದೆ ಒಮ್ಮೊಮ್ಮೆ ಸಂಕಟಪಡಲಿಲ್ಲವೆ? ಜನಕ, ಅಶ್ವಪತಿ—ಮುಂತಾದವರು ರಾಜರಾಗಿ ವ್ಯವಹಾರದಲ್ಲಿ ಇರುತ್ತಿದ್ದರೂ ಶಾಂತರಾಗಿರಲಿಲ್ಲವೆ ? ಇದಕ್ಕೆ ಕಾರಣವೇನು ? ವಿಷಯಗಳೆಂಬ ಕುದುರೆಗಳನ್ನು ಏರಿದವನು, ಸವಾರಿಮಾಡುವ ಅಭ್ಯಾಸವಿಲ್ಲದ್ದರಿಂದ ಆಗಾಗ ತಲೆತಿರುಗಿ ದೊಪ್ಪೆಂದು ಬೀಳುತ್ತಿರುವನು. ಹೊರಗೆ ತೋರುತ್ತಿರುವ ವಿಷಯಗಳನ್ನು ವಿಷಯಗಳಾಗಿ ಕಾಣುತ್ತಿರುವವರೆಗೂ ಅವು ನಮ್ಮನ್ನು ಮೋಹಗೊಳಿಸುವ ಮಾಯೆಯಾಗಿರುವವು. ಆದರೆ ಇವೆಲ್ಲ ಭಗವಂತನ ವಿಭೂತಿಯೇ ಎಂಬ ಭಾವನೆಯಿಂದ ಆ ಭಗವಂತನಿಗೇ ಶರಣುಹೋದರೆ ಆಗ

ಪ್ರಪಂಚವೇ ಬೇರೆಯ ರೂಪದಲ್ಲಿ ಕಾಣುವದಕ್ಕೆ ಮೊದಲಾಗುವದು. ಆಗ ವಿಷಯಗಳು ನಮ್ಮನ್ನು ಏನೂ ಮಾಡುವದಿಲ್ಲ. ಅತ್ಯಂತವಾದ ಶಾಂತಿಯು ನಮ್ಮ ವಶವಾಗಿಬಿಡುವದು; ಏಕೆಂದರೆ ಭಗವಂತನೇ ಶಾಂತಿಗೆ ಸ್ಥಾನವು, ಆದ್ದರಿಂದ ಇಂದ್ರಿಯಗಳನ್ನು ಹಿಡಿತಕ್ಕೆ ತಂದುಕೊಳ್ಳಬೇಕೆಂದು ಬಯಸು ವಾತನು ಭಗವಂತನನ್ನು ಶರಣುಹೊಗುವ ಈ ಉಪಾಯವನ್ನು ಮುಖ್ಯವಾಗಿ ಸ್ವೀಕರಿಸಬೇಕೆಂದು ಶ್ಲೋಕದ ಭಾವವು.

## ೧೬. ಇಹಪರಭೋಗಗಳ ವಿನಶ್ವರತ್ವ

ಪ್ರಾಪ್ತಂ ಧನಂ ಗೃಹಕುಟುಂಬಗಜಾಶ್ವದಾರಾ
 ರಾಜ್ಯಂ ಯದೈಹಿಕಮಥೇನ್ದ್ರಪುರಶ್ಚ ನಾಥ ।
ಸರ್ವಂ ವಿನಶ್ವರಮಿದಂ ನ ಫಲಾಯ ಕಸ್ಮೈ
 ತಸ್ಮಾತ್ತ್ವಮದ್ಯ ಶರಣಂ ಮಮ ದೀನಬನ್ಧೋ ॥೧೬॥

### ಅರ್ಥ

ಎಲೈ ನಾಥನೆ, ಹಣ, ಮನೆ, ಕುಟುಂಬ, ಆನೆ, ಕುದುರೆ, ಹೆಂಡತಿ, ರಾಜ್ಯ- ಮುಂತಾದ ಐಹಿಕಸುಖಸಾಮಗ್ರಿಯೂ ಆಮೇಲೆ ಸ್ವರ್ಗವೂ ದೊರೆತರೂ- ಇದೆಲ್ಲವೂ ನಾಶವಾಗತಕ್ಕದ್ದೇ ಹೊರತು ಯಾವ ಫಲಕ್ಕೂ ಬಾರದು. ಆದ್ದರಿಂದ ಎಲೈ ದೀನಬಂಧುವೆ, ನೀನೇ ನನಗೆ ಶರಣು.

### ವಿಚಾರ

ಮನೆ, ಮಠ- ಮುಂತಾದವುಗಳನ್ನು ಬಿಡುವದರಿಂದ ಪ್ರಯೋಜನವಿಲ್ಲ ವೆಂಬುದನ್ನು ಕೇಳಿ ಕೆಲವರು ಐಹಿಕಸುಖವನ್ನೂ ಪರಲೋಕದ ಸುಖವನ್ನೂ ಬಯಸುವದೇ ಪರಮಪುರುಷಾರ್ಥವೆಂದೂ ಹಾಗೆ ತಾವು ಮಾಡುತ್ತಲೇ ಇರುವದರಿಂದ ತಮಗೆ ಇನ್ನೇನೂ ಕರ್ತವ್ಯವಿಲ್ಲವೆಂದೂ ಭಾವಿಸಬಹುದು. ಆದರೆ ಇದೂ ಸರಿಯಲ್ಲ. ಸುಖವನ್ನು ಬಯಸುವದು ಮನುಷ್ಯನಿಗೆ

ಯೋಗ್ಯವಾದದ್ದೇ ಸರಿ ; ಆದರೆ ನಾವು ಬಯಸುತ್ತಿರುವ ಸುಖಸಾಮಗ್ರಿಗಳು ನಿಜವಾಗಿ ನೋಡಿದರೆ ಸುಖಸಾಮಗ್ರಿಗಳೇ ಅಲ್ಲ ; ಏಕೆಂದರೆ ಅವೇ ನಮಗೆ ಕಾಲಾಂತರದಲ್ಲಿ ದುಃಖವನ್ನೂ ಕೊಟ್ಟುಬಿಡುವವು ! ಹೆಂಡಿರುಮಕ್ಕಳು, ಮನೆ ಮಠ, ಹಣಕಾಸು, ಹೂಗಂಧ– ಮುಂತಾದ ಸುಖಸಾಮಗ್ರಿಗಳು ಸ್ವಲ್ಪ ಕಾಲ ದವರೆಗೆ ಸುಖದಾಯಕಗಳಾಗಿ ತೋರಿ ಆಮೇಲೆ ತಾವೇ ಇಲ್ಲವಾಗುವವೆಂತಲೂ ಇರುವಾಗಲೂ ಅವು ಯಾವಾಗಲೂ ನಮಗೆ ಸುಖಪ್ರದವಾಗಿಯೇ ಇರುವದಿಲ್ಲ ವೆಂತಲೂ ವಿಚಾರದೃಷ್ಟಿಯುಳ್ಳವರಿಗೆ ತಿಳಿದೇ ಇರುತ್ತದೆಯಲ್ಲವೆ ? ಸ್ವರ್ಗ ಲೋಕದಲ್ಲಿ ಸಿಕ್ಕುವ ಸುಖಸಾಮಗ್ರಿಗೂ ಈ ಸುಖಸಾಮಗ್ರಿಗೂ ಅವು ಬಾಳುವ ಕಾಲದ ಪರಿಮಾಣದಲ್ಲಿ ಭೇದವಿರಬಹುದೇ ಹೊರತು ಸ್ವಭಾವದಲ್ಲಿ ಯಾವ ಭೇದವೂ ಇರುವದಿಲ್ಲ. ಪರಲೋಕದ ಭೋಗಗಳೂ ಇಹಲೋಕದ ಭೋಗ ಗಳಂತೆಯೇ ಸುಖದಾಯಕವೆಂಬ ಬುದ್ಧಿಯನ್ನು ಹುಟ್ಟಿಸಿ ನಮ್ಮನ್ನು ಮರುಳುಗೊಳಿಸುವವು ; ಅವುಗಳೂ ಕಾಲಾಂತರದಲ್ಲಿ ನಾಶವಾಗುವವು. ಆದ್ದರಿಂದ ಸ್ವರ್ಗವನ್ನು ಸೇರುವದುಕೂಡ ಪರಮಾರ್ಥವಾದ ಪುರುಷಾರ್ಥವಲ್ಲ.

ಹಾಗಾದರೆ ವಿಷಯಗಳ ವಿಚಾರದಲ್ಲಿ ನಮ್ಮ ಮನಸ್ಸು ಹೇಗೆ ವರ್ತಿಸ ಬೇಕು ? -ಎಂದರೆ ಅವುಗಳನ್ನು ನಾವು ಬಿಟ್ಟು ಹೋಗಬೇಕೆಂದು ದ್ವೇಷಿಸಲೂ ಬಾರದು, ಅವುಗಳ ಸುಖವೇ ಬೇಕೆಂದು ಆಶಿಸಲೂಬಾರದು. ವಿಷಯಗಳು ಪ್ರಾಪ್ತವಾದಂತೆಲ್ಲ ಅವನ್ನು ಆಸಕ್ತಿಯಿಲ್ಲದೆ ಭೋಗಿಸುತ್ತಾ ಪರಮಾತ್ಮನ ಕಡೆಗೇ ಲಕ್ಷ್ಯವಿಟ್ಟಿರಬೇಕು. ಇದೇ ಪರಮಪುರುಷಾರ್ಥಕ್ಕೆ ಪರಂಪರೆಯಿಂದ ಸಾಧನವಾಗುವದೆಂಬುದೇ ಇಲ್ಲಿ ನಿರ್ದೇಶಮಾಡಿರುವ ಅರ್ಥವು.

## ೧೭. ಯೋಗಸಾಧನೆ

ಪ್ರಾಣಾನ್ನಿರುಧ್ಯ ವಿಧಿನಾ ನ ಕೃತೋ ಹಿ ಯೋಗೋ
ಯೋಗಂ ವಿನಾಽಸ್ತಿ ಮನಸಃ ಸ್ಥಿರತಾ ಕುತೋ ಮೇ ।
ತಾಂ ವೈ ವಿನಾ ಮಮ ನ ಚೇತಸಿ ಶಾನ್ತಿವಾರ್ತಾ
ತಸ್ಮಾತ್ತ್ವಮದ್ಯ ಶರಣಂ ಮಮ ದೀನಬನ್ಧೋ ॥ ೧೭ ॥

## ಅರ್ಥ

ಪ್ರಾಣಗಳನ್ನು ತಡೆದುಕೊಂಡು ಶಾಸ್ತ್ರವಿಧಿಯಂತೆ ನಾನು ಯೋಗವನ್ನು ಮಾಡಲಿಲ್ಲ. ಯೋಗವಿಲ್ಲದೆ ಮನಸ್ಸಿಗೆ ಸ್ಥಿರತ್ವ ವೆಲ್ಲಿಯದು ? ಆ ಸ್ಥಿರತ್ವವಿಲ್ಲದೆ ಮನಸ್ಸಿಗೆ ಶಾಂತಿಯ ವಾರ್ತೆಯೂ ಇರುವದಿಲ್ಲವಷ್ಟೆ ? ಆದ್ದರಿಂದ ಎಲೈ ದೀನಬಂಧುವೆ, ನೀನೇ ನನಗೆ ಈಗ ಶರಣು.

## ವಿಚಾರ

ಹಿಂದಿನ ಎರಡು ಶ್ಲೋಕಗಳಲ್ಲಿ ಇಂದ್ರಿಯನಿಗ್ರಹವನ್ನು ಕುರಿತು ವಿಚಾರ ಮಾಡಿ ಅದಕ್ಕಾಗಿ ಅಭ್ಯಾಸವನ್ನೂ ವೈರಾಗ್ಯವನ್ನೂ ಉಪದೇಶಿಸಿತ್ತು. ಇಲ್ಲಿ ಮನಸ್ಸಿನ ನಿಗ್ರಹವನ್ನು ಕುರಿತು ಹೇಳಿರುತ್ತದೆ.

ಮನಸ್ಸನ್ನು ಬಿಗಿಹಿಡಿಯುವದಕ್ಕೆ ಯೋಗವೇ ಮುಖ್ಯವಾದ ಉಪಾಯವು. ಯೋಗವೆಂದರೆ ಚಿತ್ತವೃತ್ತಿಗಳನ್ನೆಲ್ಲ ತಡೆದು ಅದನ್ನು ಉತ್ತಮವಾದ ಅಂತಸ್ತಿಗೆ ಏರಿಸುವದು. ಮನಸ್ಸಿಗೆ ಕ್ಷಿಪ್ತ, ವಿಕ್ಷಿಪ್ತ, ಮೂಢ, ಏಕಾಗ್ರ, ನಿರುದ್ಧ–ಎಂಬ ಐದು ಅಂತಸ್ತುಗಳು ಉಂಟು. ಕ್ಷಿಪ್ತವೆಂದರೆ ಅತ್ತಿತ್ತ ಚದರಾಡುತ್ತಿರು ವದು ; ವಿಕ್ಷಿಪ್ತವೆಂದರೆ ಮೇಲಕ್ಕೇಳುವದು ; ಮೂಢವೆಂದರೆ ಸುಮ್ಮನೆ ಇದ್ದಂತೆ ಇರುವದು. ಏಕಾಗ್ರವೆಂದರೆ ಒಕ್ಕಡೆಗೆ ನಿಲ್ಲುವದು ; ನಿರುದ್ಧ ವೆಂದರೆ ಎಚ್ಚರದಿಂದ ಕೂಡಿರುವಾಗಲೇ ಸ್ವಲ್ಪವೂ ಅಲುಗಾಡದಂತೆ ನಿಂತು ಬಿಡುವದು. ತಾಮಸಗುಣವು ಹೆಚ್ಚಾಗಿರುವ ಜನರಿಗೆ ಮನಸ್ಸು ಬಹಳವಾಗಿ ಮೂಢಸ್ಥಿತಿಯಲ್ಲಿರುತ್ತದೆ ; ವ್ಯವಹಾರದ ಗಡಿಬಿಡಿಯಲ್ಲಿ ವ್ಯಾಪೃತರಾಗಿರುವ ರಜೋಗುಣದ ಜನರಿಗೆ ಕ್ಷಿಪ್ತಸ್ಥಿತಿಯಲ್ಲಿರುತ್ತದೆ. ಈ ಎರಡು ಸ್ಥಿತಿಗಳನ್ನೂ ಮೀರಿ ಮನಸ್ಸು ಏಕಾಗ್ರವಾದರೆ ಯೋಗವೆನಿಸುವದು.

ಇಂಥ ಯೋಗವು ನಮಗೆಲ್ಲರಿಗೂ ಸಾಧ್ಯವಾಗುವದಿಲ್ಲವಾದ್ದರಿಂದ ನಾವು ಪ್ರಾಣಾಯಾಮವೆಂಬ ಹೊರಗಿನ ಸಾಧನವನ್ನು ಮೊದಲು ಮಾಡಬೇಕು. ಪ್ರಾಣಕ್ಕೂ ಮನಸ್ಸಿಗೂ ಇರುವ ಸಮೀಪದ ಸಂಬಂಧವನ್ನು ತಿಳಿಯಲಿಚ್ಛಿಸು ವವರು ನಮಗೆ ಬೇರೆಬೇರೆ ಮನಸ್ಸಿನ ಸ್ಥಿತಿಗಳು ಬಂದಿರುವಾಗ ಪ್ರಾಣವಾಯು ವಿನ ಗತಿ ಹೇಗಿರುವದೆಂಬುದನ್ನು ಪರೀಕ್ಷಿಸಿಕೊಳ್ಳಬೇಕು. ಪ್ರಾಣವಾಯು

ವಿನ ಗತಿಕ್ರಮವು ವ್ಯವಸ್ಥೆಯಲ್ಲಿರುವಾಗ ಮನಸ್ಸೂ ಶಾಂತವಾಗಿರುವದೆಂದು ಈ ಪರೀಕ್ಷೆಯಿಂದ ಹೊರಪಡುತ್ತದೆ. ಇದನ್ನು ಮನಗಂಡ ಮೇಲೆ ನಾವು ಏನು ಮಾಡಬೇಕಾಯಿತು ? ಮನಸ್ಸನ್ನು ಸಾಕ್ಷಾತ್ತಾಗಿಯೇ ಸ್ವಾಧೀನಕ್ಕೆ ತಂದುಕೊಳ್ಳುವದಕ್ಕಂತೂ ನಮಗೆ ಆಗುವಹಾಗಿಲ್ಲ. ಆದ್ದರಿಂದ ದುಷ್ಟವಾದ ಹಸುವನ್ನು ಕೊರಳುಕಣ್ಣಿಯಿಂದ ವಶಮಾಡಿಕೊಳ್ಳುವ ಹಾಗೆ ಚಂಚಲವಾದ ಮನಸ್ಸನ್ನು ಪ್ರಾಣಾಯಾಮವೆಂಬ ಸ್ಥೂಲಸಾಧನದಿಂದ ವಶಮಾಡಿಕೊಳ್ಳಬೇಕು. ಪ್ರಾಣಾಯಾಮವು ಪೂರಕ, ಕುಂಭಕ, ರೇಚಕ–ಎಂದು ಮೂರು ಅಂಗಗಳಿಂದ ಕೂಡಿರುತ್ತದೆ. ಪೂರಕವೆಂದರೆ ಪ್ರಾಣವಾಯುವನ್ನು ಆದಷ್ಟು ತುಂಬಿಕೊಳ್ಳುವದು ; ಕುಂಭಕವೆಂದರೆ ಹಾಗೆ ತುಂಬಿಕೊಂಡ ಮೇಲೆ ಶ್ವಾಸಕೋಶದಲ್ಲಿಯೇ ಅದನ್ನು ಆದಷ್ಟು ಹೊತ್ತು ನಿಲ್ಲಿಸಿಕೊಂಡಿರುವದು ; ರೇಚಕವೆಂದರೆ ಆದಷ್ಟುಮಟ್ಟಿಗೂ ಪ್ರಾಣವಾಯುವನ್ನು ಹೊರಕ್ಕೆ ದೂಡುವದು. ಪೂರಕಾದಿಗಳಲ್ಲಿ ಇರುವ ವಿಶೇಷಗಳನ್ನೂ ಇವುಗಳನ್ನು ಅಭ್ಯಾಸಮಾಡಬೇಕಾದ ಕ್ರಮವನ್ನೂ ಯೋಗಶಾಸ್ತ್ರಗಳಲ್ಲಿ ವಿಸ್ತಾರವಾಗಿ ಹೇಳಿರುತ್ತದೆ. ಆದರೆ ಆ ವಿಧಿಗಳನ್ನು ಅನುಸರಿಸುವದು ಕಷ್ಟವಾಗಿರುತ್ತದೆ ; ಮತ್ತು ಮೋಸಗಾರರಾದ ಜನರು ಯೋಗೀಶ್ವರರೆಂದು ಹೆಸರಿಟ್ಟುಕೊಂಡು ಮೂಢಜನರನ್ನು ವಂಚಿಸಿ ತಪ್ಪುದಾರಿಗೆ ಎಳೆಯುವ ಸಂಭವವೂ ಹೆಚ್ಚಾಗಿರುವದು. ಆದ್ದರಿಂದ ಸರಿಯಾದ ಗುರುವಿನ ಉಪದೇಶದ ಮೂಲಕ ಪ್ರಾಣಾಯಾಮವನ್ನು ಅಭ್ಯಾಸಮಾಡುತ್ತಾ ಈ ಸ್ಥೂಲಸಾಧನದಿಂದ ಕ್ರಮಕ್ರಮವಾಗಿ ಸಮದೃಷ್ಟಿಯೇ ಮುಂತಾದ ಅಂತರಂಗಸಾಧನಗಳನ್ನು ಪಡೆಯಬೇಕೆಂಬುದೇ ಶ್ಲೋಕದ ಭಾವವು.

## ೧೮. ಗುರುಸೇವೆ

**ಜ್ಞಾನಂ ಯಥಾ ಮಮ ಭವೇತ್ಕೃಪಯಾ ಗುರೂಣಾಂ**
**ಸೇವಾಂ ತಥಾ ನ ವಿಧಿನಾಽಕರವಂ ಹಿ ತೇಷಾಮ್**
**ಸೇವಾಪಿ ಸಾಧನತಯಾ ವಿಧಿತಾಸ್ತಿ ಚಿತ್ತೇ**
**ತಸ್ಮಾತ್ತ್ವಮದ್ಯ ಶರಣಂ ಮಮ ದೀನಬನ್ಧೋ ॥ ೧೮ ॥**

## ಅರ್ಥ

ಎಲೈ ದೀನಬಂಧುವೆ, ಗುರುಗಳ ಕೃಪೆಯಿಂದ ನನಗೆ ಜ್ಞಾನವುಂಟಾಗುವ ಹಾಗೆ ಅವರ ಸೇವೆಯನ್ನಾದರೂ ವಿಧಿಯಂತೆ ಮಾಡಲಿಲ್ಲ. ಸೇವೆಯೂ ಮನಸ್ಸಿಗೆ ಸಾಧನವೆಂದು ಪ್ರಸಿದ್ಧವಾಗಿರುವದು. ಆದ್ದರಿಂದ ಎಲೈ ದೀನಬಂಧುವೆ, ನೀನೇ ಈಗ ನನಗೆ ಶರಣು.

## ವಿಚಾರ

ಇದುವರೆಗೆ ವೈರಾಗ್ಯ, ಶಮಾದಿಗಳು, ಶಾರೀರಾದಿತಪಸ್ಸು, ತ್ರಿಗುಣಜಯ, ಯಜ್ಞಾದಿಸಾಧನಗಳು, ಸಮದೃಷ್ಟಿ, ಶುಭವಾಸನೆಗಳ ಅಭ್ಯಾಸ, ಇಂದ್ರಿಯನಿಗ್ರಹ, ಮನೋನಿಗ್ರಹ–ಮುಂತಾಗಿ ಅನೇಕಸಾಧನಗಳನ್ನು ಹೇಳಿದ್ದಾಯಿತಷ್ಟೆ ? ಇವುಗಳೆಲ್ಲವೂ ಗುರೂಪದೇಶದಿಂದಲೇ ದೊರೆಯತಕ್ಕವಾದ್ದರಿಂದ ಸದ್ಗುರುಸೇವೆಯೇ ಎಲ್ಲಕ್ಕೂ ಮೂಲಸಾಧನವೆಂಬುದನ್ನು ಇಲ್ಲಿ ತಿಳಿಸುತ್ತಾರೆ.

ಯಾವ ಬಗೆಯ ಸಾಧನಗಳೂ ಇಲ್ಲದಿದ್ದರೂ ಗುರುಭಕ್ತಿಯೆಂಬುದೊಂದು ಅವಶ್ಯವಾಗಿರಬೇಕು.

**ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ ।**
**ಉಪದೇಕ್ಷ್ಯನ್ತಿ ತೇ ಜ್ಞಾನಂ ಜ್ಞಾನಿನಸ್ತತ್ತ್ವದರ್ಶಿನಃ ॥**

"ತತ್ತ್ವವನ್ನು ಅರಿಯಬೇಕೆಂದು ಬಯಸುವೆಯಾದರೆ ಗುರುಗಳನ್ನು ನಮಸ್ಕರಿಸಿ ಸಮಯವರಿತು ಪ್ರಶ್ನೆಮಾಡಿ ತಿಳಿದುಕೊಳ್ಳಬೇಕು. ಸೇವೆಯೇ ಇದಕ್ಕೆ ಸಾಧನವು. ಯಾರು ತತ್ತ್ವವನ್ನು ತಾವು ಮನಗಂಡಿರುವರೋ ಅಂಥ ಜ್ಞಾನಿಗಳು ಅವಶ್ಯವಾಗಿ ಜ್ಞಾನವನ್ನು ತಿಳಿಯಹೇಳುತ್ತಾರೆ" ಎಂಬ ಗೀತಾವಾಕ್ಯದ ಅಭಿಪ್ರಾಯವೇ ಇದು.

ಹಿಂದಿನ ಶ್ಲೋಕಗಳಲ್ಲೆಲ್ಲ ಯಾವ ಸಾಧನಗಳೂ ಇಲ್ಲದ ದೀನರಿಗೆ ದೀನಬಂಧುವಾದ ಪರಮೇಶ್ವರನೇ ಗತಿಯೆಂದು ಹೇಳಿರುತ್ತದೆ ; ಇಲ್ಲಿ ಸದ್ಗುರುವೇ ಅಂಥವರಿಗೆ ಗತಿಯೆಂದು ಸೂಚಿಸಿದೆ. ಆದರೂ ಇವೆರಡು ವಾಕ್ಯಗಳಿಗೂ ಪರಸ್ಪರವಿರೋಧವೇನೂ ಇಲ್ಲ. ಏಕೆಂದರೆ ಭಗವಂತನು ಸದ್ಗುರುರೂಪದಿಂದ

ಲೇ ಸಾಧನಗಳನ್ನು ನಮಗೆ ಅನುಗ್ರಹಿಸುತ್ತಾನೆ ; ಸದ್ಗುರುರೂಪದಿಂದಲೇ ನಮ್ಮನ್ನು ಸಂಸಾರದಿಂದ ದಾಟಿಸಿ ಕೃತಾರ್ಥರನ್ನಾಗಿ ಮಾಡುತ್ತಾನೆ. ಆದ್ದರಿಂದ ಭಗವಂತನಿಗೂ ಭಕ್ತರಿಗೂ ಯಾವ ಭೇದವೂ ಇಲ್ಲವೆಂದು ತಿಳಿದು ಸದ್ಗುರುಕೃಪೆಯನ್ನು ಸಂಪಾದಿಸುವದಕ್ಕೋಸ್ಕರ ಆತನ ಸೇವೆಯನ್ನು ಮಾಡುವದೇ ಹಿಂದೆ ಹೇಳಿದ ಎಲ್ಲಾ ಸಾಧನಗಳಿಗಿಂತಲೂ ಶ್ರೇಷ್ಠವಾದದ್ದೆಂದು ತಾತ್ಪರ್ಯವು.

## ೧೯. ತೀರ್ಥಾದಿಗಳ ಸೇವೆ

ತೀರ್ಥಾದಿಸೇವನಮಹೋ ವಿಧಿನಾ ಹಿ ನಾಥ
ನಾಕಾರಿ ಯೇನ ಮನಸೋ ಮಮ ಶೋಧನಂ ಸ್ಯಾತ್ ।
ಶುದ್ಧಿಂ ವಿನಾ ನ ಮನಸೋಽವಗಮಾಪವರ್ಗೌ
ತಸ್ಮಾತ್ತ್ವಮದ್ಯ ಶರಣಂ ಮಮ ದೀನಬನ್ಧೋ ॥ ೧೯ ॥

### ಅರ್ಥ

ಎಲೈ ನಾಥನೆ, ತೀರ್ಥವೇ ಮುಂತಾದವುಗಳನ್ನು ನಾನು ವಿಧಿವತ್ತಾಗಿ ಸೇವೆಮಾಡಲಿಲ್ಲ ; ಅದರಿಂದಲಾದರೂ ನನ್ನ ಮನಸ್ಸು ಶುದ್ಧಿಹೊಂದುತ್ತಲಿತ್ತು ಮನಃಶುದ್ಧಿಯಿಲ್ಲದೆ ಜ್ಞಾನವಾಗಲಿ ಮೋಕ್ಷವಾಗಲಿ ಆಗಲಾರವು. ಆದ್ದರಿಂದ ಎಲೈ ದೀನಬಂಧುವೆ, ನನಗೆ ಈಗ ನೀನೇ ಶರಣು.

### ವಿಚಾರ

ಚಿತ್ತಶುದ್ಧಿಗೆ ಹಿಂದೆ ಎಷ್ಟೋ ಉಪಾಯಗಳನ್ನು ಹೇಳಿರುತ್ತದೆ. ಆದರೂ ಇಲ್ಲಿ ತೀರ್ಥಕ್ಷೇತ್ರವೇ ಮುಂತಾದವುಗಳನ್ನು ಸೇವಿಸುವದೆಂಬ ಮತ್ತೊಂದು ಉಪಾಯವನ್ನು ಏತಕ್ಕೆ ಹೇಳಿರುತ್ತಾರೆಂದರೆ, ಇದಕ್ಕೊಂದು ವಿಶೇಷಕಾರಣ ಉಂಟು. ಮಹಾತ್ಮರು ಬಹುಮಟ್ಟಿಗೆ ಪರಿಶುದ್ಧಗಳಾದ ತೀರ್ಥಕ್ಷೇತ್ರಗಳಲ್ಲಿ ವಾಸಮಾಡುತ್ತಾರೆ. ನಿಜವಾಗಿ ತೀರ್ಥವೆಂದರೇನು ? ಮಹಾತ್ಮರು ಸ್ನಾನಾದಿ

ಗಳನ್ನು ನೆರವೇರಿಸಿರುವ ಸ್ಥಳವು ; ಕ್ಷೇತ್ರವೆಂದರೇನು ? ಮಹಾತ್ಮರು ತಪಸ್ಸು ಮಾಡಿ ಭಗವಂತನನ್ನು ಒಲಿಸಿಕೊಂಡ ಸ್ಥಳವು. ಈಗ ತೀರ್ಥಗಳೆಂದೂ ಕ್ಷೇತ್ರಗಳೆಂದೂ ಎನಿಸಿಕೊಂಡಿರುವ ಎಷ್ಟೋ ಸ್ಥಳಗಳಲ್ಲಿ ಧನಾಸಕ್ತರಾದ ಪುರೋಹಿತರು ಕಾದುಕೊಂಡಿರುತ್ತಾರೆ ; ಅಲ್ಲಿಗೆ ಹೋಗಬೇಕೆನ್ನುವವರೂ 'ಆ ಯಾತ್ರೆಮಾಡಿಕೊಂಡು ಬಂದಿದ್ದೇನೆ, ಈ ದೇವರನ್ನು ನೋಡಿಬಂದಿದ್ದೇನೆ' ಎಂದು ಜನರಲ್ಲಿ ಕೊಚ್ಚಿಕೊಳ್ಳುವದಕ್ಕೆಂದು ದಂಭಾರ್ಥವಾಗಿಯೋ ಅಥವಾ ಬೇರೆಬೇರೆಯ ಸ್ಥಳಗಳಲ್ಲಿ ಬೇರೆಬೇರೆಯ ನೋಟಗಳನ್ನು ನೋಡಿಕೊಂಡು ರೈಲುಪ್ರಯಾಣಮಾಡಿ ಬರಬೇಕೆಂಬ ಕುತೂಹಲದಿಂದಲೋ ಊರಿಂದೂರಿಗೆ ಗರ್ರನೆ ತಿರುಗುವ ಜನರಾಗಿರುತ್ತಾರೆ. ಹೀಗಿದ್ದರೂ ದೊಡ್ಡವರ ದರ್ಶನವೇ ಆಗಬೇಕೆಂಬ ಕುತೂಹಲದಿಂದ ತೀರ್ಥಯಾತ್ರೆಯನ್ನು ಮಾಡುವವರಿಗೆ ಈಗಲೂ ಸತ್ಪುರುಷರು ತೀರ್ಥಾದಿಗಳಲ್ಲಿ ದೊರಕಿಯೇ ದೊರಕುತ್ತಾರೆ.

ಯಾರು ಮಹಾತ್ಮರ ದರ್ಶನವೇ ಪರಮೇಶ್ವರನ ದರ್ಶನವೆಂಬ ಉತ್ತಮ ವಾದ ರಹಸ್ಯವನ್ನರಿತುಕೊಂಡು ತೀರ್ಥಯಾತ್ರೆಗೆ ಹೊರಡುವರೋ ಅವರಿಗೆ ಅಷ್ಟುಮಾತ್ರದಿಂದಲೇ ಮನಸ್ಸಿನ ಎಷ್ಟೋ ಭಾಗದ ಕೊಳೆಯು ಬಿಟ್ಟುಹೋಗು ತ್ತದೆ. ಮಹಾಪುರುಷರು ತೀರ್ಥಗಳಲ್ಲಿ ಮಾಡಿರುವ ತಪಸ್ಸಿನ ಪ್ರಭಾವದಿಂದ ಅವರ ಮನಸ್ಸಿನ ರಜಸ್ತಮೋಗುಣಗಳು ತೊಳೆದುಹೋಗುವವು. ಪೂರ್ವ ಜನ್ಮದಲ್ಲಿ ಅವರು ಮಾಡಿದ ಪುಣ್ಯದಿಂದ ಸದ್ಗುರುವೇ ದೊರಕಿದರಂತೂ ಗುರುಸೇವೆಯೆಂಬ ಉತ್ಕೃಷ್ಟಸಾಧನೆಯು ದೊರೆತು ಅದರಿಂದ ಸಕಲಪುರು ಷಾರ್ಥಗಳೂ ಹಸ್ತಗತವಾಗುವವು. ಅದ್ದರಿಂದ ತೀರ್ಥಾದಿಗಳಿಗೆ ಭಕ್ತಿಯಿಂದ ಹೋಗಿಬರುವದು ಒಳ್ಳೆಯ ಸಾಧನವೆಂದು ಶ್ಲೋಕದ ಅಭಿಪ್ರಾಯವು.

## ೨೦. ಸಾಧನಸಂಪತ್ತಿಲ್ಲದೆ ವೇದಾಂತವಿಚಾರವು ವ್ಯರ್ಥ

**ವೇದಾನ್ತಶೀಲನಮಪಿ ಪ್ರಮಿತಿಂ ಕರೋತಿ**
**ಬ್ರಹ್ಮಾತ್ಮನಃ ಪ್ರಮಿತಿಸಾಧನಸಂಯುತಸ್ಯ ।**

**ನೈವಾಸ್ತಿ ಸಾಧನಲವೋ ಮಯಿ ನಾಥ ತಸ್ಯಾ-**
**ಸ್ತಸ್ಮಾತ್ತ್ವಮದ್ಯ ಶರಣಂ ಮಮ ದೀನಬನ್ಧೋ ॥೨೦॥**

## ಅರ್ಥ

ವೇದಾಂತವಿಚಾರವುಕೂಡ ಜ್ಞಾನಕ್ಕೆ ಬೇಕಾದ ಸಾಧನಗಳಿಂದ ಕೂಡಿರುವಾತನಿಗೇ ಬ್ರಹ್ಮಾತ್ಮನ ಯಥಾರ್ಥಜ್ಞಾನವನ್ನುಂಟುಮಾಡುವದು, ನನ್ನಲ್ಲಿ ಒಂದಿಷ್ಟೂ ಸಾಧನವಿಲ್ಲ ; ಆದ್ದರಿಂದ ಎಲೈ ದೀನ ಬಂಧುವೆ, ನೀನೇ ಈಗ ನನಗೆ ಶರಣು.

## ವಿಚಾರ

ವೇದಾಂತವಿಚಾರದಿಂದ ಜ್ಞಾನವೂ ಜ್ಞಾನದಿಂದ ಮೋಕ್ಷವೂ ಆಗುವವೆಂದು ಜಗತ್ಪ್ರಸಿದ್ಧವಾಗಿದ್ದರೂ ವಿಚಾರವನ್ನು ಕುರಿತು ಹಿಂದೆ ಎಲ್ಲಿಯೂ ಹೇಳಿರುವದಿಲ್ಲ. ಇದಕ್ಕೆ ಕಾರಣವೇನೆಂದರೆ, ಇದುವರೆಗೆ ಹೇಳಿದ ಸಾಧನಗಳೆಲ್ಲ ಇರುವಾತನಿಗೇ ವೇದಾಂತವಿಚಾರವು ಜ್ಞಾನವನ್ನುಂಟುಮಾಡುವದು. ಅಧಿಕಾರಿಯಲ್ಲದವನಿಗೆ ವೇದವಾಕ್ಯದಿಂದ ಯಥಾರ್ಥಜ್ಞಾನವುಂಟಾಗಲಾರದು.

**ಉಪದೇಕ್ಷ್ಯನ್ತಿ ತೇ ಜ್ಞಾನಂ ಜ್ಞಾನಿನಸ್ತತ್ತ್ವದರ್ಶಿನಃ ।**
**ಯಜ್ಜ್ಞಾತ್ವಾ ನ ಪುನರ್ಮೋಹಮೇವಂ ಯಾಸ್ಯಸಿ ಪಾಣ್ಡವ ॥**

"ತತ್ತ್ವಜ್ಞಾನಿಗಳನ್ನು ಕಂಡು ಸೇವಿಸಿದರೆ ಅವರು ನಿನಗೆ ಉಪದೇಶ ಮಾಡುತ್ತಾರೆ ; ಅವರು ಹೇಳಿಕೊಟ್ಟ ಜ್ಞಾನದಿಂದ ಮತ್ತೆ ನಿನಗೆ ಈ ರೀತಿಯಲ್ಲಿ ಮೋಹವುಂಟಾಗುವದಿಲ್ಲ" ಎಂದು ಭಗವಂತನು ಅರ್ಜುನನಿಗೆ ಹೇಳಿದ ಮಾತು ಇಲ್ಲಿ ನೆನಪಿಡತಕ್ಕದ್ದಾಗಿರುವದು. ದೊಡ್ಡವರೆಂದರೆ ಯಾರು ? ಯಾರು ಶಾಸ್ತ್ರಪ್ರಸಿದ್ಧವಾಗಿರುವ ತತ್ತ್ವವನ್ನು ಮನಗಂಡು ಉಪದೇಶಮಾಡುವರೋ, ಯಾರ ಉಪದೇಶದಿಂದ ಉಂಟಾದ ಜ್ಞಾನದಿಂದ ನಮ್ಮ ಮೋಹವೆಲ್ಲ ತೊಲಗುವದೋ ಅಂಥವರೇ- ರೋಗದ ನಿದಾನವನ್ನು ತಿಳಿದು ಔಷಧಪ್ರಯೋಗವನ್ನು ಮಾಡಬಲ್ಲ ಉತ್ತಮವೈದ್ಯರ ಹಾಗೆ-ನಮ್ಮಲ್ಲಿರುವ ಕುಂದುಕೊರತೆಗಳನ್ನು ಅರಿತು ಅವನ್ನು ಸರಿಪಡಿಸುವದಕ್ಕೆ ತಕ್ಕ ಸಾಧನಗಳನ್ನು ಉಪದೇಶಿಸಿ ತತ್ತ್ವವು ಬುದ್ಧಿಯಲ್ಲಿ ಮೂಡುವವರೆಗೂ ಉಪದೇಶಮಾಡ

ಬಲ್ಲರು. ಅಂಥವರ ಉಪದೇಶದಿಂದ ಮಾತ್ರ ವೇದಾಂತವಿಚಾರವು ಫಲಕಾರಿಯಾಗುವದೇ ಹೊರತು ನಾವೇ ಆರು ಶಾಸ್ತ್ರಗಳನ್ನೂ ಓದಿದ್ದರೂ ವೇದಾಂತವೇದ್ಯವಾಗಿರುವ ಬ್ರಹ್ಮತತ್ತ್ವವು ನಮಗೆ ನೇರಾಗಿ ತಿಳಿಯುವದೆಂಬ ಆಸೆಯನ್ನು ಇಟ್ಟುಕೊಳ್ಳುವಹಾಗಿಲ್ಲ. ಗುರುವಿನ ಬಳಿಗೆ ಹೋಗಿ ಶ್ರವಣವನ್ನು ಮಾಡುವ ಅಧಿಕಾರಿಗಳಿಗೇ ಜ್ಞಾನವುಂಟಾಗುವದು. ಆದ್ದರಿಂದ ಬರಿಯ ಗ್ರಂಥದ ಆಡಂಬರಕ್ಕೆ ಮೋಸಹೋಗಬಾರದು.

**ವಾಗ್ವೈಖರೀ ಶಬ್ದಝರೀ ಶಾಸ್ತ್ರವ್ಯಾಖ್ಯಾನಕೌಶಲಮ್ ।**
**ವೈದುಷ್ಯಂ ವಿದುಷಾಂ ತದ್ವದ್ಭುಕ್ತಯೇ ನ ತು ಮುಕ್ತಯೇ ॥**

"ಮಾತುಗಳ ಗದ್ದಲವೂ ಶಬ್ದಗಳ ಪ್ರವಾಹವೂ ಶಾಸ್ತ್ರಗಳನ್ನು ವಿಧವಿಧವಾಗಿ ವಿವರಿಸಿ ಹೇಳುವ ಜಾಣತನವೂ ವಿದ್ವಾಂಸರಲ್ಲಿ ತೋರುವ ವಿದ್ವತ್ತೂ–ಇವೆಲ್ಲ ಭುಕ್ತಿಗೆ ಕಾರಣವಾದಾವೇ ಹೊರತು ಮುಕ್ತಿಗೆ ಕಾರಣವಾಗಲಾರವು" –ಎಂಬ ಉಕ್ತಿಯನ್ನು ನೆನಪಿಡಬೇಕು. ನಾವು ಬುದ್ಧಿವಂತರೆಂದೂ ಶಾಸ್ತ್ರವನ್ನು ಓದಿದವರೆಂದೂ ತರ್ಕದಲ್ಲಿ ಗಟ್ಟಿಗರೆಂದೂ ಲೋಕದಲ್ಲಿ ಎನ್ನಿಸಿಕೊಂಡರೆ ಏನು ಬಂತು ? ವಾಕ್ಯಾರ್ಥವನ್ನುಮಾಡಿ ವಾದದಲ್ಲಿ ಜಯಶೀಲರಾದರೆತಾನೆ ಏನು ? ನಮ್ಮ ಹೃದಯದಲ್ಲಿರುವ ನಿಜವಾದ ಸಂಶಯವನ್ನು ಪರಿಹರಿಸುವದಕ್ಕಾಗಲಿ, ಸಂಸಾರತಾಪದಿಂದ ಬಿಡುಗಡೆಯನ್ನು ಹೊಂದುವದಕ್ಕಾಗಲಿ, ಅವು ಎಳ್ಳಷ್ಟಾದರೂ ನೆರವಾಗುವದೇ ಇಲ್ಲ. ಆದ್ದರಿಂದ ವೇದಾಂತವಿಚಾರವನ್ನು ಮಾಡುತ್ತೇವೆಂಬ ನೆಪದಿಂದ ಸಾಧನಗಳ ದಾರಿಗೆ ಅಡ್ಡಲಾಗಿ ದೊಡ್ಡ ಬಂಡೆಯನ್ನು ಎಳೆದುಕೊಳ್ಳದೆ ಶ್ರದ್ಧಾದಿಸಾಧನಗಳನ್ನು ಅವಲಂಬಿಸಿ ಸದ್ಗುರುಗಳ ಕೃಪೆಯನ್ನು ಸಂಪಾದಿಸಿಕೊಂಡು ಅದರ ಮೂಲಕ ಕೃತಾರ್ಥರಾಗುವ ಯತ್ನವನ್ನು ಮಾಡಬೇಕೆಂಬುದೇ ಇಲ್ಲಿ ಅಭಿಪ್ರೇತವಾದ ಅರ್ಥವು.

## ೨೧. ನಾಮಸ್ಮರಣೆ

**ಗೋವಿನ್ದ, ಶಙ್ಕರ, ಹರೇ, ಗಿರಿಜೇಶ, ಮೇಶ,**
**ಶಮ್ಭೋ, ಜನಾರ್ದನ, ಗಿರೀಶ, ಮುಕುನ್ದ, ಸಾಮ್ಬ ।**

**ನಾನ್ಯಾ ಗತಿರ್ಮಮ ಕಥಞ್ಚನ ತ್ವಾಂ ವಿಹಾಯ**
**ತಸ್ಮಾತ್ತ್ವಮದ್ಯ ಶರಣಂ ಮಮ ದೀನಬನ್ಧೋ ॥ ೨೧**

## ಅರ್ಥ

ಎಲೈ ಗೋವಿಂದನೆ, ಶಂಕರನೆ ! ಹರಿಯೆ, ಗಿರಿಜೇಶನೆ ! ಲಕ್ಷ್ಮೀಪತಿಯೆ, ಶಂಭುವೆ ! ಜನಾರ್ದನನೆ, ಕೈಲಾಸದೊಡೆಯನೆ ! ಮುಕುಂದನೆ, ಸಾಂಬನೆ ! –ನಿಮ್ಮನ್ನು ಬಿಟ್ಟು ನನಗೆ ಯಾವ ರೀತಿ ಯಲ್ಲಿಯೂ ಬೇರೆಯ ಗತಿಯಿಲ್ಲ. ಆದ್ದರಿಂದ ದೀನಬಂಧುವೆ, ನೀನೇ ನನಗೆ ಶರಣು.

## ವಿಚಾರ

ಇದುವರೆಗೆ ಹೇಳಿದ ಎಲ್ಲಾ ಸಾಧನಗಳೂ ಸದ್ಗುರುವಿನ ಕೃಪೆಯಿಂದ ದೊರೆಯತಕ್ಕವು. ಕೆಲವು ಮಾತ್ರ ಸ್ವಪ್ರಯತ್ನದಿಂದ ದೊರೆಯತಕ್ಕವುಗಳಾ ದರೂ ಅವುಗಳ ಫಲವೂ ಗುರುಕೃಪೆಯಿಂದಲೇ ಪೂರ್ಣವಾಗುವದು. ಆದ್ದರಿಂದ ಸದ್ಗುರುವನ್ನು ಸೇರಲು ಪ್ರಯತ್ನಪಡಬೇಕಷ್ಟೆ ? ಆದರೆ ಆ ಸದ್ಗುರುವೂ ಪರಮೇಶ್ವರನ ಅನುಗ್ರಹದಿಂದಲೇ ದೊರಕುವನು.

**ಯಾವನ್ನಾನುಗ್ರಹಃ ಸಾಕ್ಷಾಜ್ಜಾಯತೇ ಪರಮೇಶ್ವರಾತ್ ।**
**ತಾವನ್ನ ಸದ್ಗುರುಂ ಕಶ್ಚಿತ್ಸಚ್ಛಾಸ್ತ್ರಮಪಿ ವಿನ್ದತಿ ॥**

"ಎಲ್ಲಿಯವರೆಗೆ ಪರಮೇಶ್ವರನ ಅನುಗ್ರಹವಾಗುವದಿಲ್ಲವೋ ಅಲ್ಲಿಯ ವರೆಗೆ ಸದ್ಗುರುವಾಗಲಿ ಸಚ್ಛಾಸ್ತ್ರದ ಸುಳಿವಾಗಲಿ ಯಾರಿಗೂ ದೊರೆಯು ವದಿಲ್ಲ" ಎಂದು ವಾಸಿಷ್ಠರಾಮಾಯಣದ ಉಕ್ತಿಯಿರುವದು. ಆದ್ದರಿಂದ ಮತ್ತೆ ಯಾವ ಸಾಧನವಿಲ್ಲದೆ ಇದ್ದರೂ ಪರಮಾತ್ಮನ ನಾಮಾವಳಿಯನ್ನು ಯಾವಾಗಲೂ ಪಠಿಸುತ್ತಿರಬೇಕು.

ನಾಮಸ್ಮರಣೆಯೆಂಬುದು ಸುಖಕರವಾಗಿಯೂ ಬಹಳ ಪ್ರಯೋಜನಕರ ವಾಗಿಯೂ ಇರುವ ಸಾಧನವಾಗಿರುತ್ತದೆ. ಪರಮಾತ್ಮನ ಗುಣವನ್ನೂ ಲೀಲೆಯನ್ನೂ ಮನಸ್ಸಿಗೆ ತಂದುಕೊಡುವದು ನಾಮಸ್ಮರಣೆಯ ಮೊದಲನೆಯ ಪ್ರಯೋಜನವು. ಇಂಥ ಗುಣಕರ್ಮಗಳು ಮನಸ್ಸಿಗೆ ಬಂದಕೂಡಲೆ ಮನಸ್ಸಿನ

ಪಾಪಗಳೆಂಬ ದುಷ್ಕೃತ್ಯದ ಅಡಿಗಲ್ಲುಗಳು ಸಡಿಲವಾಗುವದು ಎರಡನೆಯ ಪ್ರಯೋಜನವು. ತಿಳಿದಾಗಲಿ ತಿಳಿಯದೆಯಾಗಲಿ ಮಾಡಿದ ನಾಮಕೀರ್ತನೆಯು ತನ್ನ ಫಲವನ್ನು ಕೊಟ್ಟೇಕೊಡುವದು. ನೀರಿಗೆ ಬಿದ್ದ ಲವಣವು ಕರಗುವದೇ ಹೇಗೆ ಸ್ವಾಭಾವಿಕವೋ, ಹಾಗೆ ಭಗವಂತನ ನಾಮಸ್ಮರಣೆಯಿಂದ ಪಾಪಗಳು ಕರಗಿಹೋಗುವದು ಸ್ವಾಭಾವಿಕವು. ಯಾವ ದ್ರವ್ಯಗಳನ್ನೂ ಬಯಸದೆ ದೇಶಕಾಲಾದಿನಿಯಮಗಳಿಲ್ಲದೆ ಜಾತಿವರ್ಣಾಶ್ರಮಾದಿಗಳ ಕಟ್ಟಿಲ್ಲದೆ ಸುಲಭ ವಾಗಿ ಎಲ್ಲರೂ ನೆರವೇರಿಸಬಹುದಾದ ನಾಮಕೀರ್ತನೆಯಿಂದ ಇಂಥ ಉತ್ತಮ ಫಲಗಳು ಹೇಗೆ ದೊರೆತಾವೆಂದು ಸಂಶಯಪಡಬಾರದು.

ಧ್ಯಾಯನ್ ಕೃತೇ ಯಜನ್ ಯಜ್ಞೈ-
ಸ್ತ್ರೇತಾಯಾಂ ದ್ವಾಪರೇಽರ್ಚಯನ್ ।
ಯದಾಪ್ನೋತಿ ತದಾಪ್ನೋತಿ
ಕಲೌ ಸಂಕೀರ್ತ್ಯ ಕೇಶವಮ್ ॥

"ಕೃತಯುಗದಲ್ಲಿ ಧ್ಯಾನಮಾಡುವದರಿಂದ ಯಾವ ಫಲವು ಲಭಿಸುವದೋ, ತ್ರೇತಾಯುಗದಲ್ಲಿ ಯಜ್ಞಗಳಿಂದ ಆ ಫಲವು ಲಭಿಸುತ್ತದೆ ; ದ್ವಾಪರಯುಗದಲ್ಲಿ ಭಗವಂತನನ್ನು ಅರ್ಚನೆಮಾಡುವದರಿಂದ ಅದೇ ಫಲವು ದೊರೆಯುತ್ತದೆ ; ಕಲಿಯುಗದಲ್ಲಿಯೋ ಎಂದರೆ ಭಗವಂತನ ನಾಮಸಂಕೀರ್ತನೆಮಾಡುವದ ರಿಂದಲೇ ಅದೇ ಫಲವು ದೊರೆಯುತ್ತದೆ" ಎಂಬ **ವಿಷ್ಣುಪುರಾಣದವಚನ**ದಲ್ಲಿ ನಾವೆಲ್ಲರೂ ಶ್ರದ್ಧೆಯಿಡಬಹುದಾಗಿದೆ. ನಿಜವಾಗಿ ನೋಡಿದರೆ ಈ ಕಲಿಯುಗ ದಲ್ಲಿ ಧ್ಯಾನ; ಯಜ್ಞ, ಅರ್ಚನ- ಮುಂತಾದ ಸಾಧನಗಳನ್ನು ಮಾಡುವದು ಹಾಗಿರಲಿ, ಪರಮಾತ್ಮನ ನಾಮಸ್ಮರಣೆಯನ್ನು ಮಾಡುವದಕ್ಕೆ ಕೂಡ ಮನಸ್ಸು ಒಲಿಯುವದು ಕಷ್ಟವೇ ಆಗಿರುವದು. ದಯಾಳುವಾದ ಭಗವಂತನು 'ಜನರು ನಾಮಸ್ಮರಣೆಯನ್ನು ಮಾಡುವದಕ್ಕೆ ಮನಸ್ಸು ಒಲಿಸಿದರೆ ಸಾಕು, ಅನಂತಫಲವನ್ನು ಕೊಡುವೆನು' ಎಂದು ಕಾದುಕೊಂಡಿರುತ್ತಾನೆ. ಆದ್ದರಿಂದ ಭಗವಂತನ ನಾಮಸ್ಮರಣೆಯು ಅವಶ್ಯವಾಗಿ ಮಹಾಫಲವನ್ನು ಕೊಡುವದು. ಇಷ್ಟೇಕೆ ? ಮನಸ್ಸಿಟ್ಟು ನಾಮಸ್ಮರಣೆಯನ್ನು ಮಾಡುವದಕ್ಕೆ ಆಗದಿದ್ದರೂ ಚಿಂತೆಯಿಲ್ಲ ; ಮೊದಮೊದಲು ಹಾಸ್ಯಕ್ಕಾಗಲಿ ದಂಭಕ್ಕಾಗಲಿ ನಾಮಕೀರ್ತನೆ ಮಾಡಿದರೆ ಕೂಡ ಅದಕ್ಕೂ ಫಲವುಂಟು.

ನಾಮಗಳನ್ನು ಕೀರ್ತನೆಮಾಡುವದೆಂಬುದೇ ಒಂದು ಆನಂದವು. ಆದ್ದರಿಂದ ಹರಿ, ಹರ– ಮುಂತಾದ ಇಷ್ಟದೇವತೆಗಳಲ್ಲಿ ಒಂದನ್ನು ಆರಿಸಿಕೊಂಡು ಅದರ ನಾಮಾವಳಿಯನ್ನು ಕೀರ್ತನೆಮಾಡುತ್ತಿರಬೇಕು. ಆದರೆ ಹರಿಹರಾದಿ ದೇವತೆಗಳಲ್ಲಿ ತಾರತಮ್ಯವನ್ನು ಮಾತ್ರ ಮಾಡಬಾರದು. ಏಕೆಂದರೆ

**ರುದ್ರೋ ನಾರಾಯಣಶ್ಚೈವ ಸತ್ತ್ವಮೇಕಂ ದ್ವಿಧಾ ಕೃತಮ್ ।**
**ಲೋಕೇ ಚರತಿ ಕೌನ್ತೇಯ ವ್ಯಕ್ತಿಸ್ಥಂ ಸರ್ವಕರ್ಮಸು ॥**

"ಶಿವನೆಂದೂ ನಾರಾಯಣನೆಂದೂ ಒಂದೇ ವಸ್ತುವು ಎರಡು ಬಗೆಯಾಗಿದೆ. ಒಂದೇ ವಸ್ತುವು ಬೇರೆಬೇರೆಯಾಗಿ ಸಕಲಕರ್ಮಗಳಿಗೂ ಆಧಾರವಾಗಿರುವದು" ಎಂದು ಮೋಕ್ಷಧರ್ಮದ ವಾಕ್ಯವಿರುವದು. ಹರಿಹರಾದಿಗಳಲ್ಲಿ ಭೇದವನ್ನು ಕಲ್ಪಿಸಬಾರದೆಂದು ತಿಳಿಸುವದಕ್ಕೇ ಈ ಶ್ಲೋಕದಲ್ಲಿ ಹರಿನಾಮವಾದಮೇಲೆ ಹರನಾಮವನ್ನು ಸೇರಿಸಿ ಸ್ತೋತ್ರಮಾಡಿರುತ್ತದೆ. ಈ ಅಭಿಪ್ರಾಯದಿಂದಲೇ 'ನಿಮ್ಮನ್ನು ಬಿಟ್ಟು ನನಗೆ ಗತಿಯಿಲ್ಲ' ಎಂದು 'ವಾವಮ್' ಎಂಬ ದ್ವಿವಚನವನ್ನು ಪ್ರಯೋಗಮಾಡಿದಮೇಲೂ 'ತ್ವಮದ್ಯ ಶರಣಮ್' (ನೀನೇ ನನಗೆ ರಕ್ಷಕನು) ಎಂದು ಮತ್ತೆ ಏಕವಚನದಲ್ಲಿಯೇ ಉಪಸಂಹಾರಮಾಡಿರುತ್ತದೆ.

ಅಂತೂ ಪರಮಾತ್ಮನ ನಾಮಸ್ಮರಣೆಯು ಎಲ್ಲಾ ಸಾಧನಗಳಿಗೂ ಮೂಲವೆಂಬುದೇ ಈ ಶ್ಲೋಕದ ತಾತ್ಪರ್ಯವು.

## ೨೨. ಗ್ರಂಥಪಠನಕ್ಕೆ ಫಲ

**ಏತತ್ಸ್ತವಂ ಭಗವದಾಶ್ರಯಣಾಭಿಧಾನಂ**
**ಯೇ ಮಾನವಾಃ ಪ್ರತಿದಿನಂ ಪ್ರಯತಾಃ ಪಠನ್ತಿ ।**
**ತೇ ಮಾನವಾ ಭವರತಿಂ ಪರಿಭೂಯ ಶಾನ್ತಿಂ**
**ಗಚ್ಛನ್ತಿ ಕಿಂ ಚ ಪರಮಾತ್ಮನಿ ಭಕ್ತಿಮದ್ಧಾ ॥ ೨೨ ॥**

## ಅರ್ಥ

"ಭಗವದಾಶ್ರಯಣ" ಎಂಬ ಹೆಸರಿನ ಈ ಸ್ತೋತ್ರವನ್ನು ಪ್ರತಿದಿನವೂ ಶುಚಿಯಾಗಿ ಯಾವ ಜನರು ಪಠಿಸುತ್ತಾರೋ ಆ ಜನರು ಸಂಸಾರದಲ್ಲಿರುವ ಆಸೆಯನ್ನು ಹೋಗಲಾಡಿಸಿಕೊಂಡು ಶಾಂತಿಯನ್ನು ಹೊಂದುವರು. ಮತ್ತು ಅವರು ಪರಮಾತ್ಮನಲ್ಲಿ ಹೆಚ್ಚಿನ ಭಕ್ತಿಯನ್ನೂ ಹೊಂದುವರು.

## ವಿಚಾರ

ಈ ಪ್ರಕರಣದಲ್ಲಿ ಹೇಳಿದ ಸಾಧನಗಳನ್ನು ಅನುಷ್ಠಾನಮಾಡುವದರ ಮುಖ್ಯಫಲವೇನೆಂಬುದನ್ನು ಇಲ್ಲಿ ಸಂಗ್ರಹವಾಗಿ ಹೇಳಿರುತ್ತದೆ.

ವಿಷಯದಲ್ಲಿ ಮೋಹದಿಂದ ನಮಗುಂಟಾಗಿರುವ ಅತ್ಯಾಸಕ್ತಿಯೇ ನಮ್ಮ ಸಕಲದುಃಖಗಳಿಗೂ ಕಾರಣವಾದ್ದರಿಂದ ಆ ಆಸಕ್ತಿಯು ಸಡಿಲವಾಗುವದು ಒಂದು ಪ್ರಯೋಜನವು. ಪರಮಾತ್ಮನಲ್ಲಿ ಭಕ್ತಿಯುಂಟಾಗಿ ಆದರಿಂದಾಗುವ ಶಾಂತಿರೂಪವಾದ ಪರಮಾನಂದವು ಎರಡನೆಯ ಪ್ರಯೋಜನವು. ಭಕ್ತಿಯನ್ನು ಸಾಧನವಾಗಿಯೂ ಹಿಂದೆ ಹೇಳಿದೆ. ಆದರೆ ಆ ಸಾಧನರೂಪವಾದ ಭಕ್ತಿಯು ಮುಖ್ಯಭಕ್ತಿಯಲ್ಲವೆಂಬುದನ್ನು ನೆನಪಿದಲ್ಲಿಡಬೇಕು. ಈಗ ಫಲವಾಗಿ ಹೇಳಿರುವದು ಪರಮಾತ್ಮನ ಸ್ವರೂಪಜ್ಞಾನದಿಂದಾಗುವ ಪರಮಪ್ರೇಮರೂಪವಾದ ಪರಭಕ್ತಿಯು. ವಿಷಯಗಳಲ್ಲಿ ಅನಾಸಕ್ತಿಯಾಗುತ್ತಾ ಹೋದಹಾಗೆಲ್ಲ ಮನಃಶಾಂತಿಯಾಗುವದು ; ಮತ್ತು ಮನಃಶಾಂತಿಯುಂಟಾದಹಾಗೆಲ್ಲ ವಿಷಯಗಳಲ್ಲಿ ಅನಾಸಕ್ತಿಯೂ ಹೆಚ್ಚುವದು. ಆದ್ದರಿಂದ ಒಂದನ್ನೊಂದು ಆಶ್ರಯಿಸಿಕೊಂಡಿರುವ ಇವೆರಡೂ ಸೇರಿ ಒಂದೇ ಪ್ರಯೋಜನವೆಂಬುದೇ ಇಲ್ಲಿ ತಿಳಿಯಬೇಕಾದ ರಹಸ್ಯವು.

ಈ ಸ್ತೋತ್ರವನ್ನು ಹೇಳುತ್ತಾ ಅರ್ಥವನ್ನು ಮನಸ್ಸಿಗೆ ತಂದುಕೊಂಡು ಇಲ್ಲಿ ಹೇಳಿರುವ ಸಾಧನಗಳನ್ನು ಸಂಪಾದಿಸಿಕೊಳ್ಳುವಾತನಿಗೆ ಈ ಪರಮಪ್ರಯೋಜನವು ಉಂಟಾಗುವದೆಂಬುದೇ ಶ್ಲೋಕದ ಅಭಿಪ್ರಾಯವು.

---

5-3-1989, 1000 ಪ್ರತಿಗಳು. ಅಧ್ಯಾತ್ಮಪ್ರಕಾಶ ಮುದ್ರಣಾಲಯ, ಹೊ.ನ.ಪುರ.

# ಪರಮಾತ್ಮನಲ್ಲಿ ಪ್ರೇಮವನ್ನು ಉಕ್ಕೇರಿಸುವ
# ಕೆಲವು ಸ್ತೋತ್ರಗ್ರಂಥಗಳು

**ಗಣೇಶಾಷ್ಟಕ :** ಗಣೇಶಪುರಾಣದಿಂದ ಆರಿಸಿದ ಸ್ತೋತ್ರವಿದು. ಈ ಪ್ರಪಂಚವೆಲ್ಲವೂ ಬ್ರಹ್ಮವೇ ಎಂಬ ಉಪನಿಷತ್ಸಿದ್ಧಾಂತವನ್ನು ಮನೋಹರವಾದ ರೀತಿಯಿಂದ ವಿವರಿಸಿರುವ ಈ ಸ್ತೋತ್ರಕ್ಕೆ ತಿಳಿಗನ್ನಡದ ಭಾವಾರ್ಥವನ್ನೂ ವಿವರಣೆಯನ್ನೂ ಜೋಡಿಸಿದೆ. ಪುಟ ೪ + ೨೬.

**ಸ್ತೋತ್ರಮಾಲಾ :** ( ಭಾಗ-೧ ) ಇದರಲ್ಲಿ (೧) ಅನುಸ್ಮೃತಿ (೨) ಗಜೇಂದ್ರಮೋಕ್ಷ (೩) ಭೀಷ್ಮಸ್ತವರಾಜ (೪) ಹರಿಶರಣಾಷ್ಟಕ (೫) ಆದಿತ್ಯಹೃದಯ- ಈ ಐದು ಸ್ತೋತ್ರಗಳನ್ನೂ ಅರ್ಥಸಮೇತ ಕೊಟ್ಟಿದೆ. ಹರಿಶರಣಾಷ್ಟಕಕ್ಕೆ ವಿವರಣೆಯೂ ಇದೆ. ಪುಟಗಳು : ೧೦೨.

**ಶಿವಮಹಿಮ್ನಃಸ್ತೋತ್ರ** ಗಂಧರ್ವರಾಜನಾದ ಪುಷ್ಪದಂತನು ರಚಿಸಿದ ಸ್ತೋತ್ರವಿದು. ಮೂಲ, ಪ್ರತಿಪದಾರ್ಥ, ತಾತ್ಪರ್ಯವಿವರಣೆ- ಇವುಗಳಿಂದ ಕೂಡಿದ್ದು ಶಿವಭಕ್ತರಿಗೆಲ್ಲ ಪ್ರಿಯವಾಗಿದೆ. ಪುಟ ೪ + ೫೮.

**ಶ್ರೀರಾಮಗೀತೆ :** ಅಧ್ಯಾತ್ಮರಾಮಾಯಣದಿಂದ ಆರಿಸಿದ ಭಾಗವಿದು. ಜ್ಞಾನಕ್ಕೆ ಭಕ್ತಿಯೇ ಸಾಧನವೆಂದು ಇಲ್ಲಿ ಪ್ರತಿಪಾದಿಸಿದೆ. ಭಾವಾರ್ಥ, ಟಿಪ್ಪಣಿ-ಶ್ಲೋಕಾನುಕ್ರಮಣಿಕೆಗಳನ್ನು ಕೊಟ್ಟಿದೆ.

ಪುಟ ೪ + ೩೨.

ಪೂರ ಬೆಲೆಪಟ್ಟಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

**ಕಾರ್ಯದರ್ಶಿ,**

ಅಧ್ಯಾತ್ಮಪ್ರಕಾಶಕಾರ್ಯಾಲಯ, ಹೊಳೆನರಸೀಪುರ.